ದುಡಿವ ಜನರ ಪ್ರಾಣ ಮಿತ್ರ

ಐಕ್ಯರಂಗ

ಸಂಪುಟ 25 ಸಂಚಿಕೆ 45
ನವಂಬರ್ 9, 2003 ಬೆಲೆ ರೂ. 3.00




ಸಮಗ್ರ ಕರ್ನಾಟಕ ಉಳಿಯುವುದೆಂತು ?



ಆಂತೋನಿ ಸರ್ಕಾರಕ್ಕೆ ಅಂತ್ಯ ಕಾಲವೇ?



ಬಾಬಾಬುಡನ್‌ಗಿರಿ : ದಳ್ಳುರಿ ಹಬ್ಬಿಸುವ ತಯಾರಿ



ಇರಾಕ್ : ಅಮೆರಿಕಾ ಸೈನ್ಯಕ್ಕೆ ಭಾರಿ ತಿರುಗೇಟು



ಕರ್ನಾಟಕಕ್ಕೆ ಕಾಲಿಟ್ಟ ಹೆಮ್ಮಾರಿ

ವಿಮೋಚನಾ ಸಮರದಲ್ಲಿ....



ಮೇಜರ್ ಜಯಪಾಲ್ ಸಿಂಗ್

ಆತ್ಮಕಥನ

50

ಕಳೆದ ಸಂಚಿಕೆಯಲ್ಲಿ ಕಾಡು-ಮೇಡುಗಳಲ್ಲಿ ಪಯಣಿಸುತ್ತಿದ್ದ ಹೋರಾಟಗಾರರ ತಲೆಯ ಮೇಲೆ ಸತತ ಸುರಿಯುತ್ತಿದ್ದ ಮಳೆ, ಬಿರುಗಾಳಿ ಮತ್ತು ಮಳೆಯನ್ನು ಸ್ವಾಗತಿಸುತ್ತಿದ್ದ ತೆಲಂಗಾಣ ವೀರರು, ಅವರು ಎಂತಹ ಕಷ್ಟವನ್ನು ಎದುರಿಸಿ ತಮ್ಮ ಜನರ ಸೇವೆಗೆ ದೃಢ ನಿಶ್ಚಯ ಮತ್ತು ಒಂದೇ ರಾತ್ರಿ ಬಿಡುವಿಲ್ಲದೆ 20 ಮೈಲಿ ನಡೆದು ಬೆಟ್ಟದ ತುದಿ ತಲುಪಿದ ಬಗ್ಗೆ ಓದಿರುವಿರಿ. ಮುಂದೆ..



ಕನ್ನಡಕ್ಕೆ: **ವಿಶ್ವ ಕುಂದಾಪುರ**

ಸಾವಿಗೆ ಸೆಡ್ಡು ಹೊಡೆದ ತರುಣ ಬಳಗ

ಈ ಕಾರ್ಯಾಚರಣೆಯ ರಂಗಮಂದಿರದಲ್ಲಿ ಸಾವು ಜೀವನದ ವಿರುದ್ಧ ತನ್ನೆಲ್ಲ ಶಕ್ತಿಗಳೊಂದಿಗೆ ವ್ಯೂಹವನ್ನು ರಚಿಸಿದೆ. ಸೊಳ್ಳೆಗಳು, ತಿಗಣೆಗಳು, ವಿಷಯುಕ್ತ ಕ್ರಿಮಿಕೀಟಗಳು, ಹಾವುಗಳು ತುಂಬಿರುವ ಬೆಟ್ಟಗಳು, ಬಿರುಗಾಳಿ, ಮಳೆ ಮತ್ತು ಚಳಿ ಹಾಗೂ ಅಪಾಯಕಾರಿ ಪ್ರಯಾಣದ ರಾತ್ರಿಗಳು, ಮಳೆ ಮತ್ತು ಚಳಿ ಹಾಗೂ ಅಪಾಯಕಾರಿ ಪ್ರಯಾಣದ ರಾತ್ರಿಗಳು, ಹಗಲುಹೊತ್ತಿನಲ್ಲಿ ವೈರಿಗಳು ದಯೆದಾಕ್ಷಿಣ್ಯವಿಲ್ಲದೆ ದಬ್ಬಾಳಿಕೆ ನಡೆಸುವ ಭೀತಿ... ಈ ರೀತಿಯಾಗಿ ಸುತ್ತಮುತ್ತಲೆಲ್ಲ ಸಾವಿನ ಶಕ್ತಿಗಳೇ ತುಂಬಿದ್ದ ಅಂಥ ಸನ್ನಿವೇಶವನ್ನು ಈ ತರುಣರು ಎದುರಿಸುತ್ತಿದ್ದರು. 'ವೈದ್ಯಕೀಯ ನೆರವು' ಸಿಗುವ ಮಾತೇ ಇಲ್ಲ, ಗುಡಾರಗಳಿಲ್ಲ, ಗುಡಿಸಲುಗಳಾಗಲೀ ಮನೆಗಳಾಗಲೀ ಇವರ ರಕ್ಷಣೆಗೆ ಇಲ್ಲ. (ಸಂಖ್ಯೆಯಲ್ಲೂ ಶಸ್ತ್ರಾಸ್ತ್ರಗಳಲ್ಲೂ ವೈರಿಗಳ ಮುಂದೆ ಇವರ ಬಲ ಕಡಿಮೆಯಾಗಿತ್ತು. ಆದಾಗ್ಯೂ ಈ ಸಂಗಾತಿಗಳೊಂದಿಗೆ ಕಳೆದ ಒಂಬತ್ತು ತಿಂಗಳು, ಸಾವಿನ ವಿರುದ್ಧ ಮೇಲುಗೈ ಸಾಧಿಸಲು ಜೀವನ ಪ್ರಯತ್ನಿಸುತ್ತಿದೆ. ಮುಂದೆಯೂ ಹೀಗೆಯೇ ಮುಂದುವರಿಯುತ್ತದೆ ಎಂಬುದು ನನಗೆ ಮನವರಿಕೆಯಾಯಿತು.

ಈ ಸಂಗಾತಿಗಳು ಬದುಕುಳಿದರು ಹಾಗೂ ಅವರ ಸಂಖ್ಯೆ ಹೆಚ್ಚಾಯಿತು ಎನ್ನುವುದು ನನ್ನ ಈ ಮೇಲಿನ ಹೇಳಿಕೆಗೆ ಪುಷ್ಟಿ ನೀಡುತ್ತದೆ. ಈ ಸಂಗಾತಿಗಳಲ್ಲಿ ಸದಾ ತುಂಬಿ ತುಳುಕುತ್ತಿರುವ ಉತ್ಸಾಹವೂ ಇನ್ನೊಂದು ಸ್ಪಷ್ಟ ಅಭಿವ್ಯಕ್ತಿಯಾಗಿದೆ. ಹೊಳೆಯುವ ಹಲ್ಲುಗಳು, ತಾರುಣ್ಯ ತುಂಬಿದ ಆತ್ಮೀಯ ನಗು, ಇತರರ ಅರಾಜಕ ಹವ್ಯಾಸಗಳ ಬಗ್ಗೆ ಅಪಾಯವಿಲ್ಲದೆ ಚಿವುಟುವುದು, ನೈತಿಕತೆ ಕುಸಿದ ವೈರಿಯ ಅಂಶಗಳ ಬಗ್ಗೆ ಹರಟೆ - ಇವೆಲ್ಲವೂ ನಿದ್ದೆಯಿಲ್ಲದೆ ರಾತ್ರಿ ಕಳೆದ ನಂತರದ ಚಟುವಟಿಕೆಗಳು.

ತಮ್ಮ ಸಾಧನೆಗಾಗಿ ಯಾರದೇ 'ಮೆಚ್ಚುಗೆ'ಯನ್ನು ನಿರೀಕ್ಷಿಸದೆ, ಯಾವುದೇ ದೂರುಗಳಿಲ್ಲದ, ದೊಡ್ಡವರೇ ಆಗಲಿ-ಚಿಕ್ಕವರೇ ಆಗಲಿ ತಮ್ಮ ವಿರುದ್ಧ ಬಂದ ಟೀಕೆಗಳನ್ನು ಉತ್ತಮ ಸ್ಫೂರ್ತಿಯಿಂದ ಸ್ವೀಕರಿಸುವ ಈ ತರುಣರು ಅತ್ಯುತ್ಸಾಹ ಹಾಗೂ ದೃಢ ನಿರ್ಧಾರದ ವಾತಾವರಣದಲ್ಲಿ ಸರ್ವಶಕ್ತಿಗಳ ವಿರುದ್ಧ ಸೆಣಸಾಟ ಮುಂದುವರಿಸಿದರು.

ತಮ್ಮ ಸಾಧನೆಗಾಗಿ ಯಾರದೇ 'ಮೆಚ್ಚುಗೆ'ಯನ್ನು ನಿರೀಕ್ಷಿಸದೆ, ಯಾವುದೇ ದೂರುಗಳಿಲ್ಲದ, ದೊಡ್ಡವರೇ ಆಗಲಿ-ಚಿಕ್ಕವರೇ ಆಗಲಿ ತಮ್ಮ ವಿರುದ್ಧ ಬಂದ ಟೀಕೆಗಳನ್ನು ಉತ್ತಮ ಸ್ಫೂರ್ತಿಯಿಂದ ಸ್ವೀಕರಿಸುವ ಈ ತರುಣರು ಅತ್ಯುತ್ಸಾಹ ಹಾಗೂ ದೃಢ ನಿರ್ಧಾರದ ವಾತಾವರಣದಲ್ಲಿ ಸರ್ವಶಕ್ತಿಗಳ ವಿರುದ್ಧ ಸೆಣಸಾಟ ಮುಂದುವರಿಸಿದರು.

ಇಂಥ ಉತ್ಸಾಹವಿದ್ದರೂ ಸಾವಿನ ನಡುವೆಯೂ ಜೀವನವನ್ನು ಸಾಗಿಸುವಾಗ ನನಗಂತೂ ಸನ್ನಿವೇಶದ ಕಟುವಾಸ್ತವತೆಯನ್ನು ಅನುಭವಿಸದೆ ಇರಲಾಗಲಿಲ್ಲ. ಕಾಲುಗಳು ನೋಯುತ್ತಿದ್ದವು. ನಿದ್ದೆಯಿಂದ ರಾತ್ರಿಯಿಂದಾಗಿ ಕಣ್ಣುಗಳು ಭಾರವಾಗಿದ್ದವು.

ನಾವಿದ್ದ ಪ್ರದೇಶದ ಸುತ್ತಮುತ್ತ ಇದ್ದ ವೈರಿಗಳ ತಾಣವನ್ನು ತೋರಿಸಲು ಸಾಗರ್ ನನ್ನನ್ನು ಒಂದು ಬೆಟ್ಟದ ತುದಿಗೆ ಕರೆದುಕೊಂಡು ಹೋಗಿದ್ದರು. ಆಗ ಸೂರ್ಯ ನೆತ್ತಿಯ ಮೇಲೆ ಸುಡುತ್ತಿದ್ದ, ಕಣಿವೆಯಿಂದ ಮರಳು ಗಾಳಿ ಬೀಸಿಬಂದಿತು.

ನಾವು ದೊಡ್ಡ ಬಂಡೆಯೊಂದರ ಹಿಂದೆ ನಿಂತು ಒಂದು ಇಂಗ್ಲಿಷ್ ಬೈನಾಕ್ಯುಲರ್‌ನಿಂದ ಹಳ್ಳಿಗಾಡಿನ ವೀಕ್ಷಣೆ ನಡೆಸಿದ್ದೆವು. ಆ ದೂರದರ್ಶಕವನ್ನು ನಮ್ಮ ಗೆರಿಲ್ಲಾಗಳು ಶತ್ರುಗಳಿಂದ 'ಮುಟ್ಟುಗೋಲು ಹಾಕಿಕೊಂಡಿದ್ದರು.

ನಮ್ಮ ಕಣ್ಣ ಮುಂದೆ ಬೋಳು ಬೆಟ್ಟಗಳ ಸಾಲೇ ಹಬ್ಬಿತ್ತು. ಅವುಗಳ ಮೇಲೆ ಕುರಿ, ಆಡು,ದನಗಳು ಮೇಯುತ್ತಿದ್ದವು. ಕೆಳಗಡೆ ಗದ್ದೆಗಳಲ್ಲಿ ರೈತರು ಕಾಯಕ ನಿರತರಾಗಿದ್ದರು. ಸೊಂಟದವರೆಗೆ ಬಟ್ಟೆಯುಟ್ಟು; ತಲೆಯ ಮೇಲೆ ಕೆಂಪು ರುಮಾಲು ಸುತ್ತಿಕೊಂಡು ಕೆಲಸ ಮಾಡುತ್ತಿದ್ದರು. ದನ, ಕುರಿ ಕಾಯುವವರು ಬಂಡೆಗಳ ಮೇಲೆ ಕುಳಿತು ಆಗಾಗ ಕೂಗುತ್ತಾ ತಮ್ಮ ದನ-ಕರುಗಳ ಗುಂಪುಗಳನ್ನು ನಿಯಂತ್ರಿಸುತ್ತಿದ್ದರು.

'ಈಗ ಅಲ್ಲಿ ನೋಡಿ' ಎನ್ನುತ್ತಾ ಸಾಗರ್ ವಿವರಿಸತೊಡಗಿದರು. 'ನಮ್ಮ ಸುತ್ತ ಈಗ ನೂರಾರು ಜನರಿದ್ದಾರೆ. ಗುಡ್ಡಗಳಲ್ಲಿ ದನಗಾಹಿಗಳಿದ್ದಾರೆ, ಹೊಲಗಳಲ್ಲಿ ರೈತರಿದ್ದಾರೆ. ನಾವು ಎಲ್ಲಿದ್ದೇವೆ, ಏರಿಯಾ ಹೆಡ್‌ಕ್ವಾರ್ಟರ್ಸ್ ಎಲ್ಲಿದೆ ಎನ್ನುವುದು ಅವರಿಗೆ ಗೊತ್ತು. ಈ ಬೆಟ್ಟಗಳಲ್ಲಿ ನಮ್ಮ ಸುತ್ತ ಎರಡು ಚದರ ಮೈಲಿ ಪ್ರದೇಶವ್ಯಾಪ್ತಿಯಲ್ಲಿ ಕನಿಷ್ಠ ಪಕ್ಷ ನೂರು ಸಂಗಾತಿಗಳಿದ್ದಾರೆ. ನಾವು ಆಹಾರ ಬೇಯಿಸಿಕೊಳ್ಳುತ್ತೇವಲ್ಲದೆ, ಆಗ ಬರುವ ಹೊಗೆಯಿಂದ ನಾವಿರುವ ಕೇಂದ್ರವನ್ನು ರೈತರು ಮತ್ತು ದನಗಾಹಿಗಳು ತಿಳಿಯುತ್ತಾರೆ. ಅವರಿಂದ ನಮ್ಮನ್ನು ನಾವು ಮುಚ್ಚಿಟ್ಟುಕೊಳ್ಳಲು ಸಾಧ್ಯವೇ ಇಲ್ಲ. ಆದರೂ ಅವರು ನಮ್ಮ ಇರುವಿಕೆಯನ್ನು ಬಿಟ್ಟುಕೊಡುವುದಿಲ್ಲ. ಶತ್ರುಗಳಿಗಂತೂ ನಮ್ಮ ಸುಳಿವನ್ನು ನೀಡುವುದೇ ಇಲ್ಲ. ಅಷ್ಟೇ ಅಲ್ಲದೆ ಸುಳ್ಳು ದಾರಿಗಳನ್ನು ತೋರಿಸಿ ಶತ್ರುಗಳ ಹಾದಿ ತಪ್ಪಿಸಿ ನಮಗೆ ನೆರವಾಗುತ್ತದೆ.

ನಮ್ಮ ತಾಣದ ಹೊಗೆಯನ್ನು ಅಡಗಿಸಲು ಅವರು ಬೆಂಕಿ ಹಾಕಿ ಹೊಗೆಯೆಬ್ಬಿಸಿ ವೈರಿಗಳಲ್ಲಿ ಗೊಂದಲ ಹುಟ್ಟಿಸುತ್ತಾರೆ.

(ಮುಂದುವರಿಯುತ್ತದೆ)

ಇಂದಿಗಾಗಿ ನಾಳಿನ ಕಾರ್ಯಕ್ರಮಗಳು

- **ನವೆಂಬರ್ 6 ರಿಂದ 9**
  ಡಿವೈಎಫ್ಐ ಅಖಿಲ ಭಾರತ ಸಮ್ಮೇಳನ, ಅಮೃತಸರ, ಪಂಜಾಬ್
- **ನವೆಂಬರ್ 10 ರಿಂದ 17**
  ರೇಷನ್ ಕಾರ್ಡ್ ನೀಡಿಕೆಗಾಗಿ, ರೈತರ ಆತ್ಮಹತ್ಯೆ ಮತ್ತು ಹಸಿವಿನ ಸಾವುಗಳನ್ನು ತಡೆಯಲು ಒತ್ತಾಯಿಸಿ ಪ್ರಚಾರಾಂದೋಲನ
  ನವೆಂಬರ್ 10 - ಉದ್ಘಾಟನೆ - ದಿನವಿಡೀ ಧರಣಿ
  ನವೆಂಬರ್ 17 - ಸರ್ಕಾರಿ ಕಛೇರಿಗಳ ಪಿಕೆಟಿಂಗ್
- **ನವೆಂಬರ್ 10, 11**
  ಮಳವಳ್ಳಿ ತಾಲ್ಲೂಕು ಕೃಷಿಕೂಲಿಕಾರರ 2ನೇ ಸಮ್ಮೇಳನ ಬೆಳಿಗ್ಗೆ 10.30 ಕ್ಕೆ. ಸರ್ಕಾರಿ ಬಾಲಕಿಯರ ಪ್ರೌಢಶಾಲೆ ಆವರಣ, ಮಳವಳ್ಳಿ.
  ಉದ್ಘಾಟನೆ - ಜಿ.ಕೆ.ಗೋವಿಂದರಾವ್
  ಮುಖ್ಯಅತಿಥಿಗಳು- ಜಿ.ಎನ್.ನಾಗರಾಜ್, ಮತ್ತಿತರರು
- **ನವೆಂಬರ್ 11**
  ಹಂಪಿ ವಿವಿ.,
  ಜರ್ನಲ್ ಆಫ್ ಕರ್ನಾಟಕ ಸ್ಟಡೀಸ್, ನಿಯತಕಾಲಿಕ ಬಿಡುಗಡೆ 'ನಯನ', ಬೆಂಗಳೂರು.

ಐಕ್ಯರಂಗ

40 ವರ್ಷಗಳ ಹಿಂದೆ

ಬೆಂಗಳೂರಿನಲ್ಲಿ ಪಾರ್ಟಿ ಕಾರ್ಯಕರ್ತರ ಬಂಧನ

ಇದೇ ತಾ.20.21 ರಂದು ಬೆಂಗಳೂರಿನ ಕಮ್ಯುನಿಸ್ಟ್ ಕಾರ್ಯಕರ್ತರಾದ ಎಲ್.ಆರ್. ಭೂತೆ, ಮುನಿರತ್ನಂ, ಎಸ್.ರಾಮಕೃಷ್ಣ ಮತ್ತು ಎ.ನಾಗೇಶ್ವರ ರಾಯರನ್ನು ರಕ್ಷಣಾ ನಿಯಮಗಳ ಪ್ರಕಾರ ವಿನಾ ಕಾರಣ ಬಂಧಿಸಲಾಗಿದೆಯೆಂದು ತಿಳಿದು ಬರುತ್ತದೆ. ಮೈಸೂರು ಸರಕಾರದ ಈ ಉದ್ರೇಕಕಾರೀ ಕೃತ್ಯವು ಖಂಡನೀಯವಿದೆ.

ತಾ.2-10-65 ರಿಂದ ಭೂಸುಧಾರಣಾ ಕಾಯಿದೆ ಜಾರಿಗೆ ಬರುವುದು

ಇದೀಗ 4 ವರ್ಷಗಳ ಬಳಿಕ ಮೈಸೂರು ಭೂಸುಧಾರಣಾ ಕಾಯಿದೆಯು "ದಿಲ್ಲಿ" ಯಿಂದ "ಹಳ್ಳಿ"ಗೆ ಹೊರಡುವುದಾಗಿ ಮೈಸೂರು ಮಂತ್ರಿಗಳು ಸಾರಿದ್ದಾರೆ. ಕಾಯಿದೆಯು ತಾ.2-10-65 ರಂದು ಜಾರಿಗೊಳ್ಳುವುದಾಗಿ ಪ್ರಕಟಣೆಯೊಂದು ತಿಳಿಸುತ್ತದೆ.

ದಶರಥ್ ದೇಬ್ ತೀವ್ರ ಅಸ್ವಸ್ಥ ಜೈಲಿನಿಂದ ಆಸ್ಪತ್ರೆಗೆ ಸೇರಿಸಲಾಗಿದೆ

ತ್ರಿಪುರದ ಕಮ್ಯುನಿಸ್ಟ್ ಮುಖಂಡರು, ಪಾರ್ಲಿಮೆಂಟ್ ಸದಸ್ಯರೂ ಆದ ದಶರಥ ದೇಬ್, ಅಸೆಂಬ್ಲಿ ವಿರೋಧ ಪಕ್ಷದ ಮುಖಂಡ ನೃಪೆನ್ ಚಕ್ರವರ್ತಿ, ತ್ರಿಪುರಾ ಪ್ರಾಂತ ಸಮಿತಿ ಸದಸ್ಯ ಸರೋಜ್ ಚಂದಾ ಇವರು ಭಾರತ ರಕ್ಷಣಾ ಕಾನೂನಿನನ್ವಯ ಬಿಹಾರದ ದುಮ್ಕಾ ಜೈಲಿನಲ್ಲಿ ಬಂಧನದಲ್ಲಿದ್ದು ಮೂವರೂ ತೀರಾ ಅನಾರೋಗ್ಯದಿಂದಿದ್ದು, ಅವರ ದೇಹದ ಪರಿಸ್ಥಿತಿಯು ತುಂಬಾ ಅಪಾಯಕಾರಿಯಾಗಿ ಪರಿಣಮಿಸಿದುದರಿಂದ ಸರಕಾರ ಇದೀಗ ಅವರನ್ನು ರಾಜೇಂದ್ರ ಮೆಡಿಕಲ್ ಆಸ್ಪತ್ರೆಗೆ ಸೇರಿಸಿದೆ. ದಶರಥ ದೇಬ್ ರವರ ಬೆನ್ನೆಲುಬಿಗೆ ಪ್ಲಾಸ್ಟರ್ ಹಾಕಿದ್ದು, ಅವರೂ ಅತ್ತಿತ್ತ ಚಲಿಸಲೂ ಅಸಾಧ್ಯದ ಸ್ಥಿತಿಯಲ್ಲಿದ್ದಾರೆ.

ಎನ್.ಜಿ.ಓ. ಸಂಘದ ಅಧ್ಯಕ್ಷೆ ಮೇರಿ ದೇವಾಸಿಯಾ ಅರ್ಜಿ ತಿರಸ್ಕೃತ

ಎನ್‌ಜಿಓ ಸಂಘದಲ್ಲಿ ಕ್ರಿಯಾಶೀಲವಾಗಿ ದುಡಿಯುತ್ತಿದ್ದು, ಸರಕಾರಿ ನೌಕರರ ಹಕ್ಕುಬಾಧ್ಯತೆಗಳನ್ನು ರಕ್ಷಿಸಲು ಸರಕಾರಿ ನೌಕರರ ಸಂಘಟನೆಯನ್ನು ಬಲಪಡಿಸಿದ ಶ್ರೀಮತಿ ಮೇರಿ ದೇವಾಸಿಯಾರನ್ನು ಸರಕಾರವು ಕೆಲಸದಿಂದ ತೆಗೆದು ಹಾಕಿದುದರ ವಿರೋಧವಾಗಿ ಸರಕಾರೀ ನೌಕರರು ತಮ್ಮ ಪ್ರತಿಭಟನೆಯನ್ನು ಸಲ್ಲಿಸಿ, ತಮ್ಮ ಸಂಘದ ಅಧ್ಯಕ್ಷೆಯನ್ನು ಪುನ: ಕೆಲಸಕ್ಕಿಡ ಬೇಕೆಂದು ಸರಕಾರವನ್ನು ಒತ್ತಾಯಿಸುತ್ತಾ ಬಂದಿದ್ದರೂ ಸರಕಾರ ಈ ಬಗ್ಗೆ ಗಮನ ಕೊಡದೆ ತನ್ನ ಸರ್ವಾಧಿಕಾರೀ ನೀತಿಯನ್ನೇ ಮುಂದುವರಿಸಿದೆ.

ಪ್ರಧಾನಿಗಳಿಗೆ ಎ.ಕೆ.ಗೋಪಾಲನರ ಪತ್ರ

ರಕ್ಷಣಾ ಕಾರ್ಯಗಳಲ್ಲಿ ನೆರವಾಗುವ ಸಲುವಾಗಿ ಬಂಧಿತರ ಬಿಡುಗಡೆಯಾಗುವಂತೆ ಕಾಂ। ಎ.ಕೆ.ಗೋಪಾಲನ್ ಎಂ.ಪಿ. ಇವರು ಇತ್ತೀಚೆಗೆ ತಿಹಾರ್ ಜೈಲಿನಿಂದ ಪ್ರಧಾನಿ ಶಾಸ್ತ್ರಿಯವರಿಗೆ ಬರೆದು ಪತ್ರ ಹೀಗಿದೆಯೆಂದು ತಿಳಿದು ಬಂದಿದೆ.

"ನಾನೊಬ್ಬ ಪಾರ್ಲಿಮೆಂಟಿನ ಹಳೆಯ ಸದಸ್ಯನಾಗಿಯೂ ಪಾರ್ಲಿಮೆಂಟಿನೊಳಗಿನ ವಿರೋಧ ಗುಂಪುಗಳಲ್ಲೊಂದರ ನಾಯಕನಾಗಿಯೂ ನಿಮ್ಮಲ್ಲಿ ವಿನಂತಿಸಿಕೊಳ್ಳುತ್ತೇನೆ. ಸ್ಥಾನಬದ್ಧತೆಯಲ್ಲಿರುವ ಎಲ್ಲರನ್ನೂ ಬಿಡುಗಡೆ ಮಾಡಿರಿ, ಆಹಾರ ಚಳವಳಿ ಮತ್ತಿತರ ಜನತೆಯ ಸಮಸ್ಯೆಗಳ ಸಂಬಂಧದ ಹೋರಾಟಗಳಲ್ಲಿ ಬಂಧಿಸಲ್ಪಟ್ಟವರನ್ನು ಬಿಡುಗಡೆಗೊಳಿಸಿರಿ. ಅಪಾಯಕರವಾದ ಈ ಸಮಯದಲ್ಲಿ ಜನತೆ ತಮ್ಮ ಕರ್ತವ್ಯವನ್ನು ನೆರವೇರಿಸಲು ಇದರಿಂದ ವಿಶ್ವಾಸ ಮೂಡಿ ಬರುವುದೆಂದು ನಾನು ನಂಬುತ್ತೇನೆ......."

ಉತ್ತರ ವಿಯೆಟ್ನಾಮಿನಲ್ಲಿ 557 ಅಮೇರಿಕಾ ವಿಮಾನಗಳ ನಾಶ

ಕಳೆದ ಅಗೋಸ್ತು ತಿಂಗಳಿಂದ ಸಾಮ್ರಾಜ್ಯಶಾಹಿ ಅಮೇರಿಕಾ ಜನವಾದೀ ಉತ್ತರ ವಿಯೆಟ್ನಾಮಿನ ಮೇಲೆ ವಿಮಾನ ಧಾಳಿ ಪ್ರಾರಂಭಿಸಿದ್ದು ಉತ್ತರ ವಿಯೆಟ್ನಾಮಿನ ಜನತೆ ಕಳೆದ ಅಗೋಸ್ತು 5 ರಿಂದ ಸಪ್ಟಂಬರ 14 ರ ತನಕ 557 ಅಮೇರಿಕನ್ ವಿಮಾನಗಳನ್ನು ಗುಂಡಿಟ್ಟು ಉರುಳಿಸಿದ್ದಾರೆ.

ಕಮ್ಯುನಿಸ್ಟ್ ಕಾರ್ಯಕರ್ತ ಅಹಮ್ಮದುಲ್ಲಾ ಖಾನ್‌ರ ಬಂಧನ

ಭಾರತ ರಕ್ಷಣಾ ನಿಯಮಗಳಿಗನುಸಾರವಾಗಿ ಕಮ್ಯುನಿಸ್ಟ್ ಕಾರ್ಯಕರ್ತ ಅಹಮ್ಮದುಲ್ಲಾ ಖಾನರನ್ನು ತಾ.22 ರಂದು ಬೆಂಗಳೂರಿನಲ್ಲಿ ಬಂಧಿಸಲಾಗಿದೆ. ಸರಕಾರ ಈ ರೀತಿ ವಿನಾಕಾರಣ ಬಂಧನಸತ್ರ ನಡೆಸುವುದು ತೀರಾ ಖಂಡನೀಯ [illegible] ...

'ಗೋಮಾಂಸ' ಹಿಂದುತ್ವದ ತಾಲಿಬಾನ್‌ಗಳ ಅರಚಾಟ

'ಗೋವಮಾಂಸ ತಿನ್ನುವವರ ನಾಲಗೆ ಕತ್ತರಿಸುತ್ತೇವೆ' ಮುಂದೆ ಕರ್ನಾಟಕದಲ್ಲಿ ಅಧಿಕಾರಕ್ಕೆ ಬಂದರೆ ಅಂತಹವರ ತಲೆ ಕಡಿಯುತ್ತೇವೆ' ಎಂದು ಬೊಬ್ಬಿಟ್ಟಿದೆ ಚಿಡ್ಡಿಪಡೆ. ಇಂತಹ ಹೇಳಿಕೆ ಬಂದದ್ದು 'ಹಿಂದುತ್ವ'ದ ವೈರಸ್‌ಗೆ ಬಲಿಯಾಗಿ ಅಪಸ್ಮಾರದ ಉನ್ಮಾದದಿಂದ ಕಿರುಚಾಡಿದ ಬಜರಂಗದಳದ ಕ್ರಿಮಿನಲ್ ಪಡೆಯ ಸಾಮಾನ್ಯ ಕಾರ್ಯಕರ್ತನಲ್ಲ. ಈಗೀಗ ಬಹಿರಂಗವಾಗಿಯೇ ಇಂತಹ ಹುಚ್ಚು ಅರಚಾಟಗಳಿಗೆ ಇಳಿದಿದ್ದಾರೆ ಬಿಜೆಪಿ ನಾಯಕರು. ತಾವೊಬ್ಬ ಪ್ರಜಾತಂತ್ರದ ವ್ಯವಸ್ಥೆಯಲ್ಲಿ ಬದುಕುತ್ತಿರುವ, ನೋಂದಾಯಿತ ರಾಷ್ಟ್ರಮಟ್ಟದ ರಾಜಕೀಯ ಪಕ್ಷಕ್ಕೆ ಸೇರಿದವರು ಎಂಬ ಕಿಂಚಿತ್ತೂ ಜವಾಬ್ದಾರಿ ಇಲ್ಲದ; ಬಿಜೆಪಿ ಮಾಜಿ ಅಧ್ಯಕ್ಷರಾಗಿದ್ದ, ಶಾಸಕರಾಗಿದ್ದ ಕೇಂದ್ರದ ರೇಷ್ಮೆ ಮಂಡಳಿ ಅಧ್ಯಕ್ಷರಾಗಿರುವ ಈಶ್ವರಪ್ಪನವರು ಹೀಗೆ ಹೇಳುತ್ತಿದ್ದಾರೆ. ಈಗಿಗಂತೂ ಎಸ್.ಎಲ್. ಬೈರಪ್ಪನವರಂತಹ ಸಾಹಿತಿಗಳು, ಚಿಮೂ ನಂತಹ ಸಂಶೋಧಕರು ತಮ್ಮ ಬಚ್ಚಿಟ್ಟುಕೊಂಡಿದ್ದ ಚಿಡ್ಡಿ ಸಿದ್ಧಾಂತವನ್ನು ಮೆಲ್ಲಮೆಲ್ಲನೇ ಬಹಿರಂಗವಾಗಿ ಸಾರುತ್ತಿದ್ದಾರೆ. ಅಸಂಬದ್ಧತೆಯನ್ನು ಸಮರ್ಥಿಸಿಕೊಳ್ಳಲು ಹೆಣಗುತ್ತಿದ್ದಾರೆ. ಬಿಜೆಪಿ ನಾಯಕಗಣವೂ ಫ್ಯಾಸಿಸ್ಟ್ ಅಜೆಂಡಾವನ್ನು ಬಿಚ್ಚಿಡುತ್ತಿದೆ.

ಮನು ಮಕ್ಕಳು

ಗೋವಮಾಂಸ ತಿನ್ನುವವರು ಕೇವಲ ಮುಸ್ಲಿಮರು ಮಾತ್ರ ಎಂದೂ ಅದಕ್ಕೂ ಆಹಾರ ಅಭ್ಯಾಸಕ್ಕೂ ಕೋಮುದ್ವೇಷದ ವಿಷ ಲೇಪಿಸುತ್ತಿದ್ದಾರೆ. ಭಾರತದಂತಹ ಈ ವೈವಿಧ್ಯ ದೇಶದಲ್ಲಿ ಖಾವಿ ಪಡೆ ಹೇಳುವ 'ಹಿಂದೂ ಒಂದು ಬಂಧು' ಎಂಬ ವಿಚಿತ್ರ ವ್ಯಾಖ್ಯಾನದಲ್ಲಿ ಒಳಗೊಳ್ಳುವ ಅನೇಕಾನೇಕ ಜಾತಿ-ಜನಾಂಗಗಳು ಸಹ ಗೋಮಾಂಸವನ್ನು ತಿನ್ನುತ್ತಿದ್ದಾರೆ ಎಂಬುದು ತಿರಸ್ಕರಿಸಲಾಗದ ಸತ್ಯ. ಅಂದರೆ ದಲಿತರು, ಶೂದ್ರರು ಅಷ್ಟೇಕೆ ಇತರೆ ಸವರ್ಣೀಯ ಜಾತಿಗಳಲ್ಲಿನ ಜನರು ತಿನ್ನುತ್ತಿರುವವರ ನಾಲಿಗೆ ಕತ್ತರಿಸುತ್ತಾರೆಯೇ? ಹೌದು ಎನ್ನುವುದಾದರೆ ಇದು 'ಒಂದೂ - ಬಂಧೂ' ಎಂಬ ಅವರ ಬಾಂಧವ್ಯದ ಹೇಳಿಕೆ, ಅಪ್ಪಟ ಮೋಸತನದ್ದು ಎಂದಾಗುತ್ತದೆ. ಮಾತ್ರವಲ್ಲ ನಿಜಕ್ಕೂ 'ಮನು'ವಿನ ಮಕ್ಕಳಾದ ಈ ಖಾವೀ ಪಡೆ ಪ್ರತಿಪಾದಿಸುವ 'ಹಿಂದೂರಾಷ್ಟ್ರ'ದಲ್ಲಿ ಶೂದ್ರರಿಗೆ, ದಲಿತರಿಗೆ - ಮಹಿಳೆಯರ ಸ್ಥಾನ ಎಂತಹ ನಿಕೃಷ್ಟತನದ್ದು. ಹಗೆತನದ್ದು ಎಂದು ಗೊತ್ತಾಗುತ್ತದೆ.

ಈ ವಾರ ಕರ್ನಾಟಕ ಒಂದು ನೋಟ

— ಎಸ್.ವೈ.ಗುರುಶಾಂತ್

ಪ್ರೊ. ಕೆ.ರಾಮದಾಸರಿಗೆ ಬೆದರಿಕೆ

ಇಂತಹ ಸಂವಾದದಲ್ಲಿ ತೊಡಗಿದ್ದ ಖ್ಯಾತ ಪ್ರಗತಿಪರ ಸಾಹಿತಿ ಪ್ರೊ. ಕೆ.ರಾಮದಾಸ್‌ರಿಗೆ ಕೊಲೆಯ ಬೆದರಿಕೆಯ ದೂರವಾಣಿ ಕರೆಗಳು ಬಂದಿವೆ. ಅವರು ಗೋಮಾಂಸ ಭಕ್ಷಣೆಯ ಗತಕಾಲದ ಇತಿಹಾಸ ಮತ್ತು ವರ್ತಮಾನಗಳನ್ನು ವಿಶ್ಲೇಷಿಸುವಾಗ ನಿಖರವಾಗಿಯೇ ಒಂದು ಸತ್ಯ ಗುರುತಿಸಿದ್ದಾರೆ. 'ಬ್ರಾಹ್ಮಣರು ಗೋಮಾಂಸ ತಿನ್ನುತ್ತಿದ್ದರು' ಎಂದು. ಇದರಲ್ಲಿ ಯಾವುದೇ ಉತ್ಪ್ರೇಕ್ಷೆ ಇಲ್ಲ. ವಿವಾದ-ಭಿನ್ನಾಭಿಪ್ರಾಯವಿದ್ದರೆ ವಿದ್ವತ್‌ಪೂರ್ಣ ಚರ್ಚೆಗೆ ಇಳಿಯಲಿ. ಅದರಿಂದ ಜ್ಞಾನ ವೃದ್ಧಿಯಾದೀತು. ಅದರ ಬದಲು ಕೊಲ್ಲುವ, ಬಾಯಿ ಮುಚ್ಚಿಸುವ ಗೂಂಡಾಗಿರಿಯ ಪರಿ ಸಂಘ ಪರಿವಾರದ ಸಂಸ್ಕೃತಿ ಎಂತಹದು ಎಂದು ತೋರಿಸುತ್ತದೆ. ಪ್ರೊ. ರಾಮದಾಸ್‌ರವರು ತಮ್ಮ ಅಭಿಪ್ರಾಯವನ್ನು ಪುನರುಚ್ಚರಿಸಿದ್ದಾರೆ. ಮಾತ್ರವಲ್ಲ, ಈ ಹೇಳಿಕೆಯ ಸಮರ್ಥನೆಗೆ ನೂರಾರು ದಾಖಲೆಗಳನ್ನು ಒದಗಿಸುವುದಾಗಿ ಹೇಳಿದ್ದಾರೆ. ಈ ಸವಾಲನ್ನು ಸ್ವೀಕರಿಸಲು ಈ ಗಾಂಪರ ಪಡೆ ಸಿದ್ಧವಿದೆಯೇ? ಇಲ್ಲ. ವೈಚಾರಿಕ ಶಕ್ತಿಯನ್ನು ನಾಶಗೊಳಿಸುವ ಹಿಟ್ಲರನ ದುಷ್ಟ ಸಂತತಿಯ ಕೃತ್ಯಗಳಿಗೆ ಧಿಕ್ಕಾರ ಹೇಳಬೇಕಿದೆ. ಖಂಡಿಸಬೇಕಿದೆ. ಪ್ರೊ. ರಾಮದಾಸ್‌ರಂಥಹವರನ್ನು ಎಲ್ಲಾ ರೀತಿಯಲ್ಲಿ ಬೆಂಬಲಿಸಬೇಕಿದೆ.

ಹಿಂದುತ್ವದ ತಾಲಿಬಾನ್‌ಗಳು

ಇಷ್ಟಕ್ಕೂ ಒಬ್ಬರ ಆಹಾರ, ವಿಚಾರ, ಉಡುಗೆ-ತೊಡುಗೆ ಹೀಗೆ ಇರಬೇಕೆಂದು ಹೇಳಲು - ಈ ಹಿಂದುತ್ವದ ಈ ತಾಲಿಬಾನ್‌ಗಳಿಗೆ ಅಧಿಕಾರ ಕೊಟ್ಟವರಾರು? ಅವೆಲ್ಲಾ ಅವರವರ ಆಯ್ಕೆಗಳಿಗೆ ಬಿಟ್ಟ ವೈಯಕ್ತಿಕ ಹಕ್ಕುಗಳು - ಅಗತ್ಯಗಳು.

ಈ ಸಂಗತಿಗಳು ಕೋಮುವಾದಿಗಳು ಎಷ್ಟು ಆಕ್ರಮಣಶೀಲರಾಗಿ, ಅನಾಹುತಕಾರಿಯಾಗಿ ಬೆಳೆಯುತ್ತಿದ್ದಾರೆ, ಸಾಮಾನ್ಯ ಜನರ ಮನಸ್ಸನ್ನು ವಿಷಮಯಗೊಳಿಸುತ್ತಿದ್ದಾರೆ ಎಂಬುದನ್ನು ಗಮನಿಸಬೇಕು. ಹಂತಹಂತದಲ್ಲಿಯೂ ಪ್ರತಿರೋಧ ಒಡ್ಡಬೇಕು. ಒಡ್ಡದೇ ಅನ್ಯಮಾರ್ಗವಿಲ್ಲ.

ಬಾಬಾ ಬುಡನ್‌ಗಿರಿ : ದಳ್ಳುರಿ ಹಬ್ಬಿಸುವ ತಯಾರಿ


ಕೆಲವು ವಾರಗಳ ಹಿಂದೆ 'ದತ್ತಮಾಲೆ ಹಾಕಿ - ಇರುಮುಡಿಯ ಹೊತ್ತು' ಭಕ್ತಿ ಸೇವೆಯ ಸೋಗು ಹಾಕಿ ಮುಂದಿನ ವಿಧ್ವಂಸಕ ಕೃತ್ಯಕ್ಕೆ ತಾಲೀಮು ನಡೆಸಿದ ಬಜರಂಗದಳ, ವಿಶ್ವಹಿಂದೂ ಪರಿಷತ್‌ನ ಕಾರ್ಯಕ್ರಮವನ್ನು ಎಲ್ಲರೂ ಗಮನಿಸಿದ್ದಾರೆ. ಚಿಕ್ಕಮಗಳೂರಿನ ಕೋಮುಸೌಹಾರ್ದತೆಯ ಕೇಂದ್ರವಾಗಿರುವ ಬಾಬಾಬುಡನ್‌ಗಿರಿಯ ಪೀಠದ ಗುಹೆಯಲ್ಲಿ ಮತ್ತು ಸುತ್ತಲಿನ ಪರಿಸರದಲ್ಲಿ ಸತತವಾಗಿ ಈ ಸಂಘಟನೆಗಳು ಅದನ್ನು ಇನ್ನೊಂದು ಅಯೋಧ್ಯೆಯಾಗಿಸುವ ದಿಕ್ಕಿನಲ್ಲಿ ಅಲ್ಲಿನ ಪರಂಪರೆ ಮತ್ತು ಸಂಸ್ಕೃತಿಯಲ್ಲಿಯೂ ಹಿಂದೆಂದೂ ಕಾಣದಂತಹ ದತ್ತಮಾಲೆಯಂತಹ ಹೊಸ ವರಸೆಗಳಿಗೆ ಇಳಿದಿರುವುದು ಈಚಿನ ವರುಷಗಳಲ್ಲಿ ಕಾಣುತ್ತೇವೆ. ಈಸಲವೂ ಅಯ್ಯಪ್ಪಸ್ವಾಮಿಯ ಮಾದರಿಯಲ್ಲಿ ವೇಷಹಾಕಿ ಮುಗ್ಧ ಭಕ್ತರನ್ನು ಸೆಳೆದು ಹಾದಿ ತಪ್ಪಿಸುವ ಪ್ರಯತ್ನಗಳು ನಡೆದವು. ಪತ್ರಿಕೆ, ಟಿ.ವಿ. ಮಾಧ್ಯಮಗಳೂ ಈ ಕಾರ್ಯಕ್ರಮವನ್ನು, ಒಂದಿಷ್ಟು ಭಜರಂಗದಳದ ನಾಯಕರ ಫರ್ಮಾನು - ಎಚ್ಚರಿಕೆಗಳನ್ನು ವರದಿ ಮಾಡಿದ್ದವು ಅಷ್ಟೇ. ಅತ್ಯಂತ ಶಾಂತಿಯಿಂದ ಕಾರ್ಯಕ್ರಮ ಮುಗಿದಿದೆ ಹಾಗೂ ಸರ್ಕಾರದ ಆಡಳಿತ ಯಂತ್ರ ಉತ್ತಮ ಪಾತ್ರ ವಹಿಸಿದೆಯೆಂದೆಲ್ಲಾ ಕೆಲವರು ಬರೆದಿದ್ದರು. ರಾಜ್ಯದ ಜನತೆಗೆ ತಿಳಿಯಲಾದ ವಿಷಯ ಮಾಮೂಲಿ ತಾನೇ ಎಂಬ ಅಭಿಪ್ರಾಯ ಹುಟ್ಟಿಸಿತ್ತು ಇದು.

ಆದರೆ ಇದಾದ ಹದಿನೈದು ದಿನಗಳೊಳಗೆ ಘಟನೆಗಳ ಇನ್ನೊಂದು ವರದಿಗಳು ನಿಧಾನಕ್ಕೆ ಸಮೂಹ ಮಾಧ್ಯಮಗಳ ಮುಂದೆ ಪ್ರಗತಿಪರ ತಂಡಗಳಿಂದ ಬಿಚ್ಚಲ್ಪಟ್ಟವು. ಈ ದತ್ತಮಾಲೆ ಬಹಿರಂಗ ಸಭೆಯ ಕಾರ್ಯಕ್ರಮಗಳಲ್ಲಿ ಮತ್ತು ಅದರ ನಂತರ ನಡೆದ ದಾಂಧಲೆಗಳ ವಿವರಗಳು ನಿಜಕ್ಕೂ ದಿಗಿಲುಗೊಳಿಸುವಂತಹವು. ಬಾಬಾಬುಡನ್‌ಗಿರಿಗೆ ಹೋಗಿಬರುವ ಬಹಳಷ್ಟು [illegible] ಸ್ನಾನಮಾಡಿ ಬರುವ 'ಮಾಣಿಕ್ಯಧಾರಾ' ಬಳಿ ಬಹಳಷ್ಟು ದಾಂಧಲೆ ನಡೆಸಿದೆ. ಭಜರಂಗದಳ [illegible] ಅಂಗಡಿಗಳ ಮೇಲೆ ಹಲ್ಲೆ ನಡೆಸಿದ್ದಾರೆ ಮತ್ತು ಹಾಳುಗೆಡವಿದ್ದಾರೆ. ಇದ್ದಬದ್ದದ್ದು ದೋಚಿದ್ದಾರೆ. ಚಿಕ್ಕಪುಟ್ಟ ಹೋಟೆಲುಗಳನ್ನು ಹಾಳುಗೆಡವಿದ್ದಾರೆ. ಆ ಪ್ರದೇಶದಲ್ಲೇ ಇರುವ ದರ್ಗಾವನ್ನು ಒಡೆದುಹಾಕಿದ್ದಾರೆ. ಇವೆಲ್ಲಾ ಅಲ್ಪಸಂಖ್ಯಾತ ಮುಸ್ಲಿಂರಿಗೆ ಸೇರಿದ್ದವು ಎಂದು ಬೇರೆ ಹೇಳಬೇಕಾಗಿಲ್ಲ.

ಇದನ್ನು ತಿಳಿದ ಬಳಿಕ ಪೋಲೀಸ್ ಪಡೆ ಬಂದಿದೆ. ಅಷ್ಟರೊಳಗೆ ಇವೆಲ್ಲಾ ಮುಗಿದಿದ್ದವು(ಹೈಟೆಕ್ ಆಡಳಿತದಲ್ಲಿ) ಮುಗಿಸಿ ಕೇಕೆ ಹಾಕಿ, ಅನಾಗರಿಕ ಭಾಷೆಯಲ್ಲಿ ಎಚ್ಚರಿಕೆ ನೀಡುತ್ತಾ, ಘೋಷಣೆ ಕೂಗುತ್ತಿದ್ದ ಬಜರಂಗದಳದ ಪಡೆ ಸರಿದುಹೋಗುತ್ತಿತ್ತು. ಪೋಲೀಸರು ಬಂದದ್ದು ಹಾನಿಗೀಡಾದವರಲ್ಲಿ ಕೊಂಚ ಸ್ಥೈರ್ಯ ಮೂಡಿಸಿತು. ಆದರೆ ಬಂದ ಪೋಲೀಸ್ ಪಡೆ ಅರ್ಧಂಬರ್ಧ ಹಾಳುಗೆಡವಿದ್ದ ಅಂಗಡಿ-ಪುಟ್ಟ ಕಟ್ಟಡಗಳನ್ನು ಸಂಪೂರ್ಣ ನಾಶಮಾಡಿ, ಗುಡಿಸಿ ಎತ್ತಿಕೊಂಡು ಹೋದರು. ಈ ಗುರುವಾರ ಚಿಕ್ಕಮಗಳೂರಿನ ಜಿಲ್ಲಾಡಳಿತ ಕಛೇರಿಯಲ್ಲಿ ಶಾಂತಿಸಭೆ ನಡೆಸುತ್ತಾ ಉಸ್ತುವಾರಿ ಸಚಿವ ಚಂದ್ರೇಗೌಡರು ಒಂದು ಹೇಳಿಕೆ 'ಅಲ್ಲಿ ಯಾವುದೇ ಅಂಗಡಿ-ಮಳಿಗೆಗೆ ಅವಕಾಶ ನೀಡುವುದಿಲ್ಲ' ಎಂದು. ಅಂದು ಪೋಲೀಸರದ್ದು ಅತಿರೇಕವಿರಬಹುದು ಎಂದುಕೊಂಡಿದ್ದರೆ ಅದಕ್ಕೆ ಜನಪ್ರತಿನಿಧಿಯೂ ಅಂತಿಮ ಚುಕ್ಕೆ ಇಟ್ಟುಬಿಟ್ಟರು.

ಸಂಘ ಪರಿವಾರ ಈಚೀಚಿಗೆ ಆರಂಭಿಸಿರುವ ದತ್ತ ಜಯಂತಿಯು ಈ ವರುಷ ಡಿಸೆಂಬರ್ 6 ರಿಂದ 8 ರವರೆಗೆ ಭಾರಿ 'ವಿಜೃಂಬಣೆ'ಯಿಂದ(?) ಆಚರಿಸುವುದಾಗಿಯೂ, 50 ಸಾವಿರ ಜನರನ್ನು ಸೇರಿಸುವುದಾಗಿಯೂ ಮತ್ತು ಬಾಬು ಬುಡನ್‌ಗಿರಿ ದತ್ತಸ್ವಾಮಿ ಪೀಠದ ಗುಹೆ ಬಳಿಯೇ ಬಹಿರಂಗ ಸಭೆ ನಡೆಸುವುದಾಗಿ ಹೇಳಿದೆ. ಸರ್ಕಾರದ ವತಿಯಿಂದ ಶಾಂತಿ ಸಭೆಯಲ್ಲಿ ಇದಕ್ಕೆ ಅವಕಾಶ ಕೊಡಲಾಗದು ಪೂಜೆ ಬೇಕಾದರೆ ಮಾಡಿಕೊಳ್ಳಲಿ ಎಂದಿದ್ದಾರೆ ಸಚಿವರು. ಬಜರಂಗ ದಳ - ವಿಹಿಂಪ ಗಳ ನಿರ್ಧಾರ ಸಂಘರ್ಷವನ್ನು ಹುಟ್ಟುಹಾಕಬೇಕು ಎಂಬುದೇ ಆಗಿದೆ. ಅದೂ ವಿಧಾನಸಭೆಯ ಚುನಾವಣೆ ಸಹ ಮುಂದಿನ ವರುಷವೇ ಇರುವಾಗ.

ಈಗಾಗಲೇ ಸಂಘ ಪರಿವಾರವು ಇಡೀ ಜಿಲ್ಲೆಯಾದ್ಯಂತ ಬಹಳಷ್ಟು ವ್ಯವಸ್ಥಿತವಾಗಿ ಸಂಘಟನಾ ಜಾಲ ವಿಸ್ತರಿಸುತ್ತಿದೆ. ಕೆಲಸ ವ್ಯಾಪಕ ಗೊಳಿಸಿದೆ. ಜನಸಾಮಾನ್ಯರ ಪ್ರಶ್ನೆಗಳನ್ನು ಮರೆಮಾಚಲು ಕೇಂದ್ರ ಸರ್ಕಾರದ ಪಾತಕಗಳನ್ನು ಮರೆಸಲು ಕೋಮು ಗಲಭೆಗಳನ್ನು ಆಶ್ರಯಿಸಿದೆ, ಹುಟ್ಟು ಹಾಕುತ್ತಿದೆ. ಹೀಗೆ.... ಡಿಸಂಬರ್‌ನಲ್ಲಿ ಜರುಗುವ 'ದತ್ತ ಜಯಂತಿ'ಯೆಂಬುದು ಭಾರಿ ಸಂಘರ್ಷದ, ದ್ವೇಷದ ವಾತಾವರಣ ನಿರ್ಮಿಸಲು ಯೋಜಿಸಿದೆ. ಅದಕ್ಕೆಂದೇ ಹಲವಾರು ಜಿಲ್ಲೆಗಳಿಂದ ರಥಯಾತ್ರೆ. ನೂರಾರು ಹಳ್ಳಿಗಳಲ್ಲಿ ಸಂಚರಿಸಿ ವಿಷದ ಬೀಜ ಬಿತ್ತಲಿವೆ.



ಇಂತಹ ಸನ್ನಿವೇಶದಲ್ಲಿ ರಾಜ್ಯದ ಕಾಂಗ್ರೆಸ್ ಸರ್ಕಾರದ ಸಿದ್ಧತೆ, ಪ್ರತಿಕ್ರಿಯೆ ಅಗತ್ಯಕ್ಕೆ ತಕ್ಕಷ್ಟು ಇಲ್ಲ. ಮೇಲಾಗಿ ಈ ಹಿಂದೆ ನೋಡಿದಂತೆ ಹಂತಹಂತವಾಗಿ ಬಜರಂಗದಳದ ಕಾರ್ಯಕ್ರಮವನ್ನು ಕಾಂಗ್ರೆಸ್ ಸರ್ಕಾರ ಜಾರಿಗೊಳಿಸುವಂತಿದೆ. ಶಾಂತಿ ಸಭೆಯಲ್ಲಿ ಸಚಿವರು ಆಡಿದ ಮಾತುಗಳನ್ನೇ ಗಮನಿಸಿ. "ಅಲ್ಲಿಗೆ ಬರುವ ಭಕ್ತರನ್ನು ತಡೆಯಲಾಗದು, ಅವರಿಗೆ ಸೂಕ್ತವ್ಯವಸ್ಥೆ ಕಲ್ಪಿಸಲಾಗುವುದು. ಪೂಜೆ-ಹವನ-ಹೋಮಕ್ಕೆ ತಡೆಯಲಾಗದು. ಬೇಕಾದರೆ ಮಠಾಧೀಶರನ್ನು (ಪೂಜಾರಿಯನ್ನೋ) ಕರೆದು ತಂದು ಪೂಜಿಸಿಕೊಳ್ಳಲಿ. ಆದರೆ ಸಭೆಗೆ ಅವಕಾಶವಿಲ್ಲ". ಬಾಬಾಬುಡನ್‌ಗಿರಿಯ ಪೀಠದಲ್ಲಿ ಹಿಂದೆಂದೂ 'ಪೂಜಾರಿ' ಇರಲಿಲ್ಲ. ಅಲ್ಲಿರುವುದು 'ಖಾವಿ ಮತ್ತು ಹಸುರು' ಉಡುಪು ತೊಟ್ಟ ಫಕೀರ. ಈತ ಎರಡೂ ಧರ್ಮಗಳನ್ನು ಸಂಕೇತಿಸುತ್ತಾನೆ. ಅಲ್ಲಿ ಹಿಂದೂ ಪೂಜಾರಿ ನೇಮಕ ಆಗಬೇಕು ಎಂಬುದು ವಿಶ್ವ ಹಿಂದೂ ಪರಿಷತ್ ಆಗ್ರಹ. ಈಗ ಪೂಜಾರಿಯನ್ನು ಅಲ್ಲಿಗೆ ಕರೆದೊಯ್ದರೆ ಅದು ಸಂಘ ಪರಿವಾರದ ಅಜೆಂಡಾದ ಜಾರಿಗೆ ಒಂದು ಹೆಜ್ಜೆಯಿಟ್ಟಂತೆ. ಮೇಲಾಗಿ ಹಿಂದೆಂದೂ ಇಲ್ಲದಿದ್ದ ದತ್ತ ಜಯಂತಿಯ ಆಚರಣೆಗೆ ಅಲ್ಲಿಕೇಗೆ ಅವಕಾಶ ಕೊಡಬೇಕು.?

ಕೋಮುವಾದಿ ಶಕ್ತಿಗಳನ್ನು ಮಟ್ಟ ಹಾಕುವಲ್ಲಿ, ಕೋಮುವಾದವನ್ನು ಎದುರಿಸುವಲ್ಲಿ ಕಾಂಗ್ರೆಸ್ ಒಂದು ಪಕ್ಷವಾಗಿ, ಸರ್ಕಾರವಾಗಿ ದೃಢತೆ ಇಲ್ಲದೇ ಚಂಚಲದಿಂದ, ಸಂದರ್ಭ ಸಾಧಕವಾಗಿ ವರ್ತಿಸುತ್ತಿರುವುದು ಈ ದಿನಗಳಲ್ಲಂತೂ ಸ್ಪಷ್ಟವಾಗಿದೆ. ಇದೇ ಸ್ಥಿತಿಯು ಮುಂದೆ ಭಯಾನಕ ಸನ್ನಿವೇಶ ಸೃಷ್ಟಿಸಲು ಕಾರಣವಾದೀತು!

ಇಂತಹ ಪರಿಸ್ಥಿತಿಯಲ್ಲಿ ಚಿಕ್ಕಮಗಳೂರಿನ ಎಡ, ಪ್ರಗತಿಪರ, ಧರ್ಮನಿರಪೇಕ್ಷ ಸಂಘಟನೆಗಳು, ವ್ಯಕ್ತಿಗಳು-ಶಕ್ತಿಗಳು ದತ್ತಜಯಂತಿಯನ್ನು ಬಳಸಿ ಕೋಮುದ್ವೇಷ ಹಬ್ಬಿಸಲು ಬಿಡುವುದಿಲ್ಲ ಎಂದು ಪ್ರತಿರೋಧ ಒಡ್ಡಲು, ಪ್ರತ್ಯುತ್ತರವಾಗಿ ಕಾರ್ಯಕ್ರಮ ರೂಪಿಸಲು ನಿರ್ಧರಿಸಿವೆ. ಈ ಯತ್ನವನ್ನು ಎಲ್ಲರೂ ಬೆಂಬಲಿಸಬೇಕು, ಭಾಗವಹಿಸಬೇಕು. ವಿವಿಧ ರಾಜಕೀಯ ಪಕ್ಷಗಳೂ, ಜನಸಂಘಟನೆಗಳೂ ಇದರತ್ತ ಗಂಭೀರವಾಗಿ ಧುಮುಕಬೇಕು. ಇಲ್ಲವಾದಲ್ಲಿ ಫ್ಯಾಸಿಸ್ಟ್ ಪ್ರವೃತ್ತಿ ಬೆಳೆಯಲು, ಹಬ್ಬಿಸಲು ದೇಶ ವಿಭಜಕ ಶಕ್ತಿಗಳ ಕೈಮೇಲಾಗಲು ಬಿಟ್ಟಂತೆ ಆದೀತು. ಅಂದರೆ ಜನರ ನಿತ್ಯದ ಸಂಕಷ್ಟ, ಬದಲಾವಣೆಗಾಗಿನ ಹೋರಾಟ ಮೂಲೆಗುಂಪಾದಂತೆ. ದುಡಿವ ಐಕ್ಯತೆ ಛಿದ್ರವಾದಂತೆ. ಆದ್ದರಿಂದ ಕ್ರಿಯಾಶೀಲತೆ ಇಂದಿನ ತುರ್ತು ಅಗತ್ಯ.

'ಕಮ್ಯುನಿಸ್ಟರು ಧರ್ಮಕ್ಕೆ ವಿರೋಧ ಅಲ್ಲ'

ಕಮ್ಯುನಿಸ್ಟರು ಧರ್ಮಕ್ಕೆ ವಿರುದ್ಧವಲ್ಲ, ಧರ್ಮದ ಹೆಸರಲ್ಲಿ, ಜಾತಿಯ ಹೆಸರಲ್ಲಿ ಬಡ ಜನರನ್ನು ವಿಂಗಡಿಸಿ ಇನ್ನೊಂದು ಧರ್ಮದ ಮೇಲೆ ಧಾಳಿ ನಡೆಸಿ ಜನರ ಮಧ್ಯೆ ಬಿಕ್ಕಟ್ಟನ್ನು ಸೃಷ್ಟಿಸಿ, ಜನರ ಜೀವಂತ ಸಮಸ್ಯೆ ಬಗೆಹರಿಸಲು ನಡೆಸುವ ಪ್ರಜಾಪ್ರಭುತ್ವ ಹೋರಾಟವನ್ನು ದಮನಗೊಳಿಸುವ ಕೋಮುವಾದಿ ನೀತಿಗಳಿಗೆ ನಾವು ವಿರುದ್ಧ ಎಂದು ಅಕ್ಟೋಬರ್ 25 ರಂದು ಕಕ್ಕಿಂಜೆಯಲ್ಲಿ ನಡೆದ ಕೋಮು ಸೌಹಾರ್ದತಾ ರ್‍ಯಾಲಿಯನ್ನುದ್ದೇಶಿಸಿ ಸಿಪಿಐ(ಎಂ) ರಾಜ್ಯ ಮುಖಂಡರಾದ ನಿತ್ಯಾನಂದಸ್ವಾಮಿಯವರು ಹೇಳಿದರು. ರೈತರು, ಕಾರ್ಮಿಕರು ಅತ್ಯಂತ ಕೋಮುಸೌಹಾರ್ದತೆಯಿಂದ ಬಾಳಬೇಕು. ಅದನ್ನು ಮುರಿಯುವ ಕೋಮುವಾದಿ ಶಕ್ತಿಗಳನ್ನು ವಿರೋಧಿಸಿ ಅವರ ಪ್ರಜಾಪ್ರಭುತ್ವ ಹಕ್ಕುಗಳನ್ನು ರಕ್ಷಿಸಲು ತೀವ್ರ ಹೋರಾಟಕ್ಕಿಳಿಯಬೇಕೆಂದು ಅವರು ಕರೆ ನೀಡಿದರು.

ಕೇಂದ್ರ ಹಾಗೂ ರಾಜ್ಯ ಸರ್ಕಾರದ ಅತ್ಯಂತ ಜನವಿರೋಧಿ ನೀತಿಯಿಂದಾಗಿ ರೈತರ ಸರಣಿ ಆತ್ಮಹತ್ಯೆಯನ್ನು ಅತ್ಯಂತ ಮೋಜಿನ ರೀತಿಯಲ್ಲಿ 'ರೈತರು ದುಡ್ಡಿಗಾಗಿ ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ' ಎಂದು ಹೇಳಿಕೆ ನೀಡುವ ಮಾನ್ಯ ಮುಖ್ಯಮಂತ್ರಿ ಎಸ್.ಎಂ.ಕೃಷ್ಣಾರವರೇ, ನಾವು (ರೈತರು) 3 ಕೋಟಿ ರೂಪಾಯಿ ಕೊಟ್ಟರೆ ನೀವು ಆತ್ಮಹತ್ಯೆ ಮಾಡ್ಕೊತ್ತೀರಾ ಎಂದು ಅವರು ಪ್ರಶ್ನಿಸಿದರು.

ರ್‍ಯಾಲಿಯನ್ನುದ್ದೇಶಿಸಿ ಮಾತನಾಡಿದ ಇನ್ನೋರ್ವ ಮುಂದಾಳು ರೈತ ಸಂಘದ ಜಿಲ್ಲಾ ಕಾರ್ಯದರ್ಶಿ ರಾಮಚಂದ್ರ ಉಚ್ಚಿಲ್‌ರವರು ಕರ್ನಾಟಕದಲ್ಲಿ ರೈತರು ಸರಣಿ ಆತ್ಮಹತ್ಯೆ ಮಾಡಿಕೊಳ್ಳುತ್ತಿರುವಾಗ ನಮ್ಮ ಮುಖ್ಯಮಂತ್ರಿಗಳು 4ನೇ ವರ್ಷದ ಸಾಧನೆಯ ಪ್ರಚಾರಕ್ಕಾಗಿ ದುಬಾರಿ ವೆಚ್ಚ ಮಾಡುತ್ತಿದ್ದಾರೆ. ಇದೇ ರೀತಿ ಭಾರತ ದೇಶದ ಬೆನ್ನೆಲುಬಾದ ರೈತರ ಬಗ್ಗೆ ರಾಜ್ಯ, ಕೇಂದ್ರ



ನಂಜುಣಿಸುವ ನೀತಿಗಳ ವಿರುದ್ಧ ರ್‍ಯಾಲಿ

ಸರ್ಕಾರಗಳು ನಿರ್ಲಕ್ಷ್ಯ ತೋರಿಸಿದರೆ ನಿಮ್ಮ ಅಧಿಕಾರ ಕಿತ್ತೆಸೆದು ರೈತರು ಆಡಳಿತ ಮಾಡಲು ಬರುವುದಾಗಿ ಎಚ್ಚರಿಸಿದರು.

ಇವತ್ತು ಖಾಸಗೀಕರಣದ ಪರಿಣಾಮವಾಗಿ ರಾಷ್ಟ್ರೀಕೃತ ರಸ್ತೆಗಳಲ್ಲಿ ಖಾಸಗಿ ಬಸ್ಸುಗಳು ಓಡಾಡುತ್ತಿದ್ದು ಕಾರು, ಟೆಂಪೋ ಚಾಲಕರು ಬೀದಿಪಾಲಾಗುವ ಪರಿಸ್ಥಿತಿ ಒದಗಿ ಬಂದಿದೆ. ಈಗ ಅವರು ನ್ಯಾಯಕ್ಕಾಗಿ ನಡೆಸುತ್ತಿರುವ ಹೋರಾಟಕ್ಕೆ ಸಿಪಿಐ(ಎಂ) ಬೆಂಬಲಿಸುವುದಾಗಿ ಸಿಪಿಐ(ಎಂ) ಬೆಳ್ತಂಗಡಿ ತಾಲ್ಲೂಕು ಕಾರ್ಯದರ್ಶಿ ಶಿವಕುಮಾರ್ ಹೇಳಿದರು.

ಜನರ ಮಧ್ಯೆ ದ್ವೇಷ ಹುಟ್ಟಿಸಲು ಇವತ್ತು ಕೋಮುವಾದಿ ಶಕ್ತಿಗಳು ವಿಷದ ಬೀಜ ಬಿತ್ತುತ್ತಿವೆ. ಅದನ್ನು ಮೆಟ್ಟಿ ನಿಂತು ಜಾಗತೀಕರಣ, ಖಾಸಗೀಕರಣದ ವಿರುದ್ಧ ರೈತರು ಒಗ್ಗಟ್ಟಾಗಿ ಹೋರಾಡಬೇಕು ಎಂದು ಬೀಡಿ ಕೆಲಸಗಾರರ ಸಂಘದ ಬೆಳ್ತಂಗಡಿ ತಾಲೂಕು ಅಧ್ಯಕ್ಷರಾದ ಬಿ.ಎಂ.ಭಟ್ ತಿಳಿಸಿದರು.

ಕರ್ನಾಟಕ ಪ್ರಾಂತ ರೈತ ಸಂಘದ ತಾಲೂಕು ಕಾರ್ಯದರ್ಶಿ ಹರಿದಾಸ್ ಕಾರ್ಯಕ್ರಮ ನಿರೂಪಿಸಿದರು. ಸಂಘದ ಅಧ್ಯಕ್ಷರಾದ ಪಾಪಚ್ಚನ್, ದಯಾನಂದ, ಆಂಟನಿ, ಕರೀಂ, ವೆಂಕಟಪ್ಪ ಗೌಡ ಮುಂತಾದವರು ಉಪಸ್ಥಿತರಿದ್ದರ

ಶಿಕ್ಷಣದ ವ್ಯಾಪಾರೀಕರಣಕ್ಕೆ ವಿರೋಧ

ಅಕ್ಟೋಬರ್ 29 ರಂದು ಬೆಳಗಾವಿಯ ರಾಮದುರ್ಗದ ಅಕ್ಕಮಹಾದೇವಿ ಕಲ್ಯಾಣ ಮಂಟಪದಲ್ಲಿ ನಡೆದ ಭಾರತ ವಿದ್ಯಾರ್ಥಿ ಫೆಡರೇಷನ್ 5ನೇ ತಾಲ್ಲೂಕು ಸಮ್ಮೇಳನ ಉದ್ಘಾಟಿಸಿ ಮಾತನಾಡಿದ ರಾಜ್ಯ ಉಪಾಧ್ಯಕ್ಷ ಟಿ.ಎಲ್.ಕೃಷ್ಣೇಗೌಡ ಶಿಕ್ಷಣದ ವ್ಯಾಪಾರೀಕರಣದ ವಿರುದ್ಧ ವಿದ್ಯಾರ್ಥಿಗಳು ನಿರಂತರ ಹೋರಾಟ ನಡೆಸುವಂತೆ ಕರೆ ನೀಡಿದರು.

ಹಣ ಇದ್ದವರು ಮಾತ್ರ ಶಿಕ್ಷಣ ಪಡೆಯಲಿಕ್ಕೆ ಸಾಧ್ಯವೆಂಬ ಸ್ಥಿತಿ ಇದೆ. ಬಡ ವಿದ್ಯಾರ್ಥಿಗಳು ಹೆಚ್ಚಿನ ಫೀ ಕಟ್ಟದೆ ಕೂಲಿ ಕೆಲಸಕ್ಕೆ ಹೋಗುತ್ತಿದ್ದಾರೆ. ಪ್ರಗತಿಪರ ಸಂಘಟನೆಯಾದ ಎಸ್‌ಎಫ್‌ಐ ಕಾರ್ಯಕರ್ತರು ಬಲಿಷ್ಠ ಸಂಘಟನೆ ಕಟ್ಟಲು ಮುಂದಾಗಬೇಕೆಂದು ಮುಖ್ಯ ಅತಿಥಿಗಳಾಗಿದ್ದ ಸವದತ್ತಿಯ ಎಫ್.ಎಂ. ನದಾಫ ಮಾತನಾಡಿದರು.

ಕೇಂದ್ರದಲ್ಲಿ ನಮ್ಮ ಸರ್ಕಾರ ಬಂದರೆ ಎಲ್ಲರಿಗೂ 'ರೋಟಿ, ಕಪಡಾ, ಮಕಾನ್' ಎಂದು ಹೇಳಿ ಕೇಂದ್ರ ಕುರ್ಚಿ ಏರಿದ ಬಿಜೆಪಿ ಸರ್ಕಾರ 60 ಕೋಟಿ ಟನ್ ಆಹಾರ ಗೋಡಾನುಗಳಲ್ಲಿ ಕೊಳೆಯುತ್ತಿದ್ದರೂ ಇವತ್ತು ಬಡವರಿಗೆ ವಿತರಣೆ ಮಾಡ್ತಾ ಇಲ್ಲ. ಕೋಟಿ ಉದ್ಯೋಗ ಸೃಷ್ಟಿ ಮಾಡುತ್ತೇವೆಂದು ಹೇಳಿ ಕೈಗೆ ಉದ್ಯೋಗ ಕೊಡುವ ಬದಲು ತ್ರಿಶೂಲ ಕೊಡುವಂಥ ಸಂಘ ಪರಿವಾರದ ನೀತಿ ಖಂಡನೀಯ ಎಂದು ಇನ್ನೊಬ್ಬ ಮುಖ್ಯ ಅತಿಥಿ ಸಿಪಿಎಂ ಜಿಲ್ಲಾ ಸಮಿತಿ ಸದಸ್ಯರಾದ ಗೈಬು ಎಂ.ಜೈನೆಖಾನ್ ವಿದ್ಯಾರ್ಥಿಗಳನ್ನು ಉದ್ದೇಶಿಸಿ ಮಾತನಾಡಿದರು. ಬೆಳಗಾವಿ ಜಿಲ್ಲಾ ಕಾರ್ಮಿಕ ಮುಖಂಡರಾದ ವಿ.ಪಿ.ಕುಲಕರ್ಣಿಯವರು ಶುಭಕೋರಿ ಮಾತನಾಡಿದರು. ಈ ಸಮ್ಮೇಳನದ ಅಧ್ಯಕ್ಷತೆಯನ್ನು ಎಂ.ಎಚ್.ಯಂಡಿಗೇರಿ ವಹಿಸಿದ್ದರು. ಈ ಕಾರ್ಯಕ್ರಮವನ್ನು ಎಂ.ಎಸ್.ಭಿಕ್ಷಾವತಿ ಮಠ ನಿರೂಪಿಸಿದರು. ಎ.ಆರ್. ನದಾಫ ಸ್ವಾಗತಿಸಿದರು.

ನೂತನ ತಾಲ್ಲೂಕೂ ಸಮಿತಿ : ಎಂ.ಎಚ್.ಯಂಡಿಗೇರಿ ಅಧ್ಯಕ್ಷರಾಗಿ, ಎಸ್.ಬಿ.ಬರದೇಲಿ, ಎಂ.ಎಂ.ಹರನಟ್ಟಿ ಮತ್ತು ಎಂ.ಕೆ.ಯಲಿಗಾರ ಉಪಾಧ್ಯಕ್ಷರಾಗಿ, ಎಂ.ಎಸ್. ಭಿಕ್ಷಾವತಿಮಠ ಕಾರ್ಯದರ್ಶಿಯಾಗಿ, ಎ.ಆರ್.ನದಾಫ,ಎನ್.ಆಯ್.ಪಾಟೀಲ ಮತ್ತು ಎಸ್.ವಿ.ಹಿರೇಮಠ ಸಹ ಕಾರ್ಯದರ್ಶಿಯಾಗಿ ಆಯ್ಕೆಯಾದರು

ಸರಿಸಮಾನವಾದ ಅವಕಾಶಕ್ಕೆ ಯುವತಿಯರ ಹೋರಾಟ

ದೇಶದ ಯುವಜನರಲ್ಲಿ ಅರ್ಧದಷ್ಟಿರುವ ಯುವತಿಯರನ್ನು ಚಳುವಳಿಯ ಮುಂಚೂಣಿಗೆ ತರದೆ ಯುವಜನರ ಸರ್ವಾಂಗೀಣ ಅಭಿವೃದ್ಧಿ ಸಾಧ್ಯವಿಲ್ಲವೆಂದು ಅರಿತ ಡಿವೈಎಫ್‌ಐನ



ಸಂಘಟನೆಯು ತಿರುವನಂತಪುರದಲ್ಲಿ ನಡೆದ ತನ್ನ 6ನೇ ರಾಷ್ಟ್ರ ಸಮ್ಮೇಳನದಲ್ಲಿ ಯುವತಿಯರನ್ನು ಸಂಘಟನೆಯ ಮುಂಚೂಣಿಗೆ ತರುವ ಹಲವು ಪ್ರತ್ಯೇಕ ಕಾರ್ಯಕ್ರಮಗಳನ್ನು ರೂಪಿಸಿತು.

ಅದರ ಭಾಗವಾಗಿ ಎಲ್ಲಾ ವಿಭಾಗಗಳಲ್ಲಿ ಯುವತಿಯರ ಸಮಾವೇಶ ನಡೆಸಲು ತೀರ್ಮಾನಿಸಿತು. ಅದರಂತೆಯೇ ಮಂಡ್ಯ ಜಿಲ್ಲೆಯ ಮಳವಳ್ಳಿ ತಾಲ್ಲೂಕು ಯುವತಿಯರ ಸಮಾವೇಶ ಅಕ್ಟೋಬರ್ 15 ರಂದು ನಡೆಯಿತು. 120 ಕ್ಕೂ ಹೆಚ್ಚು ಯುವತಿಯರು ಭಾಗವಹಿಸಿದ್ದರು.

ಯುವತಿಯರು ಸರಿಸಮನಾದ ಅವಕಾಶ ಪಡೆಯಲು ಸಂಘಟಿತರಾಗಿ ಕ್ರಿಯಾಶೀಲರಾಗಬೇಕು. ಮಹಿಳೆಯರ ಶ್ರಮ ಮತ್ತು ಅವರ ಬೌದ್ಧಿಕ ಶಕ್ತಿಯನ್ನು ಕಡೆಗಣಿಸಿ ಅವರನ್ನು ಕೇವಲ ಭೋಗದ ವಸ್ತುಗಳನ್ನಾಗಿ ನೋಡುವ ಪಟ್ಟಭದ್ರ ಶಕ್ತಿಗಳು ಯತ್ನಿಸುತ್ತಿವೆ. ಇಂತಹ ಯತ್ನಗಳ ವಿರುದ್ಧ ಸಂಘಟಿತರಾಗಿ ಮಹಿಳೆಯರು ಮುಂದೆ ಬರಬೇಕೆಂದು ಸಮಾವೇಶ ಉದ್ಘಾಟಿಸಿದ ಜನವಾದಿ ಮಹಿಳಾ ಸಂಘಟನೆಯ ರಾಜ್ಯ ಸಹ ಕಾರ್ಯದರ್ಶಿಯಾದ ಎಸ್.ಪ್ರಭ ಕರೆ ನೀಡಿದರು.

ಮಹಿಳೆಯರು ತಮ್ಮ ಮೇಲಿರುವ ನಿಬಂಧನೆ ಹಾಗೂ ಸಂಕೋಲೆಗಳನ್ನು ಕಿತ್ತೆಸೆದು ಸರಿಸಮನಾದ ಅವಕಾಶಗಳಿಗಾಗಿ ಹೋರಾಡಬೇಕೆಂದು ಡಿವೈಎಫ್‌ಐ ರಾಜ್ಯಾಧ್ಯಕ್ಷ ಕೆ.ಎನ್.ಉಮೇಶ್ ಕರೆ ನೀಡಿದರು. ಡಿವೈಎಫ್‌ಐನ ಎನ್.ಎಲ್. ಭರತರಾಜ್ ಮಾತನಾಡಿದರು. ವೇದಿಕೆಯಲ್ಲಿ ಜೆಎಂಎಸ್ ತಾಲ್ಲೂಕು ಅಧ್ಯಕ್ಷೆ ದೇವಿ, ಕಾರ್ಯದರ್ಶಿ ಮಹದೇವಮ್ಮ, ಎಸ್‌ಎಫ್‌ಐನ ಜಿಲ್ಲಾಧ್ಯಕ್ಷ ಟಿ.ಎಂ.ಪ್ರಕಾಶ್, ಡಿವೈಎಫ್‌ಐ ತಾಲ್ಲೂಕು ಕಾರ್ಯದರ್ಶಿ ಕೃಷ್ಣ ಆರ್ ಉಪಸ್ಥಿತರಿದ್ದರು. ಅಧ್ಯಕ್ಷತೆಯನ್ನು ಡಿವೈಎಫ್‌ಐ ತಾಲ್ಲೂಕು ಅಧ್ಯಕ್ಷ ಎಂ.ಲಿಂಗರಾಜ್ ವಹಿಸಿದ್ದರು. ಸುಜಾತ ನಿರೂಪಿಸಿದರೆ, ಮಮತ ಸ್ವಾಗತಿಸಿ, ಜಯಲಕ್ಷ್ಮಿ ವಂದಿಸಿದರು.

ಉಪಸಮಿತಿ : ಸಂಚಾಲಕಿ ಸುಜಾತ, ಸಹ ಸಂಚಾಲಕಿಯರು ರಶ್ಮಿ ಮಮತ, ಮಂಗಳ, ಜಯಲಕ್ಷ್ಮಿ ಹಾಗೂ 12 ಸದಸ್ಯರ ಸಮಿತಿ ರಚನೆಗೊಂಡಿತು. ಸಮಾವೇಶದ ಪೂರ್ವಭಾವಿಯಾಗಿ ಯುವತಿಯರಿಗಾಗಿ ಅಕ್ಟೋಬರ್ 12 ರಂದು ವಿವಿಧ ಸ್ಪರ್ಧೆಗಳನ್ನು ನಡೆಸಲಾಯಿತು. ಇದರ ಉದ್ಘಾಟನೆಯನ್ನು ಮಳವಳ್ಳಿ ಟೌನ್‌ನ ಆರಕ್ಷಕ ನಿರೀಕ್ಷಕರಾದ ನಾಗಪ್ಪನವರು ನೆರವೇರಿಸಿದರು. 40 ಯುವತಿಯರು ಈ ಸ್ಪರ್ಧೆಯಲ್ಲಿ ಭಾಗವಹಿಸಿದ್ದರು. ಸ್ಪರ್ಧೆಗಳಲ್ಲಿ ವಿಜೇತರಾದವರಿಗೆ ಬಹುಮಾನವನ್ನು ಡಿವೈಎಫ್‌ಐ ನ ರಾಜ್ಯ ಸಹ ಕಾರ್ಯದರ್ಶಿ ಎನ್.ಎಲ್.ಭರತರಾಜ್ ನೀಡಿದರು. ಮುಂದೆ ಪಂಚಾಯತ್ ಮಟ್ಟದಲ್ಲಿ ಯುವತಿಯರಿಗಾಗಿ ಕಾನೂನು, ಆರೋಗ್ಯ, ಶಿಬಿರ, ಜನಪರ ಗೀತೆ, ಭಾವಗೀತೆ, ಸೈಕಲ್ ಸ್ಪರ್ಧೆ ನಡೆಸುವ ನಿರ್ಣಯವನ್ನು ಕೈಗೊಳ್ಳಲಾಯಿತು.

ಸಾಕ್ಷರತಾ ಪ್ರೇರಕರ ಸಂಘದ ಪದಾಧಿಕಾರಿಗಳು

ಕರ್ನಾಟಕ ರಾಜ್ಯ ಸಾಕ್ಷರತಾ ಪ್ರೇರಕರ ಸಂಘದ ತಾಲ್ಲೂಕು ಸಭೆಯು ಮಂಡ್ಯ ಜಿಲ್ಲೆಯ ಶ್ರೀರಂಗಪಟ್ಟಣದಲ್ಲಿ ನಡೆಯಿತು. ಈ ಸಭೆಗೆ ಡಿವೈಎಫ್‌ಐ ರಾಜ್ಯ ಸಹಕಾರ್ಯದರ್ಶಿ ಎನ್.ಎಲ್.ಭರತ್‌ರಾಜ್ ಭಾಗವಹಿಸಿ ಪ್ರೇರಕರ ಸಮಸ್ಯೆಗಳು ಹಾಗೂ ಹಕ್ಕುಗಳಿಗೆ ಸಂಬಂಧಿಸಿದಂತೆ ಮಾತನಾಡಿದರು. ಈ ಸಭೆಯಲ್ಲಿ ಶ್ರೀರಂಗಪಟ್ಟಣ ತಾಲ್ಲೂಕು ಸಾಕ್ಷರತಾ ಪ್ರೇರಕರ ಸಂಘದ ಪದಾಧಿಕಾರಿಗಳಾಗಿ ಕೆಳ ಕಂಡವರನ್ನು ಆಯ್ಕೆ ಮಾಡಲಾಯಿತು. ಸಂಚಾಲಕರಾಗಿ ಕಲ್ಯಾಣ ಕುಮಾರ್, ಪಾಲಹಳ್ಳಿ, ಸಹಸಂಚಾಲಕರಾಗಿ ಲಿಂಗರಾಜ್-ಹುಲಿಕೆರೆ, ರವಿಕುಮಾರ್-ಕುಡಲಕುಪ್ಪೆ, ಮಹಾದೇವಿ-ರಾಂಪುರ, ಲಿಂಗಪ್ಪ-ಚಿನ್ನನಕೆರೆ, ಶಿವಕುಮಾರ್ ಮತ್ತು ಸೋಮಶೇಖರ ಹಾಗೂ 12 ಮಂದಿ ಈ ಸಮಿತಿಯ ಸದಸ್ಯರಾಗಿ ಆಯ್ಕೆಯಾಗಿದ್ದಾರೆ.

ಕಳಪೆ ಸಜ್ಜೆ ಬೀಜ ವಿತರಿಸಿದ ಕಂಪನಿ ಮೇಲೆ ಕ್ರಮಕ್ಕೆ ಒತ್ತಾಯ

ಬಳ್ಳಾರಿ ತಾಲೂಕಿನ ಹೆಚ್.ವೀರಾಪುರದ 35 ರೈತರು ಮಹಿಕೊ ಎಂಬ ಬೀಜ ಮಾರಾಟ ಕಂಪನಿಯಿಂದ ಸಜ್ಜೆ ಬೀಜ ಖರೀದಿಸಿ ನೂರು ಎಕರೆಯಲ್ಲಿ ಬಿತ್ತನೆ ಮಾಡಿದರು. ಬರಗಾಲದ ಛಾಯೆ ನಡುವೆಯೂ ಸಾಲ ಮಾಡಿ ಎಕರೆಗೆ 10-15 ಸಾವಿರ ಖರ್ಚು ಮಾಡಿ ಬೆಳೆ ಬೆಳೆದರು. ಬೆಳೆಯು ಹುಲುಸಾಗಿಯೇ ಬೆಳೆಯಿತು. ಆದರೆ ತೆನೆ ಮಾತ್ರ ಬರಲೇ ಇಲ್ಲ. ಇದರಿಂದ ಸಿಟ್ಟಿಗೆದ್ದ ಗ್ರಾಮದ ರೈತರು ಕರ್ನಾಟಕ ಪ್ರಾಂತ ರೈತ ಸಂಘ ಮತ್ತು ಕರ್ನಾಟಕ ಕೃಷಿ ಕೂಲಿಕಾರರ ಸಂಘದ ನೇತೃತ್ವದಲ್ಲಿ ಪ್ರತಿಭಟನೆ ನಡೆಸಿದರು.

ಫಲ ನೀಡದ ಕಳಪೆ ಗುಣಮಟ್ಟದ, ದುಬಾರಿ ಬೆಳೆಗೆ ಬೀಜ ವಿತರಿಸಿದ ಮಹಿಕೊ ಕಂಪನಿ ವಿರುದ್ಧ ಕ್ರಮ ಕೈಗೊಳ್ಳುವಂತೆ ಹಾಗೂ ಒಪ್ಪಂದದ ಪ್ರಕಾರ ಕ್ವಿಂಟಲ್‌ಗೆ 1070 ರೂಗಳಂತೆ ಪರಿಹಾರ ನೀಡುವಂತೆ ಆಗ್ರಹಿಸಿ ಮೆರವಣಿಗೆ ನಡೆಸಿ ಕೃಷಿ ಜಂಟಿ ನಿರ್ದೇಶಕರಿಗೆ ಮನವಿ ಸಲ್ಲಿಸಿದರು.



ಮೋಸಗಾರ ಮಹಿಕೋ ಕಂಪನಿ ವಿರುದ್ಧ ಕ್ರಮಕ್ಕಾಗಿ ಪ್ರತಿಭಟನೆ

ಹಿಂದುಸ್ತಾನ್ ಟೈಮ್ಸ್ ದಿನಪತ್ರಿಕೆಯ ಸೆಪ್ಟೆಂಬರ್ 16 ರ ಸಂಚಿಕೆಯಲ್ಲಿ ಪ್ರಕಟವಾಗಿರುವ ಆರ್.ಎಸ್.ಎಸ್ ಮುಖವಾಣಿ 'ಪಾಂಚಜನ್ಯ'ದ ಸಂಪಾದಕ ತರುಣ್ ವಿಜಯ್ ದ್ವೇಷದ ಕಿಚ್ಚನ್ನೇ ಕಾರಿದ್ದಾನೆ. ಇದಕ್ಕೆ ಉತ್ತರವಾಗಿ ಪೀಪಲ್ಸ್ ಡೆಮಾಕ್ರಸಿಯ ಸಂಪಾದಕ ಹಾಗೂ ಸಿಪಿಐ(ಎಂ) ಪೊಲಿಟ್ ಬ್ಯೂರೊ ಸದಸ್ಯರಾದ

ಕಾಮ್ರೇಡ್ ಸೀತಾರಾಮ ಯೆಚೂರಿ

ಬರೆದ ಲೇಖನ ಹಿಂದುಸ್ತಾನ್ ಟೈಮ್ಸ್ ಸಪ್ಟೆಂಬರ್ 25 ರ ಸಂಚಿಕೆಯಲ್ಲಿ ಪ್ರಕಟವಾಗಿದ್ದು ನಮ್ಮ ಓದುಗರಿಗಾಗಿ ಅದರ ಸಂಕ್ಷಿಪ್ತ ಅನುವಾದ ಇಲ್ಲಿದೆ.



ದ್ವೇಷದ ರಾಜಕೀಯ

ಪ್ರಜಾಸತ್ತಾತ್ಮಕ, ಜಾತ್ಯಾತೀತ ಗಣರಾಜ್ಯ ಆಗಿರುವ ಭಾರತವನ್ನು ಒಂದು ಫ್ಯಾಸಿಸ್ಟ್ ಹಿಂದೂ ರಾಷ್ಟ್ರವನ್ನಾಗಿಸುವ ಆರ್‌ಎಸ್‌ಎಸ್ ಉದ್ದೇಶವನ್ನು ಮುನ್ನಡೆಸಲು ಅದು ದ್ವೇಷದ ವಿಷವನ್ನು ಕಕ್ಕುವ ಕೆಲಸವನ್ನು ನಿರಂತರವಾಗಿ ನಡೆಸುತ್ತಿದೆ. ಪಾಶವೀ ಶಬ್ದಾಡಂಬರದಿಂದ ಕೂಡಿದ ತರುಣ್ ವಿಜಯ್ ಅವರ ಲೇಖನವು ಧಾರ್ಮಿಕ ಅಲ್ಪಸಂಖ್ಯಾತರ ವಿರುದ್ಧದ ಅಪಪ್ರಚಾರಕ್ಕಾಗಿ ಇತಿಹಾಸವನ್ನು ತಿರುಚುವ ಇನ್ನೊಂದು ಉದ್ದೇಶಪೂರ್ವಕ ಪ್ರಯತ್ನವಾಗಿದೆ.

ವಿಕೃತ ಚರಿತ್ರೆ

ಬೇರೆ ಬೇರೆ ದೇಶೀಯ ರಾಜರುಗಳ ಮೇಲೆ ದಾಳಿ ಮಾಡಿದ ವಿದೇಶಿ ಆಕ್ರಮಣಕಾರರ ಒಂದು ದೊಡ್ಡ ಯಾದಿಯನ್ನೇ ನೀಡಲಾಗಿದೆ. ಮುಸ್ಲಿಂ ದಾಳಿಕೋರರಲ್ಲದೆ ಫ್ರೆಂಚ್ ಮತ್ತು ಪೋರ್ಚುಗೀಸ್ ಆಕ್ರಮಣಕಾರರನ್ನೂ ಪಟ್ಟಿ ಮಾಡಲಾಗಿದೆ. ಆದರೆ ಬ್ರಿಟೀಷರನ್ನು ಮಾತ್ರ ಕೈಬಿಡಲಾಗಿದೆ. ಇದು ಆಕಸ್ಮಿಕವಾಗಿರಲು ಸಾಧ್ಯವಿಲ್ಲ. ವಾಸ್ತವವಾಗಿ ಭಾರತದ ಜನ ತಮ್ಮ ಧಾರ್ಮಿಕ ವ್ಯತ್ಯಾಸಗಳನ್ನು ಬದಿಗಿಟ್ಟು ಸ್ವಾತಂತ್ರ್ಯಕ್ಕಾಗಿ ಹೋರಾಡಿದ್ದು ಇದೇ ಬ್ರಿಟೀಷರ ವಿರುದ್ಧ. ಬಾಬರ್‌ನ ಸಂತತಿಯವನಾದ ಬಹಾದ್ದೂರ್ ಷಾ ಜಾಫರ್‌ನನ್ನು ದೆಹಲಿ ಸಿಂಹಾಸನದ ಮೇಲೆ ಕುಳ್ಳಿರಿಸಲು ಝಾನ್ಸಿಯ ಸಾತ್ವಿಕರಾಣಿ ಲಕ್ಷ್ಮಿಬಾಯಿ ಸಾವಿನವರೆಗೂ ಹೋರಾಡಿದರು.

ಆದರೆ ಇದೇ ಹಿಂದೂ-ಮುಸ್ಲಿಂ ಐಕ್ಯತೆಯನ್ನು ಈ ಖೊಟ್ಟಿ ಹಿಂದುಗಳು ವಿರೋಧಿಸುತ್ತಿದ್ದಾರೆ. ಕೋಮು ದ್ವೇಷದ ಕೆಸರಿನಲ್ಲಿ ಮಾತ್ರ ಇವರು ಹುಲುಸಾಗಿ ಬೆಳೆಯುತ್ತಾರೆ. ಈ ಮತಿಭ್ರಷ್ಟ ಮತೀಯವಾದದ ಕಾರಣದಿಂದಲೇ ಆರ್‌ಎಸ್‌ಎಸ್ ಸ್ವಾತಂತ್ರ್ಯಕ್ಕಾಗಿ ಭಾರತದ ಜನತೆ ನಡೆಸಿದ ಐಕ್ಯ ಸಂಗ್ರಾಮದಲ್ಲಿ ಭಾಗವಹಿಸಿರಲಿಲ್ಲ ಮಾತ್ರವಲ್ಲ ಅನೇಕ ಸಂದರ್ಭಗಳಲ್ಲಿ ಬ್ರಿಟೀಷ್ ವಸಾಹತುವಾದಿಗಳೊಂದಿಗೆ ಶಾಮೀಲಾಗಿದ್ದರು. 1942 ರ 'ಭಾರತ ಬಿಟ್ಟು ತೊಲಗಿ' ಚಳುವಳಿಯ ಕುರಿತು ಅಂದಿನ **ಬಾಂಬೇ ಗೃಹ ಇಲಾಖೆಯ ಹೇಳಿಕೆಯ ದಾಖಲೆ ಹೀಗಿದೆ. "1942 ರ ಅಗಸ್ಟ್‌ನಲ್ಲಿ ಬುಗಿಲೆದ್ದ ಗಲಭೆಗಳಲ್ಲಿ ಸಂಘವು ಭಾಗವಹಿಸಲಿಲ್ಲ ಮಾತ್ರವಲ್ಲ ತನ್ನ ಚಟುವಟಿಕೆಗಳು ಕಾನೂನಿನ ವ್ಯಾಪ್ತಿಯೊಳಗೆ ಇರುವಂತೆ ಎಚ್ಚರವಹಿಸಿತು'.**


"ಆರ್‌ಎಸ್‌ಎಸ್ ಒಂದು ಸಂಘಟನೆಯಾಗಿ ಭಾರತದ ವಿಮೋಚನಾ ಹೋರಾಟದಲ್ಲಿ ಏಕೆ ಭಾಗವಹಿಸಲಿಲ್ಲ?" ಎಂದು ಒಮ್ಮೆ ಅದರ ಮುಖ್ಯ ನಾಯಕರಲ್ಲಿ ಒಬ್ಬರಾದ ನಾನಾಜಿ ದೇಶಮುಖ್ ಪ್ರಶ್ನಿಸಿದ್ದರು. ರಾಷ್ಟ್ರೀಯ ಆಂದೋಲನದ ಸಮಯದಲ್ಲಿ ಆರ್‌ಎಸ್‌ಎಸ್ ರಾಷ್ಟ್ರೀಯ ವಿಮೋಚನಾ ಚಳುವಳಿಯನ್ನು ಬಲವಾಗಿ ವಿರೋಧಿಸುತ್ತಿದ್ದ ಸ್ಥಳೀಯ ಸಂಸ್ಥಾನಗಳೊಂದಿಗೆ ಕೈಜೋಡಿಸಿಕೊಂಡಿತ್ತು. ಭಾರತದೊಂದಿಗೆ ಸೇರ್ಪಡೆಯಾಗಲು ಒಪ್ಪದಿದ್ದ ಕಾಶ್ಮೀರದ ರಾಜಾಹರಿಸಿಂಗ್ ಇವರ ನಿಕಟವರ್ತಿಯಾಗಿದ್ದ. ಈ ವಸ್ತುವನ್ನು ಮರೆ ಮಾಡಲು ಇವರು ಎಡಪಂಥೀಯರ ವಿರುದ್ಧ ಸುಳ್ಳು ಪ್ರಚಾರದಲ್ಲಿ ತೊಡಗಿದರು. ಆದರೆ ಭಾರತದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಎಡಪಂಥೀಯರ ಪಾತ್ರದ ಕುರಿತಾದ ದಾಲೆಗಳಿಂದ ಶ್ರೀಮಂತಗೊಂಡಿರುವ ಇತಿಹಾಸವನ್ನು ಯಾರಿಂದಲೂ ಅಲ್ಲಗಳೆಯಲು ಸಾಧ್ಯವಿಲ್ಲ. 'ಚಲೇ ಜಾವ್' ಚಳುವಳಿಯ 50 ನೇ ವಾರ್ಷಿಕೋತ್ಸವವನ್ನು ಆಚರಿಸುತ್ತಿದ್ದ ಸಂದರ್ಭದಲ್ಲಿ ಸಂಸತ್ತಿನ ಮಧ್ಯರಾತ್ರಿ ಅಧಿವೇಶನವನ್ನು ಉದ್ದೇಶಿಸಿ **ಅಂದಿನ ರಾಷ್ಟ್ರಪತಿ ಡಾ.ಶಂಕರ ದಯಾಳ್‌ಶರ್ಮಾ ಅವರು** ಮಾತನಾಡುತ್ತಾ 1942 ರಲ್ಲಿ ಕಾನ್ಪುರ, ಜಮ್ಷಡ್‌ಪುರ, ಅಹಮ್ಮದದಾಬಾದ್ ಗಿರಣಿಗಳ ಕಾರ್ಮಿಕ ವ್ಯಾಪಕ ಮುಷ್ಕರಗಳ ನಂತರ ದೆಹಲಿಯಿಂದ ಲಂಡನ್ನಿಗೆ ಕಳುಹಿಸಲಾದ ವರದಿಯೊಂದರಲ್ಲಿ ಭಾರತದ ಕಮ್ಯುನಿಸ್ಟರ ಬಗ್ಗೆ ಹೇಳಿದ್ದನ್ನು ಉಲ್ಲೇಖಿಸುತ್ತಾರೆ. **"ಭಾರತ ಕಮ್ಯುನಿಸ್ಟ್ ಪಕ್ಷದ ಅನೇಕ ಸದಸ್ಯರು, ಸಾಬೀತುಪಡಿಸಿರುವಂತೆ ಪಕ್ಷವು ದೃಢವಾದ ಬ್ರಿಟೀಷ್ ವಿರೋಧಿ ಕ್ರಾಂತಿಕಾರಿಗಳಿಂದ ಕೂಡಿದೆ."**

ದ್ವೇಷದಿಂದ ದೇಶ ವಿಭಜನೆಯತ್ತ

"ಮುಸಲ್ಮಾನರ ದ್ವೇಷ ಭಾವನೆಯಿಂದಾಗಿ ನಮ್ಮ ಮಾತೃಭೂಮಿ ವಿಭಜನೆಯಾಯಿತು" ಎಂದು ಆರ್‌ಎಸ್‌ಎಸ್ ಮುಖವಾಣಿಯ ಸಂಪಾದಕರು ಹೇಳುತ್ತಾರೆ. ಇದು ಸತ್ಯ. ಆದರೆ ಇದು ಅರ್ಧಸತ್ಯ ಮಾತ್ರ. ಸಾವರ್ಕರ್ ಕುರಿತು ಬಾರೀ ಮೆಚ್ಚುಗೆ ವ್ಯಕ್ತಪಡಿಸುವ ಇ ವ್ ರ್ ೨

ದ್ವಿ ರಾಷ್ಟ್ರ ಸಿದ್ಧಾಂತದ ಪ್ರತಿಪಾದಕರು


'ಕೋಮುವಾದಿ-ಮೂಲಭೂತವಾದಿ ಕನಸೊಂದೇ-ಮನಸೊಂದೇ



ಗೋಳ್ವಾಳ್ಕರ್



ಸಾವರ್ಕರ್



ಮಹ್ಮದ್ ಅಲಿ ಜಿನ್ನಾ

ದ್ವಿ-ರಾಷ್ಟ್ರ ಸಿದ್ಧಾಂತವನ್ನು ಮೊದಲು ಪ್ರತಿಪಾದಿಸಿದವರು ಸಾವರ್ಕರ್ ಎಂಬುದನ್ನು ಮರೆಮಾಚುತ್ತಾರೆ. 1938 ರಲ್ಲಿ ಹಿಂದೂ ಮಹಾಸಭೆಯ ಅಧ್ಯಕ್ಷೀಯ ಭಾಷಣದಲ್ಲಿ "ಇಂದು ಭಾರತವನ್ನು ಏಕರೂಪದ ರಾಷ್ಟ್ರ ಎಂದು ಪರಿಗಣಿಸಲಾಗುವುದಿಲ್ಲ. ಇಲ್ಲಿ ಮುಖ್ಯವಾಗಿ ಎರಡು ರಾಷ್ಟ್ರಗಳಿವೆ ಹಿಂದು ಮತ್ತು ಮುಸ್ಲಿಂ" ಎಂದು ಸಾವರ್ಕರ್ ಹೇಳಿದ್ದರು. ಮೊಹಮ್ಮದ್ ಅಲಿ ಜಿನ್ನಾ ಈ ಘೋಷಣೆಯನ್ನು ಎತ್ತುವ 3 ವರ್ಷಗಳ ಮೊದಲೇ ಸಾವರ್ಕರ್ ಅದನ್ನು ಎತ್ತಿದ್ದರು. **ಬ್ರಿಟೀಷರು ಈ ಮತೀಯ ಒಡಕನ್ನು ದೇಶ ವಿಭಜಿಸಲು ಚೆನ್ನಾಗಿ ಬಳಸಿಕೊಂಡರು.**

ದೇಶ ವಿಭಜನೆಯ ಆ ಕರಾಳ ದಿನಗಳಲ್ಲಿ ಪಾಕಿಸ್ತಾನಿ ದಾಳಿಕೋರರನ್ನು ಶೇಖ್ ಅಬ್ದುಲ್ಲಾರವರ ನೇತೃತ್ವದಲ್ಲಿ ಕಾಶ್ಮೀರಿ ಮುಸಲ್ಮಾನರು ತಡೆದು ಹಿಮ್ಮೆಟ್ಟಿಸಿದ್ದನ್ನು ಪಾಂಚಜನ್ಯ ಸಂಪಾದಕ ಉದ್ದೇಶ ಪೂರ್ವಕವಾಗಿಯೇ ಉಲ್ಲೇಖಿಸುವುದಿಲ್ಲ.

ಸ್ವತಂತ್ರ ಭಾರತ ಹೇಗಿರಬೇಕು ಎಂಬ ಬಗ್ಗೆ ಆಗ ಮೂರು ವಿಭಿನ್ನ ಅಭಿಪ್ರಾಯಗಳು ಪ್ರಚಲಿತವಾಗಿದ್ದವು. ಭಾರತ ಒಂದು ಪ್ರಜಾಸತ್ತಾತ್ಮಕ ಜಾತ್ಯಾತೀತ ಗಣರಾಜ್ಯವಾಗಿರಬೇಕೆಂದು ಕಾಂಗ್ರೆಸ್ ಪ್ರತಿಪಾದಿಸುತ್ತಿತ್ತು. ಎಡಪಂಥೀಯರು ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ನೂತನ ಗಣರಾಜ್ಯದ ರಾಜಕೀಯ ಸ್ವಾತಂತ್ರ್ಯವು ಜನತೆಯ ಆರ್ಥಿಕ ಸ್ವಾತಂತ್ರ್ಯವಾಗಿ ಪರಿವರ್ತನೆಯಾಗ ಬೇಕೆಂದು ಪ್ರತಿಪಾದಿಸುತ್ತಿದ್ದರು ಮತ್ತು ಇಂದಿಗೂ ಅವರು ಅದನ್ನೇ ಪ್ರತಿಪಾದಿಸುತ್ತಾ ಜನತೆಗೆ ಆರ್ಥಿಕ ಸ್ವಾತಂತ್ರ್ಯ ನೀಡದೇ ಪ್ರಜಾಸತ್ತಾತ್ಮಕ ಜಾತ್ಯಾತೀತ ಗಣರಾಜ್ಯವನ್ನು ಉಳಿಸುವುದೇ ಕಷ್ಟಕರವಾಗುತ್ತದೆ ಎಂಬ ನಿಲುಮೆಯನ್ನು ಹೊಂದಿದವರಾಗಿರುತ್ತಾರೆ. ಭಾರತವನ್ನು ಧಾರ್ಮಿಕ ನೆಲೆಗಟ್ಟಿನ ಮೇಲೆ ರೂಪಿಸಬೇಕೆಂಬುದು ಮೂರನೇಯ ವಾದವಾಗಿತ್ತು. ಇದರಲ್ಲಿ ಎರಡು ಕಣ್ಣೋಟಗಳಿದ್ದವು. ಒಂದು ಆರ್‌ಎಸ್‌ಎಸ್ ಪ್ರತಿ ಪಾದಿಸುವ 'ಹಿಂದೂ ರಾಷ್ಟ್ರ'. ಮತ್ತೆ ಇನ್ನೊಂದು ಮುಸ್ಲಿಂ ಲೀಗ್ ಪ್ರತಿಪಾದಿಸುತ್ತಿದ್ದ 'ಇಸ್ಲಾಂ ರಾಷ್ಟ್ರ' ದೇಶವನ್ನು ಕ್ರೂರವಾಗಿ ವಿಭಜಿಸುವ ಮೂಲಕ ಮುಸ್ಲಿಂ ಲೀಗ್ ತನ್ನ ಉದ್ದೇಶವನ್ನು ಈಡೇರಿಸಿಕೊಂಡಿತು.

ಅಲ್ಪಸಂಖ್ಯಾತರ ಮೇಲೆ ದಾಳಿ ಮಾಡಿದ ಮತ್ತು ಗಲಭೆಗಳನ್ನು ಪ್ರಚೋದಿಸಿದ ಆರೋಪ ಆರ್.ಎಸ್.ಎಸ್ ಮೇಲೆ ಇದೆ. ಈ ಎಲ್ಲಾ ಆಯೋಗಗಳ ನೇತೃತ್ವ ವಹಿಸಿದವರು ಗೌರವಾನ್ವಿತ ನ್ಯಾಯಾಧೀಶರುಗಳಾಗಿದ್ದವರು ಮಾತ್ರವಲ್ಲ ಅವರೆಲ್ಲರೂ ಹಿಂದೂಗಳಾಗಿದ್ದರು.

ಆರ್‌ಎಸ್‌ಎಸ್‌ನ ಹಿಂದೂ ರಾಷ್ಟ್ರ ಸಿದ್ಧಾಂತವನ್ನು ಹಿಂದೂಗಳೇ ಆಗಿದ್ದ ಬಹುಸಂಖ್ಯಾತ ಭಾರತೀಯರು ತಿರಸ್ಕರಿಸಿದರು. ಇದರ ಪರಿಣಾಮವಾಗಿ ಗಾಂಧೀಜಿಯವರ ಜೀವವನ್ನು ಬಲಿ ತೆಗೆದುಕೊಳ್ಳಲಾಯಿತು. ಆರ್.ಎಸ್.ಎಸ್ ಬಿತ್ತಿ ಬೆಳೆಸಿದ ದ್ವೇಷದಿಂದಾಗಿ ಒಬ್ಬ ಹಿಂದು ಮತಾಂಧ ಗಾಂಧೀಜಿಯವರನ್ನು ಕೊಲ್ಲುವಂತಾಯಿತು.

ಹಿಂದುಗಳ ವಿರುದ್ಧದ ದ್ವೇಷವೇ ಕಾಶ್ಮೀರದ ಬಹುಭಾಗವನ್ನು ಪಾಕಿಸ್ತಾನ ತನ್ನ ವಶದಲ್ಲಿಟ್ಟುಕೊಳ್ಳಲು ಕಾರಣವಾಯಿತು ಎಂದು ತರುಣ್ ವಿಜಯ್ ಹೇಳುತ್ತಾನೆ.

ಇಸ್ಲಾಂ ಮೂಲಭೂತ ವಾದಿಗಳು ಹರಡುತ್ತಿರುವ ದ್ವೇಷ ಹಾಗೂ ಮಾಡುತ್ತಿರುವ ಭಯೋತ್ಪಾದಕ ದಾಳಿಗಳನ್ನು ಯಾರೂ ಸಮರ್ಥಿಸಲಾರರು. ಈ ಪಿಡುಗಿನ ವಿಷಯದಲ್ಲಿ ದೇಶದ ಬಹುಸಂಖ್ಯಾತ ಜನತೆ ಒಂದಾಗಿ ನಿಂತು ತಮ್ಮ ದೇಶಪ್ರೇಮವನ್ನು ಮೆರೆದಿದ್ದಾರೆ. ಆದರೆ ದೇಶ ವಿಭಜನೆಯ ಆ ಕರಾಳ ದಿನಗಳಲ್ಲಿ ಪಾಕಿಸ್ತಾನಿ ದಾಳಿಕೋರರನ್ನು ಶೇಖ್ ಅಬ್ದುಲ್ಲಾರವರ ನೇತೃತ್ವದಲ್ಲಿ ಕಾಶ್ಮೀರಿ ಮುಸಲ್ಮಾನರು ತಡೆದು ಹಿಮ್ಮೆಟ್ಟಿಸಿದ್ದನ್ನು ಪಾಂಚಜನ್ಯ ಸಂಪಾದಕ ಉದ್ದೇಶ ಪೂರ್ವಕವಾಗಿಯೇ ಉಲ್ಲೇಖಿಸುವುದಿಲ್ಲ.

ಸಾರ್ವತ್ರಿಕ ದೋಷಾರೋಪಣೆ

ನಾವು ದ್ವೇಷಿಸುವುದನ್ನು ದ್ವೇಷಿಸುತ್ತೇವೆ ಎನ್ನುತ್ತಾರೆ ತರುಣ್ ವಿಜಯ್. ಹೌದು ಆರ್‌ಎಸ್‌ಎಸ್‌ನ 'ಫ್ಯಾಸಿಸ್ಟ್ ಹಿಂದೂ ರಾಷ್ಟ್ರ ಸಿದ್ಧಾಂತ'ವನ್ನು ತಿರಸ್ಕರಿಸಿದ ಬಹುಸಂಖ್ಯಾತ ಹಿಂದುಗಳಂತೆ, ಬಹುಸಂಖ್ಯಾತ ಭಾರತೀಯರು ದ್ವೇಷಿಸುವುದನ್ನು ದ್ವೇಷಿಸುತ್ತಾರೆ. ಆದರೆ ಈ ಖೊಟ್ಟಿ ಹಿಂದುಗಳಲ್ಲ, 1969 ಅಹಮ್ಮದಾಬಾದ್ ಗಲಭೆ, 1970 ರ ಭೀವಂಡಿ, ಜಲಗಾಂವ ಮತ್ತು ಮಹಾಡ್ ಗಲಭೆಗಳು, 1971 ರ ತಲ್ಲಿಚೇರಿ ಗಲಭೆ, 1979 ರ ಜಮ್ಷಡ್‌ಪುರ ಗಲಭೆ, 1982 ರ ಕನ್ಯಾಕುಮಾರಿ ಗಲಭೆ, 1992-93 ಮುಂಬೈ ಗಲಭೆಗಳ ಕುರಿತಾದ ಶ್ರೀಕೃಷ್ಣ ಆಯೋಗ ವರದಿಯಿಂದ ಹಿಡಿದು ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗ ಮತ್ತು ಇತರ ಸ್ವತಂತ್ರ ವಿಚಾರಣೆಗಳು ಬಯಲಿಗೆಳೆದ ಗುಜರಾತ್ ಹತ್ಯಾಕಾಂಡ, ಇವೆಲ್ಲವುಗಳಲ್ಲಿ ಅಲ್ಪಸಂಖ್ಯಾತರ ಮೇಲೆ ದಾಳಿ ಮಾಡಿದ ಮತ್ತು ಗಲಭೆಗಳನ್ನು ಪ್ರಚೋದಿಸಿದ ಆರೋಪ ಆರ್‌ಎಸ್‌ಎಸ್ ಮೇಲೆ ಇದೆ. ಈ ಎಲ್ಲಾ ಆಯೋಗಗಳ ನೇತೃತ್ವ ವಹಿಸಿದವರು ಗೌರವಾನ್ವಿತ ನ್ಯಾಯಾಧೀಶರುಗಳಾಗಿದ್ದವರು ಮಾತ್ರವಲ್ಲ ಅವರೆಲ್ಲರೂ ಹಿಂದೂಗಳಾಗಿದ್ದರು.

ಇಬ್ಬಗೆಯ ಕೋಮುವಾದಿಗಳು

ಭಾರತವನ್ನು ಹಿಂದೂ ರಾಷ್ಟ್ರ ಎಂದು ಘೋಷಿಸಿ ಮುಸಲ್ಮಾನರಿಗೆ ಎರಡನೇ ದರ್ಜೆಯ ನಾಗರಿಕರ ಸ್ಥಾನವನ್ನು ನೀಡಿದರೆ ನಮ್ಮನ್ನು ತಡೆಯುವವರು ಯಾರಿದ್ದಾರೆ ಎಂದು ಕೇಳಲಾಗುತ್ತದೆ. ಆರ್‌ಎಸ್‌ಎಸ್ ಇದನ್ನೇ ಬಯಸಿದ್ದು. ಅಂದಿನ ಆರ್‌ಎಸ್‌ಎಸ್ ಮುಖ್ಯಸ್ಥ ಎಂ.ಎಸ್ ಗೋಳ್ವಾಳ್ಕರ್ 1939 ರಲ್ಲಿ ಬರೆದು ಪ್ರಕಟಿಸಿದಂತೆ "ಹಿಂದುಸ್ತಾನದಲ್ಲಿ ಹಿಂದುಗಳಲ್ಲದವರು ಹಿಂದು ಸಂಸ್ಕೃತಿ ಮತ್ತು ಭಾಷೆಯನ್ನು ಅಂಗೀಕರಿಸಬೇಕು; ಹಿಂದು ಧರ್ಮವನ್ನು ಗೌರವಿಸಲು ಕಲಿಯಬೇಕು; ಹಿಂದು ಜನಾಂಗ ಮತ್ತು ಸಂಸ್ಕೃತಿಯನ್ನು ವೈಭವೀಕರಿಸುವ ವಿಚಾರವಲ್ಲದೆ ಬೇರೆ ಯಾವ ವಿಚಾರವನ್ನು ಮಾಡಕೂಡದು. ತಮ್ಮ ಪ್ರತ್ಯೇಕ ಅಸ್ತಿತ್ವವನ್ನು ಕೈಬಿಟ್ಟು ಹಿಂದು ರಾಷ್ಟ್ರದಲ್ಲಿ ಸೇರ್ಪಡೆಯಾಗಬೇಕು. ಯಾವ ಹಕ್ಕನ್ನು ಕೇಳದೆ, ಯಾವ ರಿಯಾಯ್ತಿಯನ್ನು ಬಯಸದೆ, ಯಾವ ಆದ್ಯತೆಯನ್ನು, ನಾಗರಿಕ ಹಕ್ಕುಗಳನ್ನು ಸಹ ಕೋರದೆ ಬದುಕಬೇಕು". ಇಂತಹ ಫ್ಯಾಸಿಸ್ಟ್ ಯೋಜನೆ ರೂಪುಗೊಳ್ಳುವುದನ್ನು ದೇಶಪ್ರೇಮಿ ಭಾರತೀಯರು ತಡೆಗಟ್ಟಿದರು. ಅವರಲ್ಲಿ ಹೆಚ್ಚಿನವರು ಹಿಂದುಗಳೇ ಆಗಿದ್ದರು.

ಗೋಳ್ವಾಳ್ಕರ್ ಅವರ ಪುಸ್ತಕ ಪ್ರಕಟವಾಗಿ ಎರಡೇ ವರ್ಷಗಳೊಳಗೆ ಜಮಾಯಿತ-ಎ-ಇಸ್ಲಾಮಿ ಸ್ಥಾಪನೆಯಾಯಿತು. 1941 ರಲ್ಲಿ ಅವರ ಸ್ಥಾಪನಾ ಸಮ್ಮೇಳನ ಪಠಾಣಕೋಟದಲ್ಲಿ ಮೌಲನಾ ಅಬುಲ್ ಆಲಾ ಮೌದುದಿ ನೇತೃತ್ವದಲ್ಲಿ ನಡೆಯಿತು. ಈತ ಆರ್‌ಎಸ್‌ಎಸ್ ವಿಚಾರಗಳಿಗೆ ತನ್ನ ವಿರೋಧ ಏನೂ ಇಲ್ಲ ಎಂದು ಘೋಷಿಸಿದ. ಏಕೆಂದರೆ ಆತ ಪ್ರತಿಪಾದಿಸುತ್ತಿದ್ದ "ಇಸ್ಲಾಂ ರಾಷ್ಟ್ರದಲ್ಲಿ ಮುಸಲ್ಮಾನರಲ್ಲದವರಿಗೆ ಯಾವುದೇ ಹಕ್ಕುಗಳನ್ನು ನೀಡಲಾಗದು" ಎಂದೇ ಆತನ ಪ್ರತಿಪಾದನೆಯಾಗಿತ್ತು.

ಹಿಂದು ಮತೀಯವಾದ ಮತ್ತು ಇಸ್ಲಾಂ ಮೂಲಭೂತವಾದ ಪರಸ್ಪರ ಒಂದು ಇನ್ನೊಂದರ ಕುಮ್ಮಕ್ಕಿನಿಂದ ಬೆಳೆಯುತ್ತವೆ. ಎರಡೂ ಕೋಮು ದ್ವೇಷವನ್ನು ಹರಡುತ್ತಾ ದೇಶದ ಏಕತೆ ಮತ್ತು ಸಮಗ್ರತೆಯನ್ನು ನಾಶ ಮಾಡುತ್ತದೆ. ಎರಡೂ ತಾವು ಪ್ರತಿನಿಧಿಸುವುದಾಗಿ ಹೇಳುವ ಜನರಲ್ಲಿ ಬಹುಸಂಖ್ಯಾತರ ಹಿತಗಳಿಗೆ ವಿರುದ್ಧವಾಗಿಯೇ ಕೆಲಸ ಮಾಡುತ್ತಿವೆ. ಇಂತಹ ಮತೀಯ ರಾಜಕೀಯವನ್ನು ಭಾರತದ ಬಹುಸಂಖ್ಯಾತ ಹಿಂದುಗಳು ಮತ್ತು ಮುಸಲ್ಮಾನರು ತಿರಸ್ಕರಿಸುವ ಕಾರಣದಿಂದಲೇ ಭಾರತ ಒಂದು ಜಾತ್ಯಾತೀತ ದೇಶವಾಗಿದೆ. ಇಂದು ಇಂತಹ ಫ್ಯಾಸಿಸ್ಟ್ ಮತೀಯ ಶಕ್ತಿಗಳಿಂದ ದೇಶವನ್ನು ಉಳಿಸುವುದು ಈ ದೇಶದ ಬಹುಸಂಖ್ಯಾತರ ಜವಾಬ್ದಾರಿಯಾಗಿದೆ.

• ಅನುವಾದ: **ನಿತ್ಯಾನಂದಸ್ವಾಮಿ**

ಕರ್ನಾಟಕ ಏಕೀಕರಣವಾಗಿ 57 ವರುಷಗಳು ಗತಿಸುತ್ತಿವೆ. ಈಚಿನ ಅವಧಿಯಲ್ಲಿ ರಾಜ್ಯವನ್ನು ಒಡೆಯುವ ಮಾತು ಹಾಗೂ ಪ್ರಯತ್ನಗಳು ತಲೆ ಎತ್ತುತ್ತಿವೆ. ಕರ್ನಾಟಕ ಕೈಗಾರಿಕಾ-ವಾಣಿಜ್ಯ ಬೆಳವಣಿಗೆಗಳ ಸ್ವರೂಪಕ್ಕೂ ವಿಭಜವಾದಿ ಶಕ್ತಿಗಳ ಕೇಳಿಕೆಗೂ ಇರುವ ಸಂಬಂಧಗಳನ್ನು ವರ್ಗ ದೃಷ್ಟಿಕೋನದಿಂದ ವಿಶ್ಲೇಷಿಸುತ್ತಾ, ಕರ್ನಾಟಕದ ಐಕ್ಯತೆಯ ರಕ್ಷಣೆ, ಅದರ ಪ್ರಗತಿಯು ಕಾರ್ಮಿಕ ವರ್ಗದಿಂದ ಮಾತ್ರವೇ ಸಾಧ್ಯ ಹೇಗೆಂಬುದನ್ನು ಸ್ಪಷ್ಟವಾಗಿ ಗುರುತಿಸಿ ಚಿಂತನೆ ಹಂಚಿಕೊಂಡಿದ್ದಾರೆ ಸಿಪಿಐ(ಎಂ)ನ ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ವಿ.ಜೆ.ಕೆ.ನಾಯರ್‌ರವರು

ಸಮಗ್ರ ಕರ್ನಾಟಕ ಉಳಿಯುವುದೆಂತು?

ಪ್ರತಿಯೊಂದು ರಾಜ್ಯದಲ್ಲೂ ಅಲ್ಲಿಯ ಬೂರ್ಜ್ವಾ ವರ್ಗಕ್ಕಿಂತ ಹೆಚ್ಚಾಗಿ ಕಾರ್ಮಿಕ ಆಂದೋಲನವೇ ಭಾಷಾವಾರು ಪ್ರಾಂತಗಳ ರಚನೆಯ/ ಆಂದೋಲನ ಆರಂಭಿಸಿದ್ದು ಮತ್ತು ಸಕ್ರಿಯವಾಗಿ ನಡೆಸಿದ್ದು. ಕಾರ್ಮಿಕ ವರ್ಗ ತನ್ನ ಸ್ವಂತ ಐಕ್ಯತೆ ಮತ್ತು ಸಮಗ್ರತೆಯ ಹಿತಾಸಕ್ತಿಯಿಂದಾಗಿಯೇ ಏಕೀಕರಣದ, ಸಮಗ್ರೀಕರಣದ ಶಕ್ತಿಗಳ ಮಿತ್ರರು, ವಿಭಜನಕಾರೀ ಶಕ್ತಿಗಳ ಶತ್ರುಗಳು.


ಕರ್ನಾಟಕದ ಐಕ್ಯತೆಗೆ ಸವಾಲೆಂದರೆ ಕರ್ನಾಟಕ ದುಡಿಯುವ ಜನಗಳಲ್ಲಿ ವಿಭಜನೆ ಬರುತ್ತದೆ. ಅದನ್ನು ಮೀರಿ ನಿಲ್ಲುವುದು ಕಷ್ಟದ ಕೆಲಸ. ಇದು ನಮ್ಮನ್ನು ಒಂದು ಪ್ರಶ್ನೆಯ ಬಗ್ಗೆ ಯೋಚಿಸುವಂತೆಯೂ ಮಾಡಿದೆ. ಭಾಷಾವಾರು ಪ್ರಾಂತ್ಯದ ರಚನೆಯ ಬಗ್ಗೆ ಆಸಕ್ತಿಯಿರುವುದು ರಾಜ್ಯದ ಬೂರ್ಜ್ವಾ ವರ್ಗಕ್ಕೆ ಮಾತ್ರವೇ ಏನು ಎಂಬುದೇ ಆ ಪ್ರಶ್ನೆ?

ರಾಷ್ಟ್ರ ಪ್ರಭುತ್ವಗಳ ರಚನೆಯ ಬಗ್ಗೆ ಕಾರ್ಮಿಕ ವರ್ಗ ಆಂದೋಲನಕ್ಕೆ ತನ್ನದೇ ಒಂದು ನಿಶ್ಚಿತ ನಿಲುವಿದೆ. ಯಾವುದೇ ರಾಷ್ಟ್ರ ಪ್ರಭುತ್ವ ಅಲ್ಲಿನ ಬೂರ್ಜ್ವಾ ವರ್ಗದ 'ಹಿತಾಸಕ್ತಿಯಿಂದ ರಚನೆಯಾಗುತ್ತದೆ. ಏಕೆಂದರೆ ಅದಕ್ಕೆ ತನ್ನ ಸರಕುಗಳ ಮತ್ತು ಸೇವೆಗಳ ಉತ್ಪಾದನೆ ಮತ್ತು ವಿತರಣೆ ಚಟುವಟಿಕೆಗಳನ್ನು ವಿಸ್ತರಿಸಲು ಇದು ಬೇಕಾಗುತ್ತದೆ ಎಂಬುದು ನಿಜ.ಇತಿಹಾಸ ಈಗಾಗಲೇ ಇದನ್ನು ಸಾಬೀತುಪಡಿಸಿದೆ.

ಆದರೆ ಭಾಷೆ ಅಥವಾ ಸಂಸ್ಕೃತಿ ಮಾತ್ರವೇ ಐಕ್ಯತೆಯ ಆಧಾರವಾಗಲು ಸಾಧ್ಯವಿಲ್ಲ ಎಂಬುದನ್ನು ಗಮನಿಸಬೇಕು. ಹಾಗಿದ್ದರೆ ಒಂದೇ ಭಾಷೆಯಾಡುವ ಅಥವಾ ಒಂದೇ ಸಂಸ್ಕೃತಿಯ ಭಿನ್ನ ದೇಶಗಳು ಇರಲು ಸಾಧ್ಯವಿರುತ್ತಿರಲಿಲ್ಲ. ಬೂರ್ಜ್ವಾ ವರ್ಗದ ಹಿತಾಸಕ್ತಿಗಳು ರಾಷ್ಟ್ರ ಪ್ರಭುತ್ವಗಳ ರಚನೆಯಲ್ಲಿ ಎಲ್ಲಕ್ಕಿಂತ ಹೆಚ್ಚಿನ ಪ್ರಭಾವ ಬೀರುತ್ತವೆ. ಅದೇ ರೀತಿ ಬೂರ್ಜ್ವಾ ವರ್ಗದೊಂದಿಗೇ ಹುಟ್ಟುವ ಕಾರ್ಮಿಕ ವರ್ಗಕ್ಕೆ ಈ ರಾಷ್ಟ್ರಪ್ರಭುತ್ವದ ಐಕ್ಯತೆಯ ಬಗ್ಗೆ ಸತತವಾದ, ಹಾಗೂ ಅದಕ್ಕಿಂತಲೂ ಹೆಚ್ಚಿನ ಆಸಕ್ತಿಯಿರುತ್ತದೆಂಬುದು ಸಹಜವೇ ತಾನೇ. ಕಾರ್ಮಿಕ ವರ್ಗಕ್ಕೆ ರಾಷ್ಟ್ರೀಯವಾದಕ್ಕಿಂತ ಹೆಚ್ಚಿನದೆಂದರೆ ಸಮಾಜವಾದ ಮಾತ್ರವೇ. ಅದಿಲ್ಲದಿದ್ದರೆ ಕಾರ್ಮಿಕ ವರ್ಗದ ಅಂತರ್ರಾಷ್ಟ್ರೀಯತೆಗೆ ಮತ್ತು ಶೋಷಣೆಯ ವಿರುದ್ಧದ ಹೋರಾಟಕ್ಕೇ ಸಂಚಕಾರ ಬರುತ್ತದೆ. ಇವೆಲ್ಲಾ ಸಾಮಾನ್ಯವಾಗಿ ಎಲ್ಲರೂ ಒಪ್ಪಿರುವ ನಿಲುವುಗಳು- ಇವನ್ನು ವಿವರಿಸುವುದು ಈ ಲೇಖನದ ಉದ್ದೇಶವಲ್ಲ.

ಕಾರ್ಮಿಕ ಆಂದೋಲನದ ಆಸಕ್ತಿ

ನವಂಬರ್ 1956 ರಲ್ಲಿ ಭಾರತದಲ್ಲಿ ರಾಜ್ಯಗಳ ಪುನರ್ರಚನೆ ಪ್ರತಿ ರಾಜ್ಯದ ಬೂರ್ಜ್ವಾ ವರ್ಗಕ್ಕಿಂತ ಹೆಚ್ಚಾಗಿ ಕಾರ್ಮಿಕ ವರ್ಗದ ಆಂದೋಲನ ತೋರಿಸಿದ ಆಸಕ್ತಿಯಿಂದ ಸಾಧಿಸಿದ್ದು. 1905 ರಷ್ಟು ಹಿಂದೆಯೇ ಬಂಗಾಳದ ವಿಭಜನೆಯನ್ನು ಆಗ ಉದಯವಾಗುತ್ತಿದ್ದ ರಾಷ್ಟ್ರೀಯ ಆಂದೋಲನ ಪ್ರತಿರೋಧಿಸಿತ್ತು ಮತ್ತು ಅದರೊಂದಿಗೇ ಆಗ ಆರಂಭಿಕ ರೂಪದಲ್ಲಿದ್ದ ಕಾರ್ಮಿಕ ವರ್ಗದ ಆಂದೋಲನವೂ ಹೆಜ್ಜೆಯಿಟ್ಟು ಸಾಗಿತು ಎಂಬುದನ್ನು ಗಮನಿಸಬೇಕು. ನಂತರ 1908 ರಲ್ಲಿ ತಿಲಕರಿಗೆ ಜೈಲುಶಿಕ್ಷೆ ವಿಧಿಸಿದಾಗ ಕಾರ್ಮಿಕ ವರ್ಗ ಬ್ರಿಟೀಷರ ವಿರುದ್ಧ ನಿಂತಿತು. ಇಲ್ಲಿ ಇನ್ನೂ ಆರಂಭಿಕ ಸ್ಥಿತಿಯಲ್ಲಿದ್ದ ಕಾರ್ಮಿಕ ವರ್ಗ ಸುಮಾರಾಗಿ ಮುಖಂಡತ್ವವನ್ನೇ ವಹಿಸಿತು. ರಸ್ತೆಗಳು ಲೇಖನಿಯ ರಕ್ಷಣೆಗೆ ಎದ್ದುನಿಂತವು. ಅರ್ಥಾತ್ ರಸ್ತೆಗಳಲ್ಲಿ ಕಾರ್ಮಿಕ ವರ್ಗ 'ಸ್ವರಾಜ್ಯ' ದ ಸಂಪಾದಕರ ಅಂದರೆ ತಿಳಕರ ರಕ್ಷಣೆಗೆ ಎದ್ದುನಿಂತಿತು ಎಂಬ ಲೆನಿನ್ ರ ಪ್ರಖ್ಯಾತ ಹೇಳಿಕೆ ಈ ಹಿನ್ನೆಲೆಯಲ್ಲಿ ಬಂತು.



ಮೊದಲ ಭಾಷಾವಾರು ಪ್ರಾಂತವಾದ ಆಂಧ್ರಪ್ರದೇಶದ ರಚನೆಯ ಬೇಡಿಕೆ ಆ ಪ್ರದೇಶದಲ್ಲಿ ಕ್ರಾಂತಿಕಾರಿಗಳು ನಡೆಸುತ್ತಿದ್ದ ಆಂಧ್ರ ಮಹಾಸಭಾದಿಂದ ಬಂದಿತ್ತು ಎಂಬುದನ್ನು ಗಮನಿಸಬೇಕು. ಅದೇ ರೀತಿ ಕಾರ್ಮಿಕ ಆಂದೋಲನ ಮಹಾರಾಷ್ಟ್ರ ಏಕೀಕರಣ, ಮಹಾ ಗುಜರಾತ್ ಮತ್ತು ಐಕ್ಯ ಕೇರಳ ಇತ್ಯಾದಿ ಬೇಡಿಕೆಗಳನ್ನು ಎತ್ತಿತು. ಹೀಗೆ ಈ ಪ್ರತಿಯೊಂದು ರಾಜ್ಯದಲ್ಲೂ ಅಲ್ಲಿಯ ಬೂರ್ಜ್ವಾ ವರ್ಗಕ್ಕಿಂತ ಹೆಚ್ಚಾಗಿ ಕಾರ್ಮಿಕ ಆಂದೋಲನವೇ ಭಾಷಾವಾರು ಪ್ರಾಂತಗಳ ರಚನೆಯ ಆಂದೋಲನ ಆರಂಭಿಸಿದವರು ಎಂಬುದನ್ನು ನೋಡಬಹುದು. ಏಕೆಂದರೆ ಭಾಷಾವಾರು ಪ್ರಾಂತ್ಯಗಳ ರಚನೆಯ ವೇಳೆಗೆ ತಮಿಳುನಾಡಿನಂತಹ ಕೆಲವು ರಾಜ್ಯಗಳ ಪ್ರಾದೇಶಿಕ ಬೂರ್ಜ್ವಾ ವರ್ಗವನ್ನು ಬಿಟ್ಟರೆ ಒಟ್ಟಾರೆಯಾಗಿ ಇಡೀ ದೇಶದ ಬೂರ್ಜ್ವಾ ವರ್ಗಕ್ಕೆ ಪ್ರತ್ಯೇಕ ಐಡೆಂಟಿಟಿ ಇರಲಿಲ್ಲ.

ಕರ್ನಾಟಕದ ಬೂರ್ಜ್ವಾ ವರ್ಗ

ಇದು ನೇರವಾಗಿ ನಮ್ಮನ್ನು ಕರ್ನಾಟಕದ ಬೂರ್ಜ್ವಾ ವರ್ಗದ ಸ್ವರೂಪ ಅದರ ಕೈಗಾರಿಕಾ ಮತ್ತು ವಾಣಿಜ್ಯ ಚಟುವಟಿಕೆ ಇತ್ಯಾದಿಗಳನ್ನು ಕುರಿತ ಪ್ರಶ್ನೆಗೆ ಒಯ್ಯುತ್ತದೆ. ಇದರಿಂದ ಮಾತ್ರವೇ ಈಗ ಕರ್ನಾಟದಲ್ಲಿ ತಲೆಯೆತ್ತಿರುವ ಹೊಲಸು ವಿಭಜನಕಾರೀ ಶಕ್ತಿಗಳ ನಿಜವಾದ ಆಧಾರವೇನು ಎಂಬುದಕ್ಕೆ ಉತ್ತರ ಪಡೆಯಲು ಸಾಧ್ಯ.

ಕೇವಲ ಕರ್ನಾಟಕದಲ್ಲಿ ಮಾತ್ರವೇ ತನ್ನ ಹಿತಾಸಕ್ತಿ ಇರುವ, ಅದರಿಂದಾಗಿ ಕರ್ನಾಟಕದ ಐಕ್ಯತೆ ಮತ್ತು ಸಮಗ್ರತೆ ಉಳಿಸಬೇಕೆನ್ನುವ ಒಂದು ಬೂರ್ಜ್ವಾವನ್ನು ಕಾಣುವುದು ಕಷ್ಟ ನಿಜ, 12ನೇ ಶತಮಾನದ ಕೈಕಸಬು ದಾರರಿಂದ ಹಿಡಿದು ವಸಾಹತುಶಾಹೀ ಕಾಲದಲ್ಲಿ ಅವೆಲ್ಲಾ ನಾಶವಾಗುವವರೆಗಿನ ಅವಧಿಯಲ್ಲಿ ಕರ್ನಾಟಕ ತನ್ನದೇ ಆದ ಕೈಗಾರಿಕಾ ಉತ್ಪಾದಕರನ್ನು ಹೊಂದಿತ್ತು. ವಾಸ್ತವವಾಗಿ ದಖ್ಖಣದ ಬಿಜಾಪುರ, ಗೋಲ್ಕೊಂಡ ಮತ್ತು ಅಹಮದನಗರದ ಪ್ರಭುತ್ವಗಳು ಮತ್ತು ಬಂದರು ಪ್ರದೇಶ ಗೋವಾದ ಸಮೃದ್ಧಿಯ ಆಧಾರ ಇದೇ. ವೀರಶೈವ ಆಂದೋಲನ, ಮೇಲೆ ಹೇಳಿದ ರಾಜಪ್ರಭುತ್ವಗಳು ಹಾಗೂ ವಿಜಯನಗರ ಸಾಮ್ರಾಜ್ಯದ ಆಧಾರ ಈ ಆರ್ಥಿಕ ತಳಹದಿಯೇ. ಆದರೆ ವಸಾಹತುಶಾಹಿ ಇದನ್ನೆಲ್ಲಾ ಹೊಂಚುಹಾಕಿ ಹಾಳುಗೆಡವಿ ಇಡೀ ಉತ್ತರ ಕನಾಟಕವನ್ನು ಖಾಲಿಮಾಡಿತು. ಕೊಂಕಣದ ಆರಂಭಾವಸ್ಥೆಯಲ್ಲಿದ್ದ ಬೂರ್ಜ್ವಾಗಳನ್ನು ಅದು ಗೋಮಂತಕದಿಂದ ಬೇರೆಡೆಗೆ ಹರಡಿ ಹೋಗುವಂತೆ ಮಾಡಿತು.

ದಕ್ಷಿಣ ಕನ್ನಡದ ಬೂರ್ಜ್ವಾಗಳು

ದಕ್ಷಿಣ ಕನ್ನಡಕ್ಕೆ ಓಡಿ ಬಂದ ಕೊಂಕಣಿ ಬೂರ್ಜ್ವಾಗಳ ಮೂಲವನ್ನು ನಾವು ಗೋವಾದಲ್ಲಿ ಕಾಣಬಹುದು. ಪೋರ್ಚುಗೀಸರ ಆಗಮನದ ಹಿನ್ನೆಲೆಯಲ್ಲಿ ಇದು ನಡೆಯಿತು. ಅದೇ ರೀತಿ ಶೆಟ್ಟಿಗಳು, ಬ್ಯಾರಿಗಳು ಮತ್ತು ದಕ್ಷಿಣದಾದ್ಯಂತ ಎಲ್ಲಾ ಮಾದರಿಯ ಹೊಟೆಲುಗಳನ್ನು ಬೆಳೆಸಿದ ಉಡುಪಿ ಬ್ರಾಹ್ಮಣರ ಮೂಲಗಳನ್ನು ಗುರುತಿಸಬಹುದು. ಬೀಡಿ ಉತ್ಪಾದಕರು ಬ್ಯಾಂಕರುಗಳು, ಹೊಟೆಲ್ ಉದ್ಯಮಿಗಳು ಮುಂತಾದವರು ಕರ್ನಾಟಕದಲ್ಲಿಯೇ ವಿಶೇಷ ಹಿತಾಸಕ್ತಿಯಿರುವ ಸ್ಥಳೀಯ ಬೂರ್ಜ್ವಾಗಳು. ಕರ್ನಾಟಕದ ಬೇಡಿಕೆಯೊಂದಿಗೆ ಸಮಗ್ರೀಕರಿಸುವ ಅವರ ಅಗತ್ಯದಿಂದಾಗಿ ಪ್ರತ್ಯೇಕ ತುಳುನಾಡಿನ ಬೇಡಿಕೆ ಅಲ್ಲಿ ಮೊಳೆಯಲ್ಲಿಲ್ಲ. ಪ್ರತ್ಯೇಕತೆ ಮತ್ತು ವಿಭಜನೆಯಿಂದ ಅವರು ಕಳಕೊಳ್ಳುವಂತದ್ದೇ ಹೆಚ್ಚಾಗಿತ್ತು. ದಕ್ಷಿಣ ಕನ್ನಡದಲ್ಲಿ ಉಗಮಿಸಿದ ಬ್ಯಾಂಕುಗಳು, ಹೊಟೆಲುಗಳು ಉಳಿಯಲು ಐಕ್ಯತೆ ಮತ್ತು ಸಮಗ್ರತೆಯಿಂದಷ್ಟೇ ಸಾಧ್ಯ, ಪ್ರತ್ಯೇಕತೆಯಿಂದಲ್ಲ.



ಪ್ರತ್ಯೇಕ ರಾಜ್ಯಕ್ಕಾಗಿ ಧ್ವಜಾರೋಹಣ

ತಮ್ಮ ಆದಿವೈಭವವನ್ನು ಮತ್ತೆ ಪಡೆಯಬೇಕೆನ್ನುವ ಕೊಡವರ ವಿಷಯದಲ್ಲಿ ಹೀಗಿಲ್ಲ. ಅವರು ಕರ್ನಾಟಕದ ಏಕತೆಯಿಂದ ಪ್ರಯೋಜನವಿರುವ ಬೂರ್ಜ್ವಾಗಳಲ್ಲ. ಪ್ಲಾಂಟೇಶನುಗಳನ್ನು ಪಡೆದ ಪ್ಲಾಂಟರುಗಳು ಮತ್ತು ವಸಾಹತುಶಾಹಿ ಯಜಮಾನರ ಆಳುಗಳು, ಬಂಡವಾಳಶಾಹಿಯ ಗತಿಶೀಲತ್ವವನ್ನು ಪ್ರದರ್ಶಿಸದೆ ಭೂಹಿತಾಸಕ್ತಿಗಳನ್ನು, ಚಲನರಹಿತ ಹಿತಾಸಕ್ತಿಗಳನ್ನು ಪ್ರತಿಪಾದಿಸಲು ಪ್ರಯತ್ನಿಸುತ್ತವೆ.

ಉತ್ತರ ಕರ್ನಾಟಕದ ಬಣಜಿಗ ಮತ್ತು ಇತರ ವ್ಯಾಪಾರೀ ಬಂಡವಾಳಿಗರು ಸ್ಥಳೀಯರು ಮತ್ತು ಭೂಹಿತಾಸಕ್ತಿಗಳೊಂದಿಗೆ ನಿಕಟ ಸಂಬಂಧವಿರುವವರು. ಅದು ಮುಂಬೈ ಕರ್ನಾಟಕದಲ್ಲೂ ಹೌದು, ಹೈದರಾಬಾದ್ ಕರ್ನಾಟಕದಲ್ಲೂ ಹೌದು. ಈ ಪ್ರದೇಶಗಳಲ್ಲೂ ಅವುಗಳಲ್ಲಿ ಐಕ್ಯತೆಯಿಲ್ಲ. ಆದ್ದರಿಂದ ಹೈಕೋರ್ಟ್ ಪೀಠದ ಪ್ರಶ್ನೆ ಬಂದಾಗ ಅವರು ತಂತಮ್ಮನಗರಕ್ಕಾಗಿ ವಾದಿಸುತ್ತಾರೆ. ಇಲ್ಲಿಯ ಮೂಲದ ಯಾವುದೇ ಬೂರ್ಜ್ವಾ ವರ್ಗಕ್ಕೆ ಇಡೀ ರಾಜ್ಯವ್ಯಾಪಿ ಹಿತಾಸಕ್ತಿಗಳನ್ನು ನಾವು ಕಾಣುವುದಿಲ್ಲ ಪ್ರದೇಶಗಳಿಗೆ ಸೀಮಿತವಾದ ಕೆಲವು ಶಿಕ್ಷಣ ಸಂಸ್ಥೆಗಳು ಮತ್ತು 'ವಿಜಯಕರ್ನಾಟಕ'ದ ವಿ.ಆರ್.ಎಲ್. ಗುಂಪನ್ನು ಬಿಟ್ಟರೆ. ಆದರೆ ತಮ್ಮ ಪ್ರಾದೇಶಿಕ ಆಕಾಂಕ್ಷೆಗಳಿಂದಾಗಿ ಆಳುವ ವರ್ಗದ ರಾಜಕಾರಣಿಗಳು ಈ ಪ್ರದೇಶಗಳಲ್ಲಿ ವಿಭಜನಕಾರೀ ಆಂದೋಲನಗಳಿಗೆ ಆಧಾರವಾಗಿರುವುದನ್ನು ಕಾಣುತ್ತೇವೆ.

ಒಗ್ಗಟ್ಟು ತರುವ ಶಕ್ತಿ

ಕರ್ನಾಟಕದ ಏಕತೆಯ ಶಕ್ತಿಯಿರುವುದು ಏಕತೆಯಲ್ಲಿ ಆಸಕ್ತಿಯಿರುವ ಬೂರ್ಜ್ವಾ ವರ್ಗದಲ್ಲಿ ಮತ್ತು ಅದಕ್ಕಿಂತ ಹೆಚ್ಚಾಗಿ ಕಾರ್ಮಿಕ ವರ್ಗ, ಪ್ರಜಾಪ್ರಭುತ್ವವಾದಿ ಶಕ್ತಿಗಳು ಮತ್ತು ಪ್ರಗತಿಪರ ಬುದ್ಧಿಜೀವಿಗಳಲ್ಲಿ. 1980 ರ ದಶಕದಲ್ಲಿ ಕಂಡಂತೆ ಅಖಿಲ ಕರ್ನಾಟಕ ಚಳುವಳಿಗಳನ್ನು ಎಬ್ಬಿಸಿದ್ದು ಕಾರ್ಮಿಕ ಮತ್ತು ರೈತ ಆಂದೋಲನಗಳು. ಈ ಆಂದೋಲನಗಳೇ ಕಾಂಗ್ರೆಸ್ ಆಳ್ವಿಕೆಗೆ ಸವಾಲೊಡ್ಡಿ ಜನತಾ ಆಳ್ವಿಕೆಯನ್ನು ತಂದದ್ದು. ಈ ಕಾರ್ಮಿಕ ಆಂದೋಲನ ಆಧುನಿಕ ಕೈಗಾರಿಕೆಯಿಂದಾಗಿ ಸೃಷ್ಟಿಯಾದದ್ದು. ಈ ಆಧುನಿಕ ಕೈಗಾರಿಕೆಯ ಆರಂಭದ ತಳಹದಿಯನ್ನು ಟಿಪ್ಪು ಸುಲ್ತಾನ್ ಕಾಲದಲ್ಲಿ ಹಾಕಿದ್ದರೆ, ನಂತರ ಅದು ವಿಶ್ವೇಶ್ವರಯ್ಯ ಮತ್ತು ನೆಹರೂ ಮಾದರಿಯಲ್ಲಿ ಬೆಳೆಯಿತು. ಈ ಯಾವ ಪ್ರಯತ್ನಗಳಲ್ಲೂ ಕರ್ನಾಟಕದ ಸ್ಥಳೀಯ ಬೂಜ್ವಾ ವರ್ಗ ನೇತೃತ್ವದಲ್ಲಿದುದನ್ನು ನಾವು ಕಂಡಿಲ್ಲ. ಜನತಾ ಆಳ್ವಿಕೆ ಮುರಿದು ಬೀಳುವಲ್ಲಿ ನಾವು ಈ ಕೈಗಾರಿಕಾ ಆಧಾರ ದುರ್ಬಲಗೊಂಡಿರುವುದನ್ನು ಮತ್ತು ಜಾತಿವಾದಿ ಶಕ್ತಿಗಳು ತಲೆಎತ್ತಿರುವುದನ್ನು ಕಾಣಬಹುದು. ಇದು ಕಾಂಗ್ರೆಸ್ ಆಳ್ವಿಕೆ ಮತ್ತೆ ಬರಲು ಮತ್ತು ಜತೆಜತೆಗೆ ಕೋಮುವಾದದ ಹಾಗೂ ಜಾಗತೀಕರಣದ ಶಕ್ತಿಗಳ ಉದಯಕ್ಕೆ ಅವಕಾಶವಾಯಿತು. ನಿಜ, ಇನ್‌ಫೋಸಿಸ್‌ನಂತಹ ಹೊಸ ಬಂಡವಾಳಶಾಹಿಗಳು ಇಡೀ ಕರ್ನಾಟಕದ ಏಕತೆಯಲ್ಲಿ ಆಸಕ್ತಿ ವಹಿಸುವಷ್ಟು ಇನ್ನೂ ಬೇರು ಬಿಟ್ಟಿಲ್ಲ.

ಸಮಾನ ಸ್ವರೂಪದ ಸೇವಾ ಪರಿಸ್ಥಿತಿಗಳು ಮತ್ತು ಸೌಲಭ್ಯಗಳಿಗಾಗಿ ಮತ್ತು ಅಭಿವೃದ್ಧಿಗಾಗಿ ಕಾರ್ಮಿಕ ಆಂದೋಲನ ನಡೆದರೆ ಮತ್ತು ಅವರು ತಮ್ಮ ಜೀವನ ಪರಿಸ್ಥಿತಿಗಳ ರಕ್ಷಣೆಗಾಗಿ, ರಾಷ್ಟ್ರೀಯ ಉದ್ದಿಮೆಗಳು, ಕೃಷಿ, ಭಾಷೆ ಮತ್ತು ಸಂಸ್ಕೃತಿಯ ಹಿತಾಸಕ್ತಿಗಳನ್ನು ಸಕ್ರಿಯವಾಗಿ ಪ್ರತಿಪಾದಿಸಿದರೆ ಸಹಜವಾಗಿಯೇ ಕಾರ್ಮಿಕ ಆಂದೋಲನ ಒಂದು →



ಕೇರಳದಲ್ಲಿ ಆಂಥೋನಿ ನೇತೃತ್ವದ ಕೆಟ್ಟ ಸರ್ಕಾರ ತೊಲಗಲಿ ಎಂದು ಜನ ಪ್ರತಿಭಟಿಸುತ್ತಿದ್ದಾರೆ. ಕಾಂಗ್ರೆಸ್ ಉಪ ಚುನಾವಣೆಯಲ್ಲಿ ಮಣ್ಣು ಮುಕ್ಕಿದೆ. ಇದರ ಬೆನ್ನಲ್ಲೆ ಕಾಂಗ್ರೆಸ್ ಒಳಗಿನ ಜಗಳ ಈಗ ಬೀದಿಯಲ್ಲಿನ ಕದನ. ಎರಡೂ ಗುಂಪುಗಳು ಶಕ್ತಿ ಪ್ರದರ್ಶನಕ್ಕೆ ಇಳಿದಿವೆ. ಹೀಗಿರಾವುಗ ಆಂಥೋನಿ ಕಮ್ಯುನಿಸ್ಟರ ಮೇಲೆ ಯಾಕೆ ಹರಿ ಹಾಯುವುದು? ಅಲ್ಲಿನ ಆಸ್ಫೋಟಕಾರಿ ರಾಜಕೀಯ ಬೆಳವಣಿಗೆಗಳ ಬಗ್ಗೆ ವಿಶ್ಲೇಷಿಸಿ - ಸನ್ನಿವೇಶದ ಮೌಲ್ಯಮಾಪನ ಮಾಡಿದ್ದಾರೆ ಸಿಪಿಐ(ಎಂ) ನ ಪಿ.ಬಿ. ಸದಸ್ಯರಾದ ಲೇಖಕರು.

ಬಿಕ್ಕಟ್ಟಿನಲ್ಲಿ ಕೇರಳದ ಯುಡಿಎಫ್ ಸರ್ಕಾರ

ಎಸ್.ರಾಮಚಂದ್ರ ಪಿಳ್ಳೆ

ಕೇರಳದ ಕಾಂಗ್ರೆಸ್ ನೇತೃತ್ವದ ಸಂಯುಕ್ತರಂಗ ಸರ್ಕಾರವು ತೀವ್ರ ಬಿಕ್ಕಟ್ಟಿನಲ್ಲಿದೆ. ಎರ್ನಾಕುಲಂ ಲೋಕಸಭಾ ಉಪ ಚುನಾವಣೆಯಲ್ಲಿ ಸಿಪಿಐ(ಎಂ) ನಿಂದ ಸೋಲನ್ನು ಅನುಭವಿಸಿದ ನಂತರವಂತೂ ಇದು ಇನ್ನಷ್ಟು ತೀವ್ರಗೊಂಡಿದೆ. ಕಳೆದ ಅಸೆಂಬ್ಲಿ ಚುನಾವಣೆಯಲ್ಲಿ ಎಡಪ್ರಜಾಸತ್ತಾತ್ಮಕ ರಂಗ (ಎಲ್‌ಡಿಎಫ್)ವನ್ನು ಸೋಲಿಸುವ ಏಕೈಕ ಉದ್ದೇಶದಿಂದ ಕಮ್ಯುನಿಸ್ಟ್ ವಿರೋಧಿ ಕೂಟವನ್ನು ರಚಿಸಿಕೊಂಡಿತ್ತು. ತೀವ್ರಗೊಂಡ ಬಿಕ್ಕಟ್ಟಿನ ಹಿನ್ನೆಲೆಯಲ್ಲಿ ಪುನಃ ಕಮ್ಯುನಿಸ್ಟ್ ವಿರೋಧಿ ಧ್ವನಿಸುರುಳಿಯನ್ನು ಮುಖ್ಯಮಂತ್ರಿ ಎ.ಕೆ.ಆಂತೋನಿ ಹಾಡುತ್ತಿದ್ದಾರೆ.

ಆದರೆ ಕಾಂಗ್ರೆಸ್ಸಿನ ಪ್ರಮುಖ ಮುಖಂಡರಾದ ಕೆ.ಕರುಣಾಕರನ್ ಹಾಗೂ ಕೇರಳ ಪ್ರದೇಶ ಕಾಂಗ್ರೆಸ್ ಸಮಿತಿಯು ಅಧ್ಯಕ್ಷರಾದ ಕೆ.ಮುರಳೀಧರನ್ ಅವರು 'ಇಂದಿನ ರಾಜಕೀಯ ಪರಿಸ್ಥಿತಿಯಲ್ಲಿ ಕಮ್ಯುನಿಸ್ಟ್ ವಿರೋಧಿ ನಿಲುವಿಗೆ ಯಾವುದೇ ಅರ್ಥವಿಲ್ಲ' ಎಂದು ಅಂತೋನಿಯವರನ್ನು ಸಾರ್ವಜನಿಕವಾಗಿ ಹೀಯಾಳಿಸಿದ್ದಾರೆ.

ಜನವಿರೋಧಿ ಸರ್ಕಾರ

ಕೇರಳದಲ್ಲಿ ಈವರೆಗೆ ಅಧಿಕಾರಕ್ಕೆ ಬಂದ ಸರ್ಕಾರಗಳಲ್ಲಿ ಅತ್ಯಂತ ಕೆಟ್ಟ ಸರ್ಕಾರ ಎಂದು ಕಾಂಗ್ರೆಸ್ ನೇತೃತ್ವದ ಅಂತೋನಿ ಸರ್ಕಾರ ಹೆಸರು ಪಡೆದಿದೆ. ಬಹುಸಂಖ್ಯಾತ ಮತ್ತು ಅಲ್ಪಸಂಖ್ಯಾತ ಕೋಮುವಾದಿಗಳಿಗೆ ಶರಣಾಗುತ್ತಿರುವ ಕಾಂಗ್ರೆಸ್ ಸರ್ಕಾರದ ನೀತಿಗಳಿಂದಾಗಿ ಪರಂಪರಾಗತ ಕೋಮುಸೌಹಾರ್ದತೆಗೆ ಧಕ್ಕೆ ಬಂದಿದ್ದು ಅಲ್ಲಲ್ಲಿ ಕೋಮುಗಲಭೆಗಳಾಗಿವೆ. ಕಳೆದ ಎರಡು ವರ್ಷಗಳಲ್ಲಿ ಕೋಮುಗಲಭೆಗಳಿಂದಾಗಿ 18 ಜನರು ಹತ್ಯೆಗೀಡಾಗಿದ್ದಾರೆ. ವಿಶ್ವಹಿಂದೂ ಪರಿಷತ್ ಸಂಘಟಿಸಿದ ತ್ರಿಶೂಲ ಹಂಚಿಕೆ ನಿಲ್ಲಿಸಲು, ಕೋಮು ಗಲಭೆಗಳನ್ನು ಹತ್ತಿಕ್ಕಲು ಯಾವುದೇ ದಿಟ್ಟ ಕ್ರಮಗಳನ್ನು ಈ ಸರ್ಕಾರ ಕೈಗೊಳ್ಳಲಿಲ್ಲ.

ಕಲ್ಲಿಕೋಟೆ(ಕೋಝಿಕೋಡ್) ಬಳಿಯ ಮರಾಡ್ ಗ್ರಾಮದಲ್ಲಿ ಕಳೆದ ವರ್ಷ ಹಿಂದೂ ಕೋಮುವಾದಿಗಳು ಧಾಳಿ ನಡೆಸಿದಾಗ, ಆರೋಪಿಗಳ ಮೇಲೆ ಕ್ರಮಕೈಗೊಳ್ಳಲು ಅಂತೋನಿ ಸರ್ಕಾರ ಹಿಂದೇಟು ಹಾಕಿತ್ತು. ಈ ಬಾರಿ ಮುಸ್ಲಿಂ ಕೋಮುವಾದಿಗಳು 9 ಜನ ಅಮಾಯಕರನ್ನು ಬಲಿತೆಗೆದುಕೊಂಡ ಸಂದರ್ಭದಲ್ಲಿ ಯಾವುದೇ ಮುಂಜಾಗ್ರತಾ ಕ್ರಮವನ್ನು ತೆಗೆದುಕೊಳ್ಳಲು ಅಂತೋನಿ ಸರ್ಕಾರ ವಿಫಲವಾದುದು ಮಾತ್ರವಲ್ಲದೆ, ದಂಗೆಯಲ್ಲಿ ಒಳಗಾದವರಿಗೆ ಪರಿಹಾರ, ಪರ್ಯಾಯ ವ್ಯವಸ್ಥೆ ಮಾಡಲು ವಿಫಲವಾಯಿತು. ಬದಲಾಗಿ ಬಹುಸಂಖ್ಯಾತ ಕೋಮುವಾದಿಗಳ ಕೆಲವು ಒತ್ತಾಯಗಳಿಗೆ ಬಲಿಯಾಯಿತು. ಮಾತ್ರವಲ್ಲದೆ ಅಲ್ಪಸಂಖ್ಯಾತ ಕೋಮುವಾದಿಗಳ ಸಂಘಟನೆಗಳಾದ ಪಿಡಿಪಿ, ಎನ್‌ಡಿಎಫ್‌ಗಳನ್ನು ನಿಯಂತ್ರಿಸಲು ವಿಫಲವಾಗಿತ್ತು.

ಅಂತೋನಿ ಸರ್ಕಾರದ ಆರ್ಥಿಕ ನೀತಿಯಿಂದಾಗಿ ಜನಸಾಮಾನ್ಯರ ಜೀವನ ಬಿಗಡಾಯಿಸಿದೆ. ಏಶಿಯಾ ಅಭಿವೃದ್ಧಿ ಬ್ಯಾಂಕ್ (ಎಡಿಬಿ)ನಿಂದ ಸಾಲ ಪಡೆಯಲು, ಜನ ವಿರೋಧಿ ಶರತ್ತುಗಳನ್ನು ಒಪ್ಪಿಕೊಳ್ಳಲಾಗಿತ್ತು. ಸಾರ್ವಜನಿಕ ಉದ್ದಿಮೆಗಳ ಖಾಸಗೀಕರಣ ಹೆಚ್ಚುತ್ತಿದೆ. ಸರ್ಕಾರದ ನೀತಿಗಳಿಂದಾಗಿ ನಾರು, ಗೇರು, ಬೀಡಿ, ಕೈಮಗ್ಗ, ಮೀನುಗಾರಿಕೆ ಮೊದಲಾದ ಉದ್ದಿಮೆಗಳು ತೀವ್ರ ಬಿಕ್ಕಟ್ಟಿಗೆ ಸಿಲುಕಿವೆ. ಇದರಿಂದಾಗಿ ಲಕ್ಷಾಂತರ ಜನರು ಉದ್ಯೋಗ ಕಳೆದುಕೊಂಡಿರುವುದು ಮಾತ್ರವಲ್ಲದೆ, ಇನ್ನುಳಿದವರು ಮಧ್ಯವರ್ತಿಗಳ, ಫ್ಯಾಕ್ಟರಿ ಮಾಲಕರ ಶೋಷಣೆಗೆ ಒಳಗಾಗಿದ್ದಾರೆ. ಕೃಷಿ ಉತ್ಪನ್ನಗಳ ಬೆಲೆ ಕುಸಿತದಿಂದಾಗಿ ಸಂಕಷ್ಟಕ್ಕೀಡಾದ ರೈತರ, ಕೃಷಿಕೂಲಿಕಾರರ ನೆರವಿಗೆ ಧಾವಿಸಲು ಸರ್ಕಾರ ತಿರಸ್ಕರಿಸಿತು. ಆದ್ದರಿಂದಲೇ ಕೇರಳದಲ್ಲೂ ಸಹ ರೈತರ, ಕೃಷಿ ಕೂಲಿಕಾರರ ಆತ್ಮಹತ್ಯೆ ಹೆಚ್ಚಾಗುತ್ತಿದೆ.

ಸರ್ಕಾರದ ವಿವಿಧ ಇಲಾಖೆಗಳಲ್ಲಿ, ಸಾರ್ವಜನಿಕ ಉದ್ದಿಮೆಗಳಲ್ಲಿ, ಹೊಸ ನೇಮಕಾತಿಗಳನ್ನು ರದ್ದು ಪಡಿಸಲಾಗಿದೆ. ವಿದ್ಯುತ್ ದರ ವಿಪರೀತ ಹೆಚ್ಚಿಸಲಾಗಿದೆ. ಆರೋಗ್ಯ ಕ್ಷೇತ್ರವನ್ನು ಖಾಸಗೀಯವರಿಗೆ ತೆರೆದಿಟ್ಟುದರ ಫಲವಾಗಿ ಬಡಜನರ ಕೈಗೆ ಎಟುಕದಂತಾಗಿದೆ.

ಜಾತಿವಾದಿ, ಕೋಮುವಾದಿ ಸಂಸ್ಥೆಗಳಿಗೆ ಹಾಗೂ ವ್ಯಾಪಾರಿ ವರ್ಗಕ್ಕೆ ಶಿಕ್ಷಣ ಕ್ಷೇತ್ರವನ್ನು ವಹಿಸಲಾಗಿದ್ದು, ಈ ವರ್ಷ ಒಂದರಲ್ಲೇ 45 ಇಂಜಿನಿಯರಿಂಗ್ ಕಾಲೇಜು, 5 ಮೆಡಿಕಲ್ ಕಾಲೇಜು, 19 ನರ್ಸಿಂಗ್, 3 ಫಾರ್ಮಸಿ, 2 ಡೆಂಟಲ್, 6 ಆಯುರ್ವೇದಿಕ್, 3 ಹೋಮಿಯೋಪತಿ ಮತ್ತು 38 ಇತರ ಕಾಲೇಜುಗಳನ್ನು ಖಾಸಗಿ ಕ್ಷೇತ್ರದಲ್ಲಿ ತೆರೆಯಲು ಅನುಮತಿ ನೀಡಲಾಗಿದೆ. ಈ ಸಂಸ್ಥೆಗಳಿಗೆ ಅನುಕೂಲವಾಗುವಂತೆ ಸರ್ಕಾರಿ ಕಾಲೇಜುಗಳಲ್ಲೂ ಶುಲ್ಕ ಹೆಚ್ಚಿಸಲಾಗಿದ್ದು, ಇದೇ ನೀತಿ ಮುಂದುವರಿದಲ್ಲಿ ಜನಸಾಮಾನ್ಯರ ಮಕ್ಕಳು ತಮ್ಮ ವಿದ್ಯಾಭ್ಯಾಸವನ್ನು ಮುಂದುವರಿಸಲು ಸಾಧ್ಯವಿಲ್ಲ.

ವಿಕೇಂದ್ರೀಕರಣಕ್ಕೆ ವಿರೋಧ

ಹಿಂದಿನ ಎಲ್‌ಡಿಎಫ್ ಸರ್ಕಾರವು ಆರಂಭಿಸಿದ ಅಧಿಕಾರ ವಿಕೇಂದ್ರೀಕರಣದ ಪ್ರಕ್ರಿಯೆಯನ್ನು ಅಂತೋಣಿ ಸರ್ಕಾರವು ಕುಂಠಿತಗೊಳಿಸಿದೆ. ಪಂಚಾಯತ್ ರಾಜ್ ಸಂಸ್ಥೆಗಳಿಗೆ ನೀಡುತ್ತಿರುವ ಅನುದಾನದಲ್ಲಿ ತೀವ್ರ ಕಡಿತವನ್ನು ಮಾಡುತ್ತಿದ್ದು, ಪ್ರಜಾಸತ್ತಾತ್ಮಕವಾಗಿ ಚುನಾಯಿತ ಸಂಸ್ಥೆಗಳಲ್ಲಿ, ನಾಮಕರಣಗೊಂಡ ಸದಸ್ಯರನ್ನು ತುರುಕಿಸುವ ಮೂಲಕ ಪ್ರಜಾಪ್ರಭುತ್ವ ಪ್ರಕ್ರಿಯೆಗೆ ಮಾರಕವಾಗಿದೆ. ಹಾಗೆಯೇ ಸಹಕಾರಿ ಕ್ಷೇತ್ರದಲ್ಲೂ ಆಡಳಿತ ಮಂಡಳಿಗೆ, ನಾಮಕರಣದ ಮೂಲಕ ತಮ್ಮದೇ ಜನರನ್ನು ನೇಮಿಸಲಾಗುತ್ತಿದೆ.

ಪರಿಶಿಷ್ಟ ಪಂಗಡಗಳಿಗೆ ಭೂಮಿ ನೀಡುವ ಬದಲಾಗಿ, ಅರಣ್ಯ ಭೂಮಿಯಿಂದ ಅವರನ್ನು ಒಕ್ಕಲೆಬ್ಬಿಸಿದುದು ಮಾತ್ರವಲ್ಲದೆ, ಇದನ್ನು ಪ್ರತಿಭಟಿಸಿದಾಗ ಲಾಠಿ ಚಾರ್ಜ್, ಗೋಲಿಬಾರು ಮೂಲಕ ಹಲವರ ಸಾವಿಗೆ ಕಾರಣವಾಗಿತ್ತು, ಅಂತೋಣಿ ಸರ್ಕಾರ. ನ್ಯಾಯಾಂಗ ತನಿಖೆಗೆ ಒತ್ತಾಯಿಸಿದ ವಿರೋಧಿ ನಾಯಕರುಗಳಿಗೂ ಛಡಿ ಏಟು ನೀಡಿದ ಸರ್ಕಾರ, ಸಂಸತ್ ಸದಸ್ಯರು, ಶಾಸಕರುಗಳನ್ನು ಸಹ ಬಿಟ್ಟಿರಲಿಲ್ಲ. ಇಂತಹ ಸರ್ವಾಧಿಕಾರಿ ನೀತಿಯ ವಿರುದ್ಧ ಜನ ಸಿಡಿದೆದ್ದರು. ಅದರ ಫಲವಾಗಿಯೇ ಎರ್ನಾಕುಲಂ ಚುನಾವಣೆಯಲ್ಲಿ ತೀವ್ರ ಸೋಲನ್ನು ಅನುಭವಿಸಬೇಕಾಯ್ತು.

ಇನ್ನಷ್ಟು ಆಳಕ್ಕೆ ಒಳಜಗಳ :

ಕೇರಳದ ಕಾಂಗ್ರೆಸ್ ಪಕ್ಷದಲ್ಲಿ ಈಗಾಗಲೇ 5 ಗಂಪುಗಳಿವೆ. ಎ.ಕೆ.ಅಂತೋಣಿ ಮತ್ತು ಕೆ.ಕರುಣಾಕರನ್ ಅವರದ್ದು ಎರಡು ಪ್ರಮುಖ ಗುಂಪುಗಳಾಗಿದ್ದರೆ, ಎಐಸಿಸಿ ಪ್ರಧಾನಕಾರ್ಯದರ್ಶಿ ವಯಲಾರ್ ರವಿ, ಸಹಕಾರ್ಯದರ್ಶಿ ರಮೇಶ್ ಚೆನ್ನಿತ್ತಲಾ ಹಾಗೂ ಕೇರಳ ಅಸೆಂಬ್ಲಿ ಸ್ಪೀಕರ್ ವಕ್ಕಂ ಪುರುಷೋತ್ತಮನ್ ಇವರುಗಳು ಇನ್ನುಳಿದ ಗುಂಪಿನನಾಯಕರು. ಈ ಎಲ್ಲಾ ಗುಂಪುಗಳನ್ನು ಒಂದಾಗಿಡಲು ಸಿಪಿಐ(ಎಂ) ವಿರೋಧಿ ಘೋಷಣೆಯನ್ನು ಮೊಳಗಿಸಲಾಗಿತ್ತು.

ಆದರೆ ಜನರ ವಿರೋಧ ತೀವ್ರವಾಗುತ್ತಿದ್ದಂತೆ, ಈ ಗುಂಪುಗಳಲ್ಲಿನ ಒಳಜಗಳ ತೀವ್ರಗೊಳ್ಳುತ್ತಿದೆ. ಸಂಯುಕ್ತರಂಗ ಸರ್ಕಾರದ ಕಾರ್ಮಿಕ ವಿರೋಧಿ ನೀತಿ, ಬಹುಸಂಖ್ಯಾತ ಮತ್ತು ಅಲ್ಪಸಂಖ್ಯಾತ ಕೋಮುವಾದಿಗಳಿಗೆ ಶರಣು, ಸಾರ್ವಜನಿಕ ಉದ್ದಿಮೆಗಳ ಖಾಸಗೀಕರಣ, ರೈತರ ಹಿತಾಸಕ್ತಿ ಕಾಪಾಡುವಲ್ಲಿನ ವಿಫಲತೆ, ರಾಜಕೀಯ ವಿರೋಧಿಗಳ ಮೇಲಿನ ದಬ್ಬಾಳಿಕೆ ಇತ್ಯಾದಿ ನೀತಿಗಳನ್ನು ಕರುಣಾಕರನ್ ಗುಂಪು ತೀವ್ರವಾಗಿ ಟೀಕಿಸುತ್ತಿದೆ. ಇತ್ತೀಚಿನ ಎರ್ನಾಕುಲಂ ಲೋಕಸಭಾ ಉಪಚುನಾವಣೆಯಲ್ಲಿ ಕೇರಳ ಅಸೆಂಬ್ಲಿ ಅಧ್ಯಕ್ಷರಾದ ವಕ್ಕಂ ಪುರುಷೋತ್ತಮನ್ ನೇರವಾಗಿ ಭಾಗವಹಿಸಿದ್ದನ್ನು ಕರುಣಾಕರನ್ ಮತ್ತವರ ಸ್ನೇಹಿತರು ವಿರೋಧಿಸಿದ್ದಾರೆ. ಸಂಯುಕ್ತರಂಗದ ಕೆಲವು ಘಟಕಗಳು ಸಹಾ ಮುಖ್ಯಮಂತ್ರಿ ಎ.ಕೆ.ಅಂತೋಣಿ ಅವರ ಕಾರ್ಯವೈಖರಿಯನ್ನು ಟೀಕಿಸಿವೆ.

ಇದೀಗ ಕರುಣಾಕರನ್ ಮತ್ತು ಆಂತೋನಿ ಗುಂಪು ಅಲ್ಲಲ್ಲಿ ಪರಸ್ಪರ ವಿರೋಧಿ ಸಮಾವೇಶಗಳನ್ನು ನಡೆಸುತ್ತಿದೆ. ಮುಖ್ಯಮಂತ್ರಿ ಬದಲಾವಣೆ ಆಗಲೇಬೇಕೆಂದು ಕರುಣಾಕರನ್ ಕಡೆಯವರು ಪಟ್ಟು ಹಿಡಿದಿದ್ದಾರೆ. 140 ಸದಸ್ಯರ ಕೇರಳ ಅಸೆಂಬ್ಲಿಯಲ್ಲಿ ಸಂಯುಕ್ತ ರಂಗಕ್ಕೆ 100 ಸದಸ್ಯ ಬಲವಿದ್ದು, ಎಡ ಪ್ರಜಾಸತ್ತಾತ್ಮಕ ರಂಗಕ್ಕೆ 140 ಸದಸ್ಯ ಬಲವಿದೆ. ಅವಿಶ್ವಾಸ ನಿರ್ಣಯ ಮಂಡನೆಯಾದಲ್ಲಿ 71 ಸದಸ್ಯರ ಮತ ಬೇಕಾಗುತ್ತದೆ. ಇದು ಕಷ್ಟಸಾಧ್ಯ ಎನ್ನಬಹುದಾದರೂ ಅಂತೋನಿ ಸರ್ಕಾರ ಉರುಳುವುದನ್ನು ಬಹುಸಂಖ್ಯಾತ ಜನರು ಬಯಸುತ್ತಾರೆ.

ಸಮಗ್ರ ಕರ್ನಾಟಕ ಉಳಿಯುವುದೆಂತು?

ಒಗ್ಗಟ್ಟು ತರುವ ಶಕ್ತಿಯಾಗಿ ಮೂಡಿಬರುತ್ತದೆ. ಅವರು ಮಾತ್ರವೇ ಕರ್ನಾಟಕ ಐಕ್ಯತೆ ಮತ್ತು ಸಮಗ್ರತೆಯನ್ನು, ಜೊತೆಗೆ ರಾಷ್ಟ್ರೀಯ ಐಕ್ಯತೆಯನ್ನು ಮತ್ತು ಶ್ರಮಜೀವಿಗಳ ಅಂತರ್‌ರಾಷ್ಟ್ರೀಯತೆಯನ್ನು ರಕ್ಷಿಸಲು ಸಾಧ್ಯ.

ಕೇರಳ ಮತ್ತು ಬಂಗಾಳದಲ್ಲಿನ ಬೂರ್ಜ್ವಾಗಳು ವಿಚ್ಛಿದ್ರಕಾರಿ ನೀತಿಗಳನ್ನು ಅನುಸರಿಸಿದರೂ ಅಲ್ಲಿಯ ಅಭಿವೃದ್ಧಿಯ ವೇಗವನ್ನು ಕಾದುಕೊಳ್ಳಲು ಸಾಧ್ಯವಾದದ್ದು ಕಾರ್ಮಿಕ ಆಂದೋಲನದ ಯಶಸ್ಸಿನಿಂದಾಗಿ ಎಂಬುದನ್ನು ನಾವು ಸ್ಪಷ್ಟವಾಗಿ ಕಾಣುತ್ತೇವೆ. ಅದೇ ರೀತಿ ಕರ್ನಾಟಕದ ಕಾರ್ಮಿಕ ವರ್ಗ ಮಾತ್ರವೇ ಪ್ರಗತಿಪರ ಶಕ್ತಿಗಳ ನಿಕಟ ಸಹಕಾರದೊಂದಿಗೆ ಕರ್ನಾಟಕದ ಐಕ್ಯತೆ ಮತ್ತು ಸಮಗ್ರತೆಯನ್ನು ರಕ್ಷಿಸಿ ಅಭಿವೃದ್ಧಿಯನ್ನು ಸಾಧಿಸಲು ಸಾಧ್ಯ. ಈ ಪ್ರಗತಿಪರ ಶಕ್ತಿಗಳಲ್ಲಿ ಕರ್ನಾಟಕದ ಅಭಿವೃದ್ಧಿಯಲ್ಲಿ ಆಸಕ್ತಿಯಿರುವ ಬೂರ್ಜ್ವಾ ವರ್ಗವೂ ಸೇರುತ್ತದೆ.


ಈ ಒಗ್ಗಟ್ಟಿನ ಮತ್ತು ಸಮಗ್ರೀಕರಣದ ಪ್ರಭಾವ ಬೀರುವ ಶಕ್ತಿ ಮೂಲಭಾಷೆಯದ್ದೇ ಆಗಬೇಕೆಂದಿಲ್ಲ. ಆರ್ಥಿಕ ಶಕ್ತಿಗಳು ಏಕೀಕರಣ ಮತ್ತು ಸಮಗ್ರೀಕರಣದ ಪ್ರಭಾವ ಬೀರುತ್ತವೆ. ಇತರ ಭಾಷೆಗಳ ಬಂಡವಾಳಶಾಹಿಗಳ ಒಡೆತನದ ಕನ್ನಡ ಮುದ್ರಣ ಅಥವಾ ದೃಶ್ಯ ಮಾಧ್ಯಮಗಳು ಕನ್ನಡದ ಬಳಕೆ, ಪ್ರಸಾರ, ಕನ್ನಡ ಸಾಹಿತ್ಯ ಮತ್ತು ಸಂಸ್ಕೃತಿಯ ಪ್ರಸಾರವನ್ನು ಬೆಳೆಸುತ್ತಿರುವುದು ಏಕೀಕರಣದ ಶಕ್ತಿಗಳು ಯಾವುವು ಎಂಬುದಕ್ಕೆ ಉತ್ತಮ ಉದಾಹರಣೆಗಳು. ಅದೇ ರೀತಿ ಇನ್ನೊಂದೆಡೆ ಸಾರ್ವಜನಿಕ ಆಸ್ತಿಗಳನ್ನು ಮಾರುವ, ಭೂಮಿ, ಕಬಳಿಸುವ ಮತ್ತು ಅಭಿವೃದ್ಧಿಯನ್ನು ನುಂಗಿಹಾಕುವ ರಾಜಕಾರಣಿಗಳ ಸ್ವಾರ್ಥ ಹಿತಾಸಕ್ತಿಗಳನ್ನು ವಿಭಜನಕಾರೀ ಶಕ್ತಿಗಳಾಗಿ ಕಾಣಬಹುದು.

ಕಾರ್ಮಿಕ ವರ್ಗ ತನ್ನ ಸ್ವಂತ ಐಕ್ಯತೆ ಮತ್ತು ಸಮಗ್ರತೆಯ ಹಿತಾಸಕ್ತಿಯಿಂದಾಗಿಯೇ ಮೇಲೆ ಹೇಳಿದ ಏಕೀಕರಣದ, ಸಮಗ್ರೀಕರಣದ ಶಕ್ತಿಗಳ ಮಿತ್ರರು, ವಿಭಜನಕಾರೀ ಶಕ್ತಿಗಳ ಶತ್ರುಗಳು.

ಆದ್ದರಿಂದ ನಾವು ಕಾರ್ಮಿಕ ಕರ್ನಾಟಕವನ್ನು ಹಾಡಿ ಹೊಗಳೋಣ, ಅದರ ಐಕ್ಯತೆ ಮತ್ತು ಅಭಿವೃದ್ಧಿಯ ಪಣ ತೊಡೋಣ.

(ಕೃಪೆ : ಸಿಐಟಿಯು ಸುದ್ದಿ)

ಬಿಕ್ಕಟ್ಟಿಗೆ ನೂಕುವ ಕೆಪಿಟಿಸಿಎಲ್‌ನ ಹೊಸ ಸೂತ್ರಕ್ಕೆ ಆಕ್ಷೇಪಣೆ



ವಿದ್ಯುತ್‌ದರಗಳನ್ನು ಮತ್ತೆ ಹೆಚ್ಚಿಸಬೇಕೆಂಬ ಬೇಡಿಕೆಯನ್ನು ಮಂಡಿಸಿರುವ ಕೆಪಿಟಿಸಿಎಲ್, ಪ್ರತಿತಿಂಗಳೂರು ದರ ಏರಿಸುವಂತಹ ಅಪಾಯಕಾರಿಯಾದ ಹೊಸ ಸೂತ್ರ ಮಂಡಿಸಿದೆ. ಇದಕ್ಕೆ ಆಕ್ಷೇಪಣೆ ಸಲ್ಲಿಸಿದ ವಿವರಗಳು

ಆಗಾಗ ವಿದ್ಯುತ್ ದರ ಹೆಚ್ಚಿಸುವ ಕೆ.ಪಿ.ಟಿ.ಸಿ.ಎಲ್. ನೀತಿಗೆ ಸಿ.ಪಿಐ(ಎಂ) ವಿರೋಧ

ವಿದ್ಯುತ್ ಖರೀದಿ ಮತ್ತು ಇತರ ವೆಚ್ಚ ಹೊಂದಾಣಿಕೆ ಸೂತ್ರದ (POCA) ಹೆಸರಿನಲ್ಲಿ ತಿಂಗಳಿಗೊಮ್ಮೆ ವಿದ್ಯುತ್ ದರಗಳಲ್ಲಿ ಏರು ಪೇರು ಮಾಡಲು ಅವಕಾಶ ಮಾಡಿ ಕೊಡುವಂತೆ ಕೆ.ಪಿ.ಟಿ.ಸಿ.ಎಲ್. ಸಲ್ಲಿಸಿರುವ ಕೋರಿಕೆ ಕಾನೂನು ಬಾಹಿರವಾಗಿದೆ ಮತ್ತು ಯಾವುದೇ ರೀತಿಯಲ್ಲಿ ನ್ಯಾಯ ಸಮ್ಮತ ವಾದುದಲ್ಲ ಎಂದು ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗಕ್ಕೆ ಸಲ್ಲಿಸಿರುವ ಆಕ್ಷೇಪಣೆಯಲ್ಲಿ ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಅಭಿಪ್ರಾಯಪಟ್ಟಿದೆ. ತಿಂಗಳಿಗೊಮ್ಮೆ ಬದಲಾಗುವ ವಿದ್ಯುತ್ ದರಗಳಿಂದಾಗಿ ಯೋಜಿತ ಅಭಿವೃದ್ಧಿ ಸಾಧ್ಯವಾಗದೆ, ಅಗ್ಗದ ವಿದೇಶಿ ಆಮದುಗಳ ಸ್ಪರ್ಧೆಯನ್ನು ಎದುರಿಸಲಾರದೆ ಈಗಾಗಲೇ ಬಿಕ್ಕಟ್ಟಿನಲ್ಲಿರುವ ಕೈಗಾರಿಕೆ ಮತ್ತು ಕೃಷಿರಂಗ ಇನ್ನಷ್ಟು ಬಿಕ್ಕಟ್ಟಿಗೆ ಸಿಲುಕಲಿದೆ. ಆದ್ದರಿಂದ ಈ ಸೂತ್ರವನ್ನು ತಿರಸ್ಕರಿಸಬೇಕೆಂದು ಸಿಪಿಐ(ಎಂ) ಒತ್ತಾಯಿಸಿದೆ.

ವಿದ್ಯುಚ್ಛಕ್ತಿ ಕಾಯಿದೆ 2003ರ ಕಲಂ 62(4) ಮತ್ತು ಕರ್ನಾಟಕ ವಿದ್ಯುಚ್ಛಕ್ತಿ ಕಾಯಿದೆ 1999, 27 (10)ರ ಪ್ರಕಾರ ಒಂದು ಆರ್ಥಿಕ ವರ್ಷದಲ್ಲಿ ಒಂದಕ್ಕಿಂತ ಹೆಚ್ಚು ಬಾರಿ ವಿದ್ಯುತ್ ದರ ಬದಲಾವಣೆ ಮಾಡಲು ಅವಕಾಶ ವಿರುವುದಿಲ್ಲ. ಮಾತ್ರವಲ್ಲದೆ, 2001-02 ರಿಂದ ಆರಂಭವಾಗಿ ಮೂರನೇ ಬಾರಿಗೆ ಕೆ.ಪಿ.ಟಿ.ಸಿ.ಎಲ್. ಮೂರು ಬೇರೆ ಬೇರೆ ಸೂತ್ರಗಳನ್ನು ನೀಡಿದೆ. ಮೂರು ಸೂತ್ರಗಳಲ್ಲೂ ಯಾವುದೇ ತಾಳ ಮೇಳವಿಲ್ಲ. ಈ ಸೂತ್ರಗಳಿಗೆ ಯಾವುದೇ ವೈಜ್ಞಾನಿಕ ವಾಸ್ತವಿಕ ಆಧಾರವಿಲ್ಲವೆಂಬುದನ್ನು ಇದೇ ಸಾಬೀತುಪಡಿಸುತ್ತದೆ. ಕೆ.ಇ.ಆರ್.ಸಿ. ಹಿಂದೆ ಎರಡು ಬಾರಿ ಈ ರೀತಿಯ ಪ್ರಸ್ತಾಪಗಳನ್ನು ತಿರಸ್ಕರಿಸಿದ್ದು ಈ ಬಾರಿಯೂ ತಿರಸ್ಕರಿಸ ಬೇಕೆಂದು ಸಿಪಿಐ(ಎಂ) ಮನವಿಮಾಡಿದೆ.

ವರ್ಷಕ್ಕೊಮ್ಮೆ ಅಥವಾ ಎರಡು ವರ್ಷಕ್ಕೊಮ್ಮೆ ವಿದ್ಯುತ್ ದರ ಹೆಚ್ಚಿಸಿದಲ್ಲಿ, ಜನರ ತೀವ್ರ ಪ್ರತಿರೋಧವನ್ನು ಎದುರಿಸಬೇಕಾಗುತ್ತದೆ. ಬದಲಾಗಿ, ತಿಂಗಳಿಗೊಮ್ಮೆಸ್ವಲ್ಪ, ಸ್ವಲ್ಪವೇ ಏರಿಸಬಹುದು ಎಂದು ಕೆ.ಪಿ.ಟಿ.ಸಿ.ಎಲ್. ಭಾವಿಸಿದಂತಿದೆ. ಉದಾರೀಕರಣದ ಭಾಗವಾಗಿ ಬಿಜೆಪಿ ನೇತೃತ್ವದ ವಾಜಪೇಯಿ ಸರ್ಕಾರದ ವಿದ್ಯುತ್ ನೀತಿಯನ್ನೇ ಕಾಂಗ್ರೆಸ್ ನೇತೃತ್ವದ ಕೃಷ್ಣ ಸರ್ಕಾರ ಜಾರಿಗೊಳಿಸುತ್ತಿದೆ.

ಸದ್ಯ ಪರಿಶೀಲನೆಯಲ್ಲಿರುವ ಅರ್ಜಿಯಲ್ಲಿ ಮಂಡಿಸಲಾದ ಪೋಕಾ ಸೂತ್ರ ಇಡೀ ವಿದ್ಯುತ್ ವ್ಯವಸ್ಥೆಯಲ್ಲಿ ಅದಕ್ಷತೆ, ದುಂದುಕೋರತನ ಮತ್ತು ಭ್ರಷ್ಟಾಚಾರಗಳನ್ನು ಪ್ರೋತ್ಸಾಹಿಸುತ್ತದೆ. ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗವು ವಿದ್ಯುತ್ ಸಾಗಾಣಿಕೆ ಮತ್ತು ಹಂಚಿಕೆಯಲ್ಲಿ ಆಗುತ್ತಿರುವ ಅಪಾರ ನಷ್ಟವನ್ನು ನಿಖರಾಗಿ ನಿಗದಿಪಡಿಸಲು ಅದಕ್ಕೆ ಕಾರಣವನ್ನು ಕಂಡುಹಿಡಿಯಲು ಮತ್ತು ಈ ಸೋರಿಕೆಯನ್ನು ಕಡಿಮೆಗೊಳಿಸುತ್ತಾ ವಿದ್ಯುತ್ ವ್ಯವಸ್ಥೆಯಲ್ಲಿ ದಕ್ಷತೆಯನ್ನು ತರಲು ಮಾಡುತ್ತಿರುವ ಪ್ರಾಮಾಣಿಕ ಪ್ರಯತ್ನಕ್ಕೆ ಧಕ್ಕೆ ತರುವುದು 'ಪೋಕಾ' ಸೂತ್ರದ ಮೂಲ ಗುರಿಗಳಲ್ಲಿ ಒಂದಾಗಿದೆ. ವಿದ್ಯುತ್ ಸೋರಿಕೆಯಲ್ಲಿ ವಾಣಿಜ್ಯ ನಷ್ಟ ಎಂಬ ನಾಜೂಕು ಹೆಸರಿನಿಂದ ಕರೆಯಲ್ಪಡುವ ಕಳ್ಳತನವನ್ನು ಸಂರಕ್ಷಿಸಲು ಈ ಸೂತ್ರ ಅನುವು ಮಾಡಿಕೊಡುತ್ತದೆ. ಆದ್ದರಿಂದ ಈ ಪೋಕಾ ಸೂತ್ರದ ಅರ್ಜಿಯನ್ನು ವಜಾಮಾಡಬೇಕೆಂದು ಸಿಪಿಐ(ಎಂ) ಒತ್ತಾಯಿಸಿದೆ.

ಆಕ್ಷೇಪಣಾ ಅರ್ಜಿ

ಸಿಪಿಐ(ಎಂ) ರಾಜ್ಯ ಸಮಿತಿ ಪರವಾಗಿ ರಾಜ್ಯ ಕಾರ್ಯದರ್ಶಿ ಜಿ.ಎನ್.ನಾಗರಾಜ್‌ರವರಿಂದ

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ಈ ಮೇಲೆ ಉಲ್ಲೇಖಿಸಲಾದ ಅರ್ಜಿಯ ಮೂಲಕ ವಿದ್ಯುತ್ ಖರೀದಿ ಮತ್ತು ಇತರೆ ವೆಚ್ಚ ಹೊಂದಾಣಿಕೆ ಸೂತ್ರ ಮಾಡಿರುವ ಕೋರಿಕೆ ಕಾನೂನು ಬಾಹಿರವಾಗಿದೆ ಮತ್ತು ಯಾವುದೇ ರೀತಿಯಲ್ಲಿ ನ್ಯಾಯಸಮ್ಮತವಾದುದಲ್ಲ. ಆದುದರಿಂದ ಅದನ್ನು ಸಂಪೂರ್ಣವಾಗಿ ತಿರಸ್ಕರಿಸಬೇಕೆಂದು ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಕೋರುತ್ತೇವೆ. ಅದಕ್ಕೆ ಸಂಬಂಧಿಸಿ ಈ ಕೆಳಗಿನ ಆಧಾರಗಳನ್ನು ನೀಡುತ್ತಿದ್ದೇವೆ.

1. ಕರ್ನಾಟಕ ವಿದ್ಯುತ್ ಪ್ರಸರಣ ನಿಗಮವು 2001-2002 ನೇ ವರ್ಷದಿಂದ ಆರಂಭವಾಗಿ ಮೂರು ಬಾರಿ ಮೂರು ಬಿನ್ನಬಿನ್ನವಾದ ವಿದ್ಯುತ್ ಖರೀದಿ ವೆಚ್ಚ ಹೊಂದಾಣಿಕೆ ಸೂತ್ರಗಳನ್ನು ಆಯೋಗದ ಮುಂದಿಟ್ಟಿದೆ. 2001-02 ರಲ್ಲಿ ಮುಂದಿಡಲಾದ ಸೂತ್ರ ಹೀಗಿದೆ.

T1 (Rs per unit) =[Do+Do/2*i+Do*(d112)*i]/[Sold Units,*(12-d1)/12]

2003-2004 ಇ.ಆರ್.ಸಿ. ಯಲ್ಲಿ ಮುಂದಿಡಲಾದ ಸೂತ್ರ ಹೀಗಿದೆ

$$MCA_t = \left(\sum_1^t MU_Actual_{t-1} - \sum_1^t MU_Projected_{t-1}\right) X \left(Price_{Normal} - Price_{Expected}\right) - \sum_1^{t-1} MCA$$

$$Rebate/Surcharge = MCA/(MU_t)$$

ಮೇಲೆ ಉಲ್ಲೇಖಿಸಲಾಗಿರುವ ಸದ್ಯದ ಪರಿಗಣನೆಯಲ್ಲಿರುವ ಅರ್ಜಿಯಲ್ಲಿ ಈ ಕೆಳಗಿನ ಸೂತ್ರವನ್ನು ಮುಂದಿಡಲಾಗಿದೆ.

Total POCA in Rs.Crores
Poca in Rs. =
Per kwh. (Energy Sales+Estimated Consumption+ Excess T&D Loss) /10
Where
Total POCA in Rs. Crores = C+I+B+Z

ಈ ಮೇಲಿನ ಮೂರು ಸೂತ್ರಗಳಲ್ಲೂ ಯಾವುದೇ ತಾಳಮೇಳವಿಲ್ಲ ಮತ್ತು ನಿರಂತರತೆ (consistency) ಇಲ್ಲ. ಒಂದೊಂದು ಬಾರಿ ಒಂದೊಂದು ರೀತಿಯ ಸೂತ್ರವನ್ನು ಮಂಡಿಸುತ್ತಿರುವುದನ್ನು ನೋಡಿದರೆ ಸಾಕು, ಈ ಸೂತ್ರಗಳಿಗೆ ಯಾವುದೇ ವಾಸ್ತವಿಕ ಮತ್ತು ವೈಜ್ಞಾನಿಕ ಆಧಾರವಿಲ್ಲವೆಂಬುದು ಸ್ಪಷ್ಟವಾಗುತ್ತದೆ. ವರ್ಷಕ್ಕೊಂದು ಬಾರಿ ಸರಿಯಾದ ಲೆಕ್ಕಪತ್ರಗಳ ಸಹಿತ ಅರ್ಜಿಯನ್ನು ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗದ ಮುಂದೆ ಸಲ್ಲಿಸಿ ಸಾರ್ವಜನಿಕ ಅಭಿಪ್ರಾಯ ಪಡೆದು ನಿಯಂತ್ರಣ ಆಯೋಗವು ಹೊರಡಿಸುತ್ತಿರುವ ವಿದ್ಯುತ್ ದರ ನಿಗದಿ ಆಜ್ಞೆ (Tarrif Order) ಯ ವ್ಯವಸ್ಥೆಯನ್ನು ಪಲ್ಲಟಗೊಳಿಸುವ ಮತ್ತು ವಿದ್ಯುತ್ ಬಳಕೆದಾರರನ್ನು ಸುಲಿಯುವ ಉದ್ದೇಶವಲ್ಲದೆ ಬೇರೇನೂ ಉದ್ದೇಶವಿಲ್ಲವೆಂಬುದು ಸ್ಪಷ್ಟವಾಗುತ್ತದೆ.

2. ಸದ್ಯ ಪರಿಶೀಲನೆಯಲ್ಲಿರುವ ಅರ್ಜಿಯಲ್ಲಿ ಮಂಡಿಸಲಾದ ಪೋಕಾ ಸೂತ್ರ ಇಡೀ ವಿದ್ಯುತ್ ವ್ಯವಸ್ಥೆಯಲ್ಲಿ ಅದ್ಕಕ್ಷತೆ, ದುಂದುಕೋರತನ ಮತ್ತು ಭ್ರಷ್ಟಾಚಾರಗಳನ್ನು ಪ್ರೋತ್ಸಾಹಿಸುತ್ತದೆ. ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗವು ವಿದ್ಯುತ್ ಸಾಗಾಣಿಕೆ ಮತ್ತು ಹಂಚಿಕೆಯಲ್ಲಿ ಆಗುತ್ತಿರುವ ಅಪಾರ ನಷ್ಟವನ್ನು ನಿಖರವಾಗಿ ನಿಗದಿಪಡಿಸಲು ಅದಕ್ಕೆ ಕಾರಣವನ್ನು ಕಂಡುಹಿಡಿಯಲು ಮತ್ತು ಈ ಸೋರಿಕೆಯನ್ನು ಕಡಿಮೆಗೊಳಿಸುತ್ತಾ ವಿದ್ಯುತ್ ವ್ಯವಸ್ಥೆಯಲ್ಲಿ ದಕ್ಷತೆಯನ್ನು ತರಲು ಮಾಡುತ್ತಿರುವ ಪ್ರಾಮಾಣಿಕ ಪ್ರಯತ್ನಕ್ಕೆ ಧಕ್ಕೆ ತರುವುದು 'ಪೋಕಾ' ಸೂತ್ರದ ಮೂಲ ಗುರಿಗಳಲ್ಲಿ ಒಂದಾಗಿದೆ. ವಿದ್ಯುತ್ ಸೋರಿಕೆಯಲ್ಲಿ ವಾಣಿಜ್ಯ ನಷ್ಟ ಎಂಬ ನಾಜೂಕು ಹೆಸರಿನಿಂದ ಕರೆಯಲ್ಪಡುವ ಕಳ್ಳತನವನ್ನು ಸಂರಕ್ಷಿಸಲು ಈ ಸೂತ್ರ ಅನುವು ಮಾಡಿಕೊಡುತ್ತದೆ.

3. ವಿದ್ಯುತ್ ಕೊಳ್ಳುವಿಕೆಯಲ್ಲಿಯೂ ಆಯೋಗದ ನಿರ್ದೇಶನಗಳನ್ನು ಉಲ್ಲಂಘಿಸಲು, ದುಬಾರಿಯಾದ ವಿದ್ಯುತ್ತನ್ನು ಖರೀದಿಸಲು, ಅವಕಾಶ ಮಾಡಿಕೊಡುತ್ತದೆ. ಆ ಮೂಲಕ ಭ್ರಷ್ಟಾಚಾರಕ್ಕೆ ಎಡೆ ಮಾಡಿಕೊಡುತ್ತದೆ.

4. ದಿ ಕರ್ನಾಟಕ ಎಲೆಕ್ಟ್ರಿಸಿಟಿ ರಿಫಾರಂ ಆಕ್ಟ್ 1999 ರಲ್ಲಿ ಸ್ಪಷ್ಟವಾಗಿ ಉಲ್ಲೇಖಿಸಿರುವಂತೆ ವಿದ್ಯುಚ್ಛಕ್ತಿ ಖರೀದಿ ಹಾಗೂ ಸರಬರಾಜು ದಕ್ಷತೆಯನ್ನು ಸಂಪನ್ಮೂಲಗಳ ಸರಿಯಾದ ಬಳಕೆಯನ್ನು ಒಳ್ಳೆಯ ಸಾಧನೆಯನ್ನು ಉತ್ತೇಜಿಸುವಂತೆ ಇರಬೇಕು. ಮತ್ತು ಬಳಕೆದಾರರ ಹಿತವನ್ನು ಸಂರಕ್ಷಿಸಬೇಕು (27(2)C,D,E) ನಿರ್ದೇಶಗಳಿಗೆ ವಿರುದ್ಧವಾಗುತ್ತದೆ.

5. ಇಂಡಿಯನ್ ಎಲೆಕ್ಟ್ರಿಸಿಟಿ ಆಕ್ಟ್ 2003 62(4) ಹಾಗೂ ದಿ ಕರ್ನಾಟಕ ಎಲೆಕ್ಟ್ರಿಸಿಟಿ ಆಕ್ಟ್ 1999 27(10) ರಲ್ಲಿ ಸ್ಪಷ್ಟವಾಗಿ ನಿರ್ದೇಶಿಸಿರುವಂತೆ ಒಂದು ಆರ್ಥಿಕ ವರ್ಷದಲ್ಲಿ ಒಂದಕ್ಕಿಂತ ಹೆಚ್ಚು ಬಾರಿ ವಿದ್ಯುತ್ ದರ ಬದಲಾವಣೆಗಳನ್ನು ಮಾಡಲು ಅವಕಾಶವಿರುವುದಿಲ್ಲ. (ಫ್ಯೂಯೆಲ್ ಸರ್‌ಚಾರ್ಜ್‌ನ ವಿಷಯದಲ್ಲಿ ಸ್ಪಷ್ಟವಾಗಿ ಅನುಮತಿ ನೀಡಿದ ಸಂದರ್ಭಗಳನ್ನು ಹೊರತುಪಡಿಸಿ) ಈ ನಿಯಮದಂತೆ ಯಾವುದೇ ವೆಚ್ಚ ಹೊಂದಾಣಿಕೆಗಳನ್ನು ವಿದ್ಯುತ್ ಪ್ರಸರಣ ನಿಗಮವು ವರ್ಷದಿಂದ ವರ್ಷಕ್ಕೆ ಮಾತ್ರ ಮಾಡಿಕೊಳ್ಳಬಹುದು ಮತ್ತು 2003-2004 ನೇ ವರ್ಷದಲ್ಲಿ ಸಲ್ಲಿಸಿದ ಇ.ಆರ್.ಸಿ. ಅರ್ಜಿಯಲ್ಲಿ ಕರ್ನಾಟಕ ವಿದ್ಯುಚ್ಛಕ್ತಿ ಪ್ರಸರಣ ನಿಗಮ ಅಭಿಪ್ರಾಯಪಟ್ಟಂತೆ ಇಂದಿನ ಪರಿಸ್ಥಿತಿಯಲ್ಲಿ ಫ್ಯೂಯಲ್ ಸರ್‌ಚಾರ್ಜ್ ಸೂತ್ರದ ಪರಿಕಲ್ಪನೆ ತನ್ನ ಪ್ರಸ್ತುತತೆಯನ್ನು ಕಳೆದುಕೊಂಡಿದೆ.

ಹೀಗಿರುವಾಗ ಫ್ಯೂಯಲ್ ಸರ್‌ಚಾರ್ಜ್ ಪ್ರಶ್ನೆ ಉದ್ಭವಿಸದ ಪರಿಸ್ಥಿತಿಯಲ್ಲಿ ಬೇರೆ ಯಾವುದೇ ಕಾರಣಕ್ಕೂ ಮತ್ತೆ ಮತ್ತೆ ವಿದ್ಯುತ್ ದರಗಳನ್ನು ಮಾರ್ಪಡಿಸಲು ಕಾನೂನು ಅವಕಾಶ ನೀಡುವುದಿಲ್ಲ. ವಿದ್ಯುತ್ ಪ್ರಸರಣ ನಿಗಮವು ಹೇಳುವ ಜಲವಿದ್ಯುತ್‌ನ ಕೊರತೆ ಮತ್ತು ಅದರಿಂದುಂಟಾಗುವ ವೆಚ್ಚದ ವ್ಯತ್ಯಾಸಗಳು ಫ್ಯೂಯಲ್ ಸರ್‌ಚಾರ್ಜ್ ಎಂಬ ಪರಿಕಲ್ಪನೆಯ ಮಿತಿಯಲ್ಲಿ ಯಾವುದೇ ಕಾರಣಕ್ಕೂ ಬರುವುದಿಲ್ಲ.

ಇದನ್ನು ಈಗಾಗಲೇ ವಿದ್ಯುತ್ ನಿಯಂತ್ರಣ ಆಯೋಗವು ಗುರುತಿಸಿ ಈ ಮೊದಲೇ ಕೆ.ಪಿ.ಟಿ.ಸಿ.ಎಲ್ ಸಲ್ಲಿಸಿದ 2001-02 ರ ಹಾಗೂ 2003-04 ರ ಇಆರ್‌ಸಿಯಲ್ಲಿ ಮುಂದಿಡಲಾದ 2 ಸೂತ್ರಗಳನ್ನು ತಳ್ಳಿಹಾಕಿದೆ. ಹೀಗೆ ತಳ್ಳಿಹಾಕಲಾದ ಪ್ರಸ್ತಾವಗಳಿಗಿಂತ ಹೆಚ್ಚು ಕಾನೂನುಬದ್ಧವಾದ ಪ್ರಸ್ತಾವವನ್ನು ಈ ಬಾರಿಯೂ ಕೆ.ಪಿ.ಟಿ.ಸಿ.ಎಲ್. ಸಲ್ಲಿಸದಿರುವುದರಿಂದ ಈಗ ಸಲ್ಲಿಸಲಾಗಿರುವ ಪೊಕಾ ಸೂತ್ರವನ್ನು ಅದೇ ಕಾರಣಕ್ಕಾಗಿಯೇ ಆಯೋಗವು ತಿರಸ್ಕರಿಸಬೇಕೆಂದು ಕೋರುತ್ತೇವೆ.

7. ಅದೇ ರೀತಿಯಲ್ಲಿ ಕ.ವಿ.ಪ್ರ.ನಿ.ಯು ಒಮ್ಮೆ ತ್ರೈಮಾಸಿಕವಾಗಿ ಸೂತ್ರದ ಜಾರಿಯನ್ನು ಕೋರಿದರೆ ಮತ್ತೊಮ್ಮೆ ಮಾಸಿಕವಾಗಿ ಸೂತ್ರವನ್ನು ಕೋರುತ್ತಿದೆ. ಇದಕ್ಕೆ ಕಾನೂನಿನಲ್ಲಿ ಅವಕಾಶವೇ ಇಲ್ಲವೆಂಬುದು ಸ್ಪಷ್ಟ.

8. ತಿಂಗಳಿಗೊಮ್ಮೆ ವಿದ್ಯುತ್ ಖರೀದಿ ವೆಚ್ಚಗಳ ಹೊಂದಾಣಿಕೆ ಮತ್ತು ದರಗಳ ಪರಿಷ್ಕರಣೆ ಎಲ್ಲ ವರ್ಗಗಳ ಬಳಕೆದಾರರನ್ನು ಅತಂತ್ರಕ್ಕೀಡುಮಾಡುತ್ತದೆ. ಆರ್ಥಿಕ ಅಭಿವೃದ್ಧಿಯನ್ನು ಯೋಜಿತವಾಗಿ ರೂಪಿಸಲು ಅಸಾಧ್ಯವಾಗುವಂತೆ ಮಾಡುತ್ತದೆ. ಕೈಗಾರಿಕೆ ಮತ್ತು ಕೃಷಿ ಉತ್ಪನ್ನಗಳ ಬೆಲೆ ನಿರ್ಧಾರ ಅಲ್ಲೋಲಕಲ್ಲೋಲಗೊಳ್ಳುತ್ತದೆ. ಡಬ್ಲ್ಯು.ಟಿ.ಓ ಒಪ್ಪಂದದ ನಿಯಮಗಳ ಅನುಸಾರವಾಗಿ ವಿದೇಶಿ ಆಮದುಗಳಿಂದ ತೀವ್ರ ಪೈಪೋಟಿಗೆ ತುತ್ತಾಗಿ ದುಸ್ಥಿತಿಯಲ್ಲಿರುವ ಕರ್ನಾಟಕದ ಕೈಗಾರಿಕೆ ಮತ್ತು ಕೃಷಿರಂಗಗಳು ಮತ್ತಷ್ಟು ಬಿಕ್ಕಟ್ಟಿಗೆ ನೂಕಲ್ಪಡುತ್ತವೆ. ಹೀಗಾಗಿ ರಾಜ್ಯದ ಆರ್ಥಿಕ ಅಭಿವೃದ್ಧಿ ಹಾಗೂ ಎಲ್ಲಾ ಬಳಕೆದಾರರ ಹಿತ ದೃಷ್ಟಿಯಿಂದಲೂ ಈ ಸೂತ್ರವನ್ನು ತಿರಸ್ಕರಿಸಬೇಕೆಂದು ಕೋರುತ್ತೇವೆ.

ಈ ಮೇಲಿನ ಕಾನೂನಾಧಾರ, ವಿದ್ಯುತ್ ನಿಯಂತ್ರಣ ಆಯೋಗದ ಕಾರ್ಯನಿರ್ವಹಣ ಸಾಮರ್ಥ್ಯ, ಬಳಕೆದಾರರಿಗೆ ಅಭಿಪ್ರಾಯ ವ್ಯಕ್ತಪಡಿಸುವ ಅವಕಾಶ, ವಿದ್ಯುತ್ ವ್ಯವಸ್ಥೆಯ ಆರ್ಥಿಕ ದಕ್ಷತೆ, ವಿದ್ಯುತ್ ಕಳ್ಳತನ ತಡೆಗಟ್ಟುವಿಕೆ ಹಾಗೂ ಕರ್ನಾಟಕದ ಆರ್ಥಿಕ ಬೆಳವಣಿಗೆಯ ದೃಷ್ಟಿಯಿಂದ ಎಲ್ಲಾ ಬಳಕೆದಾರರ ಹಿತದೃಷ್ಟಿಯಿಂದ ಕರ್ನಾಟಕ ವಿದ್ಯುಚ್ಛಕ್ತಿ ಪ್ರಸರಣಾ ನಿಗಮದ ವಿದ್ಯುತ್ ಖರೀದಿ ಹಾಗೂ ವೆಚ್ಚದ ಇತರ ಹೊಂದಾಣಿಕೆ ಸೂತ್ರವನ್ನು ಸಂಪೂರ್ಣವಾಗಿ ತಿರಸ್ಕರಿಸಬೇಕೆಂದು ವಿನಂತಿಸುತ್ತೇವೆ.

ಕೋಮುಗಲಭೆಯಿಂದ ಪಾರಾದ ಸುರತ್ಕಲ್

ದ.ಕನ್ನಡದ ಸುರತ್ಕಲ್‌ನಲ್ಲಿ ಈಚೆಗೆ ನಡೆದ ಕೊಲೆಯು ಕೋಮುದ್ವೇಷದಿಂದಲ್ಲ. ಈತ ಸಮಾಜಘಾತುಕ, ಕ್ರಿಮಿನಲ್ ಹಿನ್ನೆಲೆ ಇರುವಂತಹ ಹಿಂದೂ ಜಾಗರಣಾ ವೇದಿಕೆಯ ಕಾರ್ಯಕರ್ತ. ಇದನ್ನೇ ನೆಪವಾಗಿಟ್ಟು ಕೋಮುಗಲಭೆಯೆಬ್ಬಿಸಲು ಸಂಘ ಪರಿವಾರ ನಡೆಸಿದ ಯತ್ನ ವಿಫಲವಾದ ಬಗೆ ಹಾಗೂ ಡಿವೈಎಫ್‌ಐ ಸಂಘಟನೆ ಶಾಂತಿ ಸೌಹಾರ್ದತೆ ಕಾಯಲು ನಡೆಸಿದ ಮಧ್ಯಪ್ರವೇಶದತ್ತ ಗಮನ ಸೆಳೆಯುವ ವರದಿ

ಅಕ್ಟೋಬರ್ 19 ರಂದು ಬೆಳಿಗ್ಗೆ 11.00 ಗಂಟೆ ಹೊತ್ತಿಗೆ ಕೃಷ್ಣಾಪುರ ಕಾಟಿಪಳ್ಳದ (ಮಂಗಳೂರು ತಾಲೂಕು) ಎರಡನೇ ಬ್ಲಾಕಿನಲ್ಲಿ ಹಿಂದೂ ಜಾಗರಣಾ ವೇದಿಕೆ ಕಾರ್ಯಕರ್ತ ಎರಡು ವರ್ಷಗಳ ಹಿಂದೆ ರವೂಫ್ ಕೊಲೆ ಆರೋಪಿ ಹಾಗೂ ದರೋಡೆ ಪ್ರಕರಣವೊಂದರ ಆರೋಪಿ ಉದಯ ಪೂಜಾರಿ ಎಂಬ 28 ವರ್ಷದ ಯುವಕನನ್ನು ಕೊಲೆ ಮಾಡಲಾಗಿದೆ. ಅಲ್ಪಸಂಖ್ಯಾತ ಕೋಮಿನ 5 ಮಂದಿ ಯುವಕರಿಂದ ಈ ಕೊಲೆ ನಡೆದಿದೆಯಾದರೂ ಇದು ಕೋಮು ದ್ವೇಷದಿಂದ ನಡೆದಿಲ್ಲ. ಆದರೆ ಸಂಘಪರಿವಾರ ಮತ್ತು ಬಿಜೆಪಿ ಆ ಕ್ಷಣದಿಂದಲೇ ಕೋಮು ಗಲಭೆಯ ಸೂಕ್ಷ್ಮ ಪ್ರದೇಶವಾದ ಸೂರತ್ಕಲ್‌ನ ಸುತ್ತಮುತ್ತ ಉದ್ವಿಗ್ನತೆಯ ವಾತಾವರಣ ನಿರ್ಮಿಸಿ ಜನರಲ್ಲಿ ಭಯ ಮೂಡಿಸಿತ್ತು.

ರಾವೂಫ್ ಕೊಲೆ ನಂತರ ಜಾಮೀನಿನಿಂದ ಹೊರಬಂದ ಈ ವ್ಯಕ್ತಿ ಸುತ್ತಮುತ್ತಲಿನ ಪ್ರದೇಶದಲ್ಲಿ ದಾದಾಗಿರಿ, ಹಣ ವಸೂಲಿ ಹಾಗೂ ರೌಡಿಸಂಗಳನ್ನು ನಡೆಸುತ್ತಾ ಸಾಮಾನ್ಯವಾಗಿ ಎಲ್ಲರಿಗೂ ಭಯಾನಕವಾಗಿ ಕಂಡಿದ್ದ. ಅಲ್ಪಸಂಖ್ಯಾತರ ಮೇಲಂತೂ ದೌರ್ಜನ್ಯವನ್ನು ಸಾಕಷ್ಟು ಸಂಖ್ಯೆಯಲ್ಲಿ ನಡೆಸಿದ್ದರೆಂದು ವರದಿಯಾಗಿದೆ. ಹಣದ ವೈಷಮ್ಯವೇ ಈ ಕೊಲೆಗೆ ಕಾರಣವೆಂಬುದನ್ನು ಬಂಧಿತ ಆರೋಪಿಗಳು ಒಪ್ಪಿಕೊಂಡಿದ್ದಾರೆ.

[illegible] ಎಸ್.ಪಿ.ಯವರ ಸೂಕ್ತ ಕಾ[illegible]ಚರಣೆಯೇ ಮತ್ತೊಂದು ಮಾರಣ ಹೋಮದ ಸಂದರ್ಭವನ್ನು ತಪ್ಪಿಸಿತು. ನಗರಕೇಂದ್ರದಿಂದ ಸಾಕಷ್ಟು ದೂರವಿರುವ ಘಟನೆ ನಡೆದ ಸ್ಥಳಕ್ಕೆ ಅರ್ಧತಾಸಿನ ಒಳಗೆ ತಲುಪಿ ಹತ್ತಿರದ ಜಿಲ್ಲೆಗಳಿಂದ ಪೋಲೀಸರನ್ನು ಸಾಕಷ್ಟು ಸಂಖ್ಯೆಯಲ್ಲಿ ತರಿಸಿಕೊಂಡು ಕೋಮುಗಲಭೆ ನಡೆಯದಂತೆ ಕ್ರಮ ವಹಿಸಿದರು. ಸಂಘ ಪರಿವಾರದ ಬಳಗ ತನ್ನ ಎಲ್ಲಾ ಪ್ರಮುಖ ಗೂಂಡಾ ಕಾರ್ಯಕರ್ತರನ್ನು ಸೂರತ್ಕಲಿಗೆ ದೌಡಾಯಿಸಿ ಪರಿಸ್ಥಿತಿಯ ಲಾಭ ಪಡೆಯಲು ಹವಣಿಸಿದೆ. ಹತ್ತಿರದ ಕಾಸರಗೋಡಿನ ಫೋನ್ ತಪ್ಪಾಗಿ ಪಡೆದ (ರಾಂಗ್‌ನಂಬರ್) ಒಬ್ಬರಿಗೆ ಅವರು "ಎಷ್ಟು ಮಂದಿ ಬರಬೇಕು" ಎಂದು ಕೇಳಿದ್ದಾರೆ. ಅಂದರೆ ಸಂಘ ಪರಿವಾರದ ಕಾರ್ಯಾಚಾರಣೆಯ ಸ್ವರೂಪ ಗೊತ್ತಾಗುತ್ತದೆ.

ದಿನಾಂಕ 20 ರಂದು ಹಿಂದೂ ಯುವಸೇನೆ ಈ ಪ್ರದೇಶದಲ್ಲಿ ಬಂದ್‌ಗೆ ಕರೆ ನೀಡಿತ್ತು. ಭಯದಿಂದಾಗಿ ಜನ ಹೊರಗೆ ಬರದೆ ಭಾಗಶಃ ಯಶಸ್ವಿಯಾಯಿತು. ಇದೇ ಸಂದರ್ಭದಲ್ಲಿ ಮಾರಕಾಯುಧಗಳೊಂದಿಗೆ ಬಂಟ್ವಾಳದಿಂದ ಬಂದ 17 ಜನರನ್ನು ಕಾರಿನೊಂದಿಗೆ ಬಂಧಿಸಲಾಗಿದ್ದು ಅವರನ್ನೂ ನ್ಯಾಯಾಂಗ ಬಂಧನಕ್ಕೆ ಒಳಪಡಿಸಲಾಗಿದೆ. ಸರಿಸುಮಾರು ಪರಿಸ್ಥಿತಿ ನಿಯಂತ್ರಣದಲ್ಲಿ ಇದೆ.

ಕುಳೈ ಪ್ರದೇಶದಲ್ಲಿ ಕೆಲ DYFI ಸದಸ್ಯರ ಮನೆ ಮೇಲೆ ಹಲ್ಲೆ

ಕುಳೈ ಪ್ರದೇಶದ ಡಿ.ವೈ.ಎಫ್.ಐ.ನ ಸದಸ್ಯರು/ಪದಾಧಿಕಾರಿಗಳ ಮನೆಗೆ ಘಟನೆ ನಡೆದ ರಾತ್ರಿ ಕೋಮುವಾದಿಗಳು ಕಲ್ಲು ತೂರಿ ಗ್ಲಾಸು ಒಡೆದಿರುತ್ತಾರೆ. ಬಂದ್ ದಿನ ಮತ್ತೆ ಬಂದ ಕೋಮುವಾದಿಗಳು ಬೆದರಿಕೆ ಒಡ್ಡಿದ್ದಾರೆ. ಇಲ್ಲಿ ಕೇವಲ ಬೆರಳೆಣಿಕೆಯಷ್ಟು ಅಲ್ಪಸಂಖ್ಯಾತರ ಮನೆಗಳು ಇವೆ. ಓರ್ವ ಯುವಕ ಪ್ರಬಲವಾಗಿ ಪ್ರತಿಭಟಿಸಿದಾಗ ಬಂದಂತಹ ಐದಾರು ಜನರ ತಂಡ ಕಾಲ್ಕಿತ್ತಿದೆ.

ಡಿ.ವೈ.ಎಫ್.ಐ.ನ ಮಧ್ಯಪ್ರವೇಶ

ಘಟನೆ ನಡೆದ ಕೆಲವೇ ಕೆಲವು ನಿಮಿಷಗಳಲ್ಲಿ ಡಿ.ವೈ.ಎಫ್.ಐ. ನ ಕಾಟಿಪಳ್ಳದ ಘಟಕದ ನಾಯಕರಿಂದ ಜಿಲ್ಲಾ ಮುಖಂಡರಿಗೆ ಫೋನು ಕರೆ ಬಂತು. ಅದಕ್ಕೆ ಸಂಬಂಧಿಸಿ ಜಿಲ್ಲಾ ಡಳಿತ ಹಾಗೂ ಎಸ್.ಪಿ.ಯವರಿಗೆ ಫೋನಾಯಿಸಿ ಆ ಕ್ಷಣದಲ್ಲಿ ಮೃತದೇಹ ಆಸ್ಪತ್ರೆಗೆ ರವಾನಿಸಲ್ಪಟ್ಟಿದ್ದು ಅಲ್ಲಿ ಪೋಲೀಸರು ಇರದಿರುವುದನ್ನು ತಿಳಿಸಲಾಯಿತು. ಡಿ.ವೈ.ಎಫ್.ಐ.ನ ಘಟಕದ ಸದಸ್ಯರು ಕೋಮುಸೌಹಾರ್ದತೆಯನ್ನು ಕಾಪಾಡುವ ಬಗ್ಗೆ ಜಿಲ್ಲಾ ಸಮಿತಿಯ ಅಧ್ಯಕ್ಷರಾದ ಕೃಷ್ಣಪ್ಪ ಕೊಂಚಾಡಿ, ನಗರ ಅಧ್ಯಕ್ಷರಾದ ಮುನೀರ್ ಕಾಟಿಪಳ್ಳಿ, ಸುನೀಲ್ ಕುಮಾರ್ ಬಜಾಲ್ ಹಾಗೂ ಸಂತೋಷ್ ನೀತಿ ನಗರ ಮೊದಲಾದವರು ವಿವರ ನೀಡಿದರು. ಘಟನೆ ನಡೆದ ಪ್ರದೇಶದಲ್ಲಿ ಇದ್ದ DYFI ನಗರ ಸಮಿತಿ ಸದಸ್ಯರಾದ ಶರತ್ ಬಜಾಲ್‌ರವರು ಕ್ಷಣಕ್ಷಣದ ಬೆಳವಣಿಗೆಗಳ ಬಗ್ಗೆ ಮಾಹಿತಿ ಒದಗಿಸಿದರು. ಜಿಲ್ಲಾ ಕೇಂದ್ರದಲ್ಲಿ ಆ ಸಂದರ್ಭದಲ್ಲಿ ನಡೆಯುತ್ತಿದ್ದ ಅಧ್ಯಕ್ಷ, ಕಾರ್ಯದರ್ಶಿಗಳ ಸಭೆಯಲ್ಲಿ ಭಾಗವಹಿಸುತ್ತಿದ್ದ ಆ ಪ್ರದೇಶದ ಇತರ ಘಟಕಗಳ ಅಲ್ಪಸಂಖ್ಯಾತ ಪದಾಧಿಕಾರಿಗಳನ್ನು ಪ್ರತ್ಯೇಕವಾಗಿ ಸಭೆ ಸೇರಿಸಿ ಮುಂಜಾಗ್ರತೆ ವಹಿಸುವ ಬಗ್ಗೆ ತಿಳಿಸಲಾಯಿತು.




ಜಿಲ್ಲಾ ಕೇಂದ್ರ ವಿಕಾಸಕಚೇರಿಯಲ್ಲಿ ಇಡೀ ಘಟನೆಯ ಬಗ್ಗೆ ನಿಗಾವಹಿಸುವ ನಿಟ್ಟಿನಲ್ಲಿ ಡಿವೈಎಫ್‌ಐ ಮುಖಂಡರು ಕಾರ್ಯಪ್ರವೃತ್ತರಾದರು.

ಘಟನೆ ನಡೆದ ಹತ್ತಿರದ ಪ್ರದೇಶವಾದ ಶಾಂತಿನಗರ ಕುಳೂರು ಘಟಕದಲ್ಲಿ ಅಂದು ಸಾಯಂಕಾಲ ಕಾರ್ಯಕರ್ತರ ಸಭೆ ನಡೆಯಿತು. ಅದರಲ್ಲಿ ಕೃಷ್ಣಪ್ಪ ಕೊಂಚಾಡಿ, ದಯಾನಂದ ಶೆಟ್ಟಿ ಭಾಗವಹಿಸಿ, ಸಂಭಾವ್ಯ ಪರಿಸ್ಥಿತಿಗಳ ಬಗ್ಗೆ ವಿವರಿಸಿ, ಕೋಮು ಸೌಹಾರ್ದತೆ ಕಾಪಾಡುವ ಅಗತ್ಯತೆಯನ್ನು ಒತ್ತಿ ಹೇಳಲಾಯಿತು. ಅಲ್ಪಸಂಖ್ಯಾತ ಸಮುದಾಯದ ಸದಸ್ಯರೇ ಇರುವ ಈ ಘಟಕದ ಸಭೆಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಯುವಕರು ಭಾಗವಹಿಸಿದರು.

ದಿನಾಂಕ 21 ರಂದು ನಡೆದ ಡಿ.ವೈ.ಎಫ್.ಐ.ನ ಪ್ರಮುಖ ಕಾರ್ಯಕರ್ತರ ನಗರ ಮಟ್ಟದ ಸಭೆಯಲ್ಲಿ ಕಾಟಿಪಳ್ಳಿ ಘಟನೆಯ ಬಗ್ಗೆ ವಿವರಣೆ ನೀಡಲಾಯಿತು. ಸಂಘಪರಿವಾರದ ಯೋಜನಾಬದ್ಧ ಕೋಮುಗಲಭೆಯನ್ನು ವಿಫಲಗೊಳಿಸಲು ನಡೆದ ಮಧ್ಯಪ್ರವೇಶದ ಬಗ್ಗೆ ವಿವರಣೆ ನೀಡಲಾಯಿತು. ಬಿ.ಜೆ.ಪಿ. ಜನಪ್ರತಿನಿಧಿಗಳ ಹತಾಶೆಯ ಹೇಳಿಕೆಯನ್ನು ವಿಶ್ಲೇಷಿಸಲಾಯಿತು. ಈ ಸಭೆಯಲ್ಲಿ ಕೆ.ಯಾದವಶೆಟ್ಟಿ, ನಾಗೇಶಕುಮಾರ್.ಕೆ. ಕೃಷ್ಣಪ್ಪ ಕೊಂಚಾಡಿ, ಸುನೀಲ್‌ಕುಮಾರ್ ಬಜಾಲ್, ಸಂತೋಷ್, ಮುನೀರ್ ಕಾಟಿಪಳ್ಳಿ, ಎನ್.ಎಂ.ಬಂಗಾರ, ದಯಾನಂದ ಶೆಟ್ಟಿ ಮೊದಲಾದವರು ಮಾತಾಡಿದರು.

ವರದಿ : **ವಿನೋದ್ ಶರ್ಮ ಮತ್ತು ಕೃಷ್ಣಪ್ಪ ಕೊಂಚಾಡಿ**

ಬೀಡಿ ಕಾರ್ಮಿಕರ ಮುಖಂಡ ಕೆ.ಈಶ್ವರ್ ನಿಧನ



ಬೀಡಿ ಕಾರ್ಮಿಕರ ಮುಖಂಡ, ಸಿಐಟಿಯು ದಕ್ಷಿಣ ಕನ್ನಡ ಜಿಲ್ಲಾ ಸಮಿತಿ ಸದಸ್ಯರೂ ಆಗಿದ್ದ ಕೆ.ಈಶ್ವರ್ ಅಕ್ಟೋಬರ್ 7 ರಂದು ನಿಧನರಾದರು. ಅವರು ಕೆಲ ಕಾಲದಿಂದ ಅನಾರೋಗ್ಯದಿಂದ ಬಳಲುತ್ತಿದ್ದರು.


ತೀರಾ ಬಡ ಕುಟುಂಬದಲ್ಲಿ ಜನಿಸಿ, ಹಂಚಿನ ಕಾರ್ಖಾನೆಯಲ್ಲಿ ಕಾರ್ಮಿಕರಾಗಿದ್ದು, 1964 ರಲ್ಲಿ ಸಿಪಿಐ(ಎಂ) ಪಕ್ಷದ ಸದಸ್ಯರಾಗಿದ್ದರು. ಬೀಡಿ ಕಾರ್ಮಿಕರ ಹೋರಾಟಗಳಲ್ಲಿ ಪೋಲೀಸರ ದೌರ್ಜನ್ಯವನ್ನು ಎದುರಿಸಿದ್ದ ಈಶ್ವರ್ ಹಂಚು, ಬೀಡಿ ಕಾರ್ಮಿಕರ ಸಂಘಟನೆಗಳ ಮುಖಂಡರಾಗಿ, ಮುನ್ನೂರು ಗ್ರಾಮ ಪಂಚಾಯತಿ ಸದಸ್ಯರಾಗಿ ದುಡಿದಿದ್ದರು.

ಇವರು ಪತ್ನಿ, ಓರ್ವ ಪುತ್ರಿ ಹಾಗೂ ಮೂವರು ಪುತ್ರರನ್ನು ಅಗಲಿದ್ದಾರೆ.

ಸಿಪಿಐ(ಎಂ)ನ ಉಳ್ಳಾಲ ವಲಯ ಸಮಿತಿ, ಸಿಐಟಿಯು, ಡಿವೈಎಫ್‌ಐ, ಜೆಎಂಎಸ್ ಮೊದಲಾದ ಸಂಘಟನೆಗಳ ಮುಖಂಡರು ಈಶ್ವರ್‌ರವರ ನಿಧನಕ್ಕೆ ತೀವ್ರ ಸಂತಾಪ ಸೂಚಿಸಿದ್ದಾರೆ.

ಆ್ಯಸ್‌ಬೆಸ್ಟೋಸ್ ಉದ್ಯಮದ ಸವಾಲುಗಳು





ಜನವೈದ್ಯರಾಗಿರುವ ಡಾ. ಪ್ರಕಾಶ್ ಸಿ.ರಾವ್‌ರವರು ಉದ್ಯೋಗ ಸಂಬಂಧಿ ಖಾಯಿಲೆಗಳ ಬಗ್ಗೆ ಬರೆಯುತ್ತಿದ್ದಾರೆ. ಅವರು ನೀಡುತ್ತಿರುವ ಮಾಹಿತಿಗಳು ಅತ್ಯಮೂಲ್ಯ. ಇಂತಹ ಲೇಖನ ಬೇಕೆಂದು ಅನೇಕ ನಮ್ಮ ಕಾರ್ಮಿಕ ಮಿತ್ರರು, ಓದುಗರು ಕೇಳಿದ್ದರಿಂದ ಈ ವಿಶೇಷ ಬರಹಗಳು ಇಲ್ಲಿ. ನೀವೂ ಸಹ ಖಾಯಿಲೆಗಳ ಬಗ್ಗೆ ತಿಳಿಸಿ. ವೈದ್ಯರು ಮಾಹಿತಿ ನೀಡುತ್ತಾರೆ.

ಭಾರತದಲ್ಲಿ ಕಾರ್ಮಿಕವರ್ಗ 'ಉದ್ಯೋಗಕ್ಕೆ ಸಂಬಂಧಿಸಿದ' ಅನೇಕ ಪುಪ್ಪುಸ ರೋಗಗಳಿಂದ ಬಳಲುತ್ತಿದ್ದು (ಉದಾ: ನಿಲಿಕೋಸಿಸ್), ಆಸ್‌ಬೆಸ್ಟೋಸಿಸ್ ಎಂಬ ರೋಗದಿಂದ ಇಂದಿಗೂ ಬಿಡುಗಡೆ ಹೊಂದಿಲ್ಲ. ಅನೇಕ ರಾಷ್ಟ್ರಗಳಲ್ಲಿ ಆ್ಯಸ್‌ಬೆಸ್ಟೋಸ್ ಉಪಯೋಗವನ್ನು ಕಡಿಮೆ ಮಾಡಲಾಗಿದೆ ಹಾಗೂ ಕ್ರಮೇಣ ನಿಷೇಧಿಸಲಾಗಿದೆ. ಈಗಿನ ದಿನಗಳಲ್ಲಿ ಎಲ್ಲ ಮುಂದುವರೆದ ರಾಷ್ಟ್ರಗಳು ಈ ಉದ್ಯಮವನ್ನು ಮೂರನೇ ಜಗತ್ತಿನ ರಾಷ್ಟ್ರಗಳಿಗೆ ವರ್ಗಾಯಿಸಿವೆ. ಇಷ್ಟೇ ಅಲ್ಲ ಬ್ರೆಝಿಲ್ ಆ್ಯಸ್‌ಬೆಸ್ಟೋಸ್ ತಯಾರಿಸುತ್ತಿರುವ ಜಗತ್ತಿನ ಒಂದು ಮುಖ್ಯ ದೇಶವಾಗಿದ್ದು ಇನ್ನು ಮುಂದೆ ಅದು ಆ್ಯಸ್‌ಬೆಸ್ಟೋಸ್ ಉಪಯೋಗವನ್ನು ಸಂಪೂರ್ಣ ನಿಲ್ಲಿಸಲು ತೀರ್ಮಾನಿಸಿದೆ. ಈಗಾಗಲೇ ಜಗತ್ತಿನ 21 ದೇಶಗಳು ಆ್ಯಸ್‌ಬೆಸ್ಟೋಸ್‌ನ ಉಪಯೋಗವನ್ನು ನಿಷೇಧಿಸಿವೆ. ಈ ದೇಶಗಳು ಐರೋಪ್ಯ ದೇಶಗಳಾಗಿವೆ.

ಭಾರತದ ಪರಿಸ್ಥಿತಿ ಬೇರೆಯೇ ಆಗಿದೆ. ಭಾರತ ಈಗ 100000 ಮೆಟ್ರಿಕ್ ಟನ್‌ನಷ್ಟು ಆ್ಯಸ್‌ಬೆಸ್ಟೋಸ್ ಉಪಯೋಗಿಸುತ್ತಿದೆ. ಅದರಲ್ಲಿ 20,000 ಮೆಟ್ರಿಕ್ ಟನ್ನಿನಷ್ಟು ಭಾರತದ ಗಣಿಗಳಿಂದ ಹೊರತೆಗೆಯಲಾಗುತ್ತಿದೆ. ಭಾರತದಲ್ಲಿ ಆಂಧ್ರ, ರಾಜಸ್ಥಾನ, ಬಿಹಾರದ ಗಣಿಗಳಲ್ಲಿ ಆ್ಯಸ್‌ಬೆಸ್ಟೋಸ್ ದೊರೆಯುತ್ತಿದೆ. ಭಾರತದಲ್ಲಿ ಆ್ಯಸ್‌ಬೆಸ್ಟೋಸ್ ಉದ್ದಿಮೆಯ ವಹಿವಾಟು 800 ಕೋಟಿ ರೂಪಾಯಿನದು. ಈ ಉದ್ಯಮದಲ್ಲಿ 6000 ಕಾರ್ಮಿಕರು ಕೆಲಸ ಮಾಡುತ್ತಿದ್ದಾರೆ ಹಾಗೂ ಸುಮಾರು ಒಂದು ಲಕ್ಷ ಜನರು ಈ ಉದ್ಯೋಗದೊಂದಿಗೆ ಸಂಪರ್ಕ ಇಟ್ಟುಕೊಂಡಿದ್ದಾರೆ. ಭಾರತದ ಸಡಿಲ ಕೈಗಾರಿಕಾ ಹಾಗೂ ಪರಿಸರ ನೀತಿಯ ಲಾಭ ಪಡೆಯಲು ಈ ಆ್ಯಸ್‌ಬೆಸ್ಟೋಸ್ ಉದ್ಯಮ ಸಜ್ಜಾಗಿ ನಿಂತಿದೆ. ಈ ಉದ್ಯಮಗಳಲ್ಲಿ ಕೆಲಸ ಮಾಡುವವರ ಆರೋಗ್ಯ ಪರಿಸ್ಥಿತಿ ಚಿಂತಾಜನಕವಾಗಿದೆಯೆಂದು ನ್ಯಾಶನಲ್ ಇನ್‌ಸ್ಟಿಟ್ಯೂಟ್ ಆಫ್ ಆಕ್ಯುಪೇಶನಲ್ ಹೆಲ್ತ್ ಹಾಗೂ ಕನ್ಸ್ಯೂಮರ್ ಎಜುಕೇಶನ್ ರಿಸರ್ಚ್ ಸೆಂಟರ್, ಅಹಮದಾಬಾದ್ ಹೇಳುತ್ತದೆ.

ಆ್ಯಸ್‌ಬೆಸ್ಟೋಸ್‌ನಿಂದ ಪುಪ್ಪುಸ ರೋಗಗಳು ಬರುತ್ತವೆ.

1. ಆ್ಯಸ್‌ಬೆಸ್ಟೋಸ್ (ಸತತ ಕೆಮ್ಮು ಸುಸ್ತು)
2. ಕ್ಯಾನ್ಸರ್ (ಪುಪ್ಪುಸ)
3. ಮಿಸೊಥೀಲಿಯೋಮಾ, ಒಮ್ಮೆ ಆ್ಯಸ್‌ಬೆಸ್ಟೋಸ್ ಧೂಳು ಸೇವಿಸಿದ ವ್ಯಕ್ತಿಗೆ 20 ವರ್ಷದ ನಂತರವೂ, ಆ ಉದ್ದಿಮೆಯಲ್ಲಿ ಕೆಲಸ ಮಾಡದಿದ್ದರೂ, ಕ್ಯಾನ್ಸರ್ ಕಾಯಿಲೆ ಉಂಟಾಗಬಹುದಾಗಿದೆ.

ಈ ಉದ್ಯೋಗಕ್ಕೆ ಸಂಬಂಧಿಸಿದ ರೋಗದ ಬಗ್ಗೆ ಒಂದು ಸರಿಯಾದ ಅಧ್ಯಯನವಿಲ್ಲದಿರುವುದು ನಮ್ಮ ಕಾರ್ಮಿಕ ಆರೋಗ್ಯ ನೀತಿಯ ಟೊಳ್ಳುತನವನ್ನು ತೋರಿಸುತ್ತದೆ.

ಭಾರತದಲ್ಲಿ ಇಂತಹ ಅನೇಕ ಅಪಾಯಕಾರಿ ಉದ್ಯಮಗಳಿವೆ. ಇವುಗಳ ಬಗ್ಗೆ ಜನಜಾಗೃತಿ ಅತ್ಯಗತ್ಯ. ಈಗಲೂ ಆ್ಯಸ್‌ಬೆಸ್ಟೋಸ್ ಬದಲು ಬೇರೆ ಪದಾರ್ಥದ ಉಪಯೋಗದಿಂದ ಕಾರ್ಯಸಾಧಿಸಬಹುದಾಗಿದೆ. ಇತ್ತೀಚೆಗೆ ತಮಿಳುನಾಡು ಸರ್ಕಾರ ಆ್ಯಸ್‌ಬೆಸ್ಟೋಸ್ ಉಪಯೋಗಕ್ಕೆ ಚಾಲನೆ ಕೊಟ್ಟಿದೆ. ಭಾರತ ಸರಕಾರವೂ ಈ ವಿಷಯದ ಬಗ್ಗೆ ಹೆಚ್ಚು ಗಮನವನ್ನು ಕೊಡದೇ, ಈಗಲೂ ಆ್ಯಸ್‌ಬೆಸ್ಟೋಸ್‌ನ ಆಮದು ಮಾಡುತ್ತಿದೆ.

ಕರ್ನಾಟಕದಲ್ಲಿ ಆ್ಯಸ್‌ಬೆಸ್ಟೋಸ್ ಗಣಿ ಇಲ್ಲದಿದ್ದರೂ, ಆ್ಯಸ್‌ಬೆಸ್ಟೋಸ್ ಬಳಕೆಗೇನು ಕಡಿಮೆ ಇಲ್ಲ. ಆ್ಯಸ್‌ಬೆಸ್ಟೋಸ್‌ನಿಂದ ಅಪಾಯವಿರುವುದರಿಂದ, ಬೇರೆ ದೇಶಗಳಲ್ಲಿ ಇದರ ಉಪಯೋಗವನ್ನು ನಿಷೇಧಿಸಲಾಗಿರುವುದರಿಂದ, ಇದರ ಉಪಯೋಗವನ್ನು ಸಂಪೂರ್ಣ ಕಡಿಮೆ ಮಾಡಬೇಕಾಗಿದೆ.



ಮುಖ್ಯಮಂತ್ರಿಗಳ ಮನೆ ಮುಂದೆ ಅನಿರ್ದಿಷ್ಟ ಉಪವಾಸ ಮುಷ್ಕರ ಆರಂಭಿಸಲು ಮುಂದಾದ ಕೃಪಾಂಕ ನೌಕರರ ಹೋರಾಟವನ್ನು ದಿಕ್ಕು ತಪ್ಪಿಸಲು ಯತ್ನಿಸಿ ವಿಫಲವಾದರು. ನಂತರ ದಿಕ್ಕುಕಾಣದೇ ಬೇಡಿಕೆ ಈಡೇರಿಕೆಗೆ ಬಹಿರಂಗ ಬದ್ಧತೆ ಘೋಷಣೆ ಮಾಡಬೇಕಾಗಿ ಬಂತು. ಇದು ಹೋರಾಟದ ಸಂಘಟನಾ ಶಕ್ತಿ. ಕೃಪಾಂಕ ನೌಕರರ ಹೋರಾಟ ನಿರ್ಣಾಯಕ ಘಟ್ಟ ತಲುಪಿದೆ ಅದರ ಒಂದು ನೋಟ

ನಿರ್ಣಾಯಕ ಹಂತಕ್ಕೆ ಕೃಪಾಂಕ ನೌಕರರ ಹೋರಾಟ

ಕೆ.ಮಹಾಂತೇಶ್

ನವೆಂಬರ್ ಮೊದಲೇ ವಾರದಲ್ಲಿ ಅಂತಿಮ ಅಧಿಸೂಚನೆ ಹೊರಡಿಸಲಾಗುವುದು ಎಂಬ ತೀರ್ಮಾನ ಸರ್ಕಾರದ ಕಡೆಯಿಂದ ಪಡೆಯಲು ಸಾಧ್ಯವಾಗುವುದರೊಂದಿಗೆ ಕಳೆದ 4 ತಿಂಗಳಿಂದ ಕೃಪಾಂಕ ನೌಕರರು ನಡೆಸುತ್ತಿದ್ದು ಹೋರಾಟವೀಗ ನಿರ್ಣಾಯಕ ಹಂತ ತಲುಪಿದೆ.

ಅಕ್ಟೋಬರ್-28 ರಿಂದ ಮುಖ್ಯಮಂತ್ರಿ ಮನೆ ಎದುರು ಕೃಪಾಂಕ ನೌಕರರು ಮತ್ತು ಅವಲಂಬಿತರು ಅನಿರ್ದಿಷ್ಟ ಅಮರಣಾಂತ ಉಪವಾಸ ಸತ್ಯಾಗ್ರಹ ನಡೆಸಲು ವ್ಯಾಪಕ ತಯಾರಿ ನಡೆಸುತ್ತಿರುವಾಗಲೇ ಮತ್ತು ಆ ಹೋರಾಟಕ್ಕೆ ಮಾಧ್ಯಮಗಳಲ್ಲಿ ಸಿಕ್ಕ ಭಾರೀ ಪ್ರಚಾರ ಕೂಡ ಸರ್ಕಾರ ಇಂತಹ ನಿರ್ಧಾರವನ್ನು ತರಾತುರಿಯಲ್ಲಿ ಪ್ರಕಟಿಸಬೇಕಾಗಿ ಬಂತು. ಇದು ಕೃಪಾಂಕ ನೌಕರರು ನಡೆಸುತ್ತಿರುವ ಶಿಸ್ತುಬದ್ಧ ಹೋರಾಟಕ್ಕೆ ಸಿಕ್ಕ ಮಹತ್ವದ ಜಯವಾಗಿದೆ.

ಚಳುವಳಿಯೇ ನಮ್ಮ ಸರಿಯಾದ ದಾರಿ....

ಕೃಪಾಂಕ ನೌಕರರು ತಾವು ನಡೆಸಬೇಕಾದ ಹೋರಾಟದ ದಾರಿಯನ್ನು ಸ್ಪಷ್ಟವಾಗಿ ಗುರುತಿಸಿಕೊಂಡಿದ್ದಾರೆ. ಸೆಪ್ಟೆಂಬರ್-14 ರ ರಾಜ್ಯಸಮಾವೇಶದ ನಂತರವಂತೂ ಅವರಿಗೆ ಹೋರಾಟ ಮಾತ್ರವೇ ನಮ್ಮ ದಾರಿ ಎಂಬುದನ್ನು ಕಂಡುಕೊಂಡಿದ್ದಾರೆ. ಅಗಸ್ಟ್-23 ರಂದೇ ರಾಜ್ಯ ಸರ್ಕಾರ ಕರಡು ಅಧಿಸೂಚನೆಯನ್ನು ಹೊರಡಿಸಿ ಅದಕ್ಕೆ ಆಕ್ಷೇಪಗಳನ್ನು ಆಹ್ವಾನಿಸಿತ್ತು. ಸುಮಾರು 208 ಆಕ್ಷೇಪಣೆಗಳು ಬಂದ ನಂತರವೂ ಸರ್ಕಾರ ಆ ಪ್ರಕ್ರಿಯೆಯನ್ನು ತ್ವರಿತಗೊಳಿಸದೆ ಕೇವಲ ಅಧಿಕಾರಿಗಳ ಟೇಬಲ್ಲಿನ ಮೇಲೆ ಮಾತ್ರ ಓಡಾಡಿಕೊಂಡಿತ್ತು ಮಾತ್ರವೇ ಹೊರತು ಅಲ್ಲಿ ಶೀಘ್ರವಾಗಿ ತೀರ್ಮಾನವಾಗಬೇಕಿದ್ದ ಕಡತಗಳ ಜೊತೆ ಸೇರಲೇ ಇಲ್ಲ. ಹೀಗಿದ್ದರೂ ಆಗೊಮ್ಮೆ-ಈಗೊಮ್ಮೆ ಪತ್ರಿಕಾ ಹೇಳಿಕೆಗಳನ್ನು ನೀಡುತ್ತಾ ರಾಜ್ಯ ಸರ್ಕಾರದ ಮಂತ್ರಿಗಳು ಓಡಾಡುತ್ತಲೇ ಬಂದರು.

ತಾಳ್ಮೆ ಕಳೆದುಕೊಂಡ ನೌಕರರು

ಕರಡು ಅಧಿಸೂಚನೆ ಹೊರ ಬಂದಿರುವುದರಿಂದ ಇನ್ನೇನೂ ಒಂದೇ ತಿಂಗಳಲ್ಲಿ ಮರುನೇಮಕ ಆಗಿಬಿಡಬಹುದೆಂದು ನಂಬಿದ್ದ ನೌಕರರು ನಿಧಾನವಾಗಿ ತಾಳ್ಮೆಯನ್ನು ಕಳೆದುಕೊಂಡರೂ ಕೃಪಾಂಕ ನೌಕರರ ಕ್ರಿಯಾಸಮಿತಿ ಏನಾದರೂ ಮಾಡಬಹುದೆನ್ನುತ್ತಾ, ಬೆಂಗಳೂರಿನ ಕಛೇರಿಗೆ ಪ್ರತಿನಿತ್ಯ ಕರೆಗಳನ್ನು ಮಾಡಲು ಪ್ರಾರಂಭಿಸಿದ್ದರು. ಇನ್ನೂ ಕೆಲವು ಜಿಲ್ಲೆಗಳಲ್ಲಿ ಈಗಿಂದಲೇ ಹೋರಾಟಗಳನ್ನು ಪ್ರಾರಂಭಿಸುವ ಮಾತುಗಳನ್ನು ಆರಂಭಿಸಿದ್ದರು. ಇಷ್ಟೊತ್ತಿಗಾಗಲೇ ಪ್ರತಿನಿತ್ಯ ಸರ್ಕಾರದ ಕಾರ್ಯವೈಖರಿಯನ್ನು ಕಣ್ಣಿಂದ ಕಾಣುತ್ತಿದ್ದ ಬೆಂಗಳೂರಿನ ಕ್ರಿಯಾಸಮಿತಿ ಮತ್ತೊಂದು ಭಾರೀ ಹೋರಾಟಕ್ಕೆ ಹೊರಡಬೇಕಾಗಿರುವ ಮುನ್ಸೂಚನೆಯನ್ನು ನೀಡಿತು.

ಈ ಎಲ್ಲಾ ಬೆಳವಣಿಗೆಯ ಹಿನ್ನೆಲೆಯಲ್ಲಿ ಅಕ್ಟೋಬರ್-14 ರಂದು ಕ್ರಿಯಾಸಮಿತಿ ಸಭೆಯನ್ನು ಬೆಂಗಳೂರಿನಲ್ಲಿ ಕರೆಯಲಾಯಿತು. 21 ಜಿಲ್ಲೆಗಳಿಂದ ಹಾಜರಿದ್ದ ಪ್ರತಿನಿಧಿಗಳು ಅಂದಿನ ಸಭೆಯಲ್ಲಿ ಕೇವಲ ಮರುನೇಮಕಕ್ಕೆ ಸಂಬಂಧಿಸಿದ ವಿಷಯಗಳನ್ನಷ್ಟೇ ಚರ್ಚಿಸದೇ ಕ್ರಿಯಾಸಮಿತಿಯನ್ನು ಬಲಪಡಿಸಲು ಅಗತ್ಯವಿರುವ ಸದಸ್ಯತ್ವ ಸಂಘಟನೆ ಮತ್ತು ಗ್ರಾಮೀಣ ಮೀಸಲಾತಿಗಾಗಿ ನಡೆಸಬೇಕಿರುವ ಚಳುವಳಿ ಕುರಿತಂತೆ ಚರ್ಚಿಸಿದರು. ಅದರೊಂದಿಗೆ 'ಮರುನೇಮಕ' ಕುರಿತು ಸರ್ಕಾರದ ವಿಳಂಬ ನೀತಿಯನ್ನು ಪ್ರತಿಭಟಿಸಿ ಅಕ್ಟೋಬರ್-21 ರಂದು ಎಲ್ಲಾ ಜಿಲ್ಲಾ ಕೇಂದ್ರಗಳಲ್ಲಿ ಒಂದು ದಿನದ ಉಪವಾಸ ಸತ್ಯಾಗ್ರಹ ನಡೆಸಲು ತೀರ್ಮಾನ ಕೈಗೊಂಡರು. ಈ ಸಭೆಗೆ 4 ಜಿಲ್ಲೆಗಳ ಪ್ರತಿನಿಧಿಗಳು ಅನಿವಾರ್ಯ ಕಾರಣಗಳಿಂದ ಬರುತ್ತಿಲ್ಲವೆಂದು ಮೊದಲೇ ತಿಳಿಸಿದ್ದರು.

'ಬಿಸಿ ಮುಟ್ಟಿಸಿದ' ಉಪವಾಸ ಸತ್ಯಾಗ್ರಹ

ಕ್ರಿಯಾಸಮಿತಿ ಕರೆನೀಡಿದ್ದ 'ಒಂದು ದಿನದ ಉಪವಾಸ ಸತ್ಯಾಗ್ರಹ' ರಾಜ್ಯದೆಲ್ಲೆಡೆ ಭಾರೀ ಯಶಸ್ವಿಯಾಗಿದೆ. ಧಾರವಾಡದಲ್ಲಿ ಕೆಲವು ಜನರು ಮನವಿ ಸಲ್ಲಿಸಿದ್ದನ್ನು ಹೊರತುಪಡಿಸಿ ಇತರೆ 26 ಜಿಲ್ಲೆಗಳಲ್ಲಿ ಧಾರಾಕಾರ ಸುರಿಯುತ್ತಿದ್ದ ಮಳೆ ಹಾಗೂ ಚಳಿಯನ್ನು ಲೆಕ್ಕಿಸದೇ ಸಾವಿರಾರು ಕೃಪಾಂಕ ನೌಕರರು ಹಾಗೂ ಅವಲಂಬಿತರು ಅಂದು ಬೆಳಿಗ್ಗೆಯಿಂದ ಸಂಜೆಯವರೆಗೂ 'ಉಪವಾಸ ಸತ್ಯಾಗ್ರಹ' ದಲ್ಲಿ ಭಾಗವಹಿಸಿದ್ದಾರೆ. ಈ ಕಾರ್ಯಕ್ರಮಕ್ಕೆ ಜಿಲ್ಲಾಮಟ್ಟಗಳಲ್ಲಿ ಮತ್ತು ವಿದ್ಯುನ್ಮಾನ ಮಾಧ್ಯಮಗಳಲ್ಲಿ ಉತ್ತಮ ಪ್ರಚಾರ ಕೂಡ ಸಿಕ್ಕಿದೆ. ಜಿಲ್ಲಾ ಮಟ್ಟಗಳ ಈ ಹೋರಾಟದಿಂದ ಉತ್ತೇಜಿತರಾಗಿ ರಾಜ್ಯಮಟ್ಟದಲ್ಲಿ ಅನಿರ್ದಿಷ್ಟ ಹೋರಾಟಕ್ಕೆ ಮುನ್ನಡೆಯಲು ನೌಕರರು ತಯಾರಾದರು. ರಾಜ್ಯದೆಲ್ಲೆಡೆ ಏಕಕಾಲಕ್ಕೆ 27 ಜಿಲ್ಲೆಗಳಲ್ಲಿ ನಡೆದ ಈ ಉಪವಾಸ ಸತ್ಯಗ್ರಹ ರಾಜ್ಯ ಸರ್ಕಾರಕ್ಕೆ ಬಿಸಿ ಮುಟ್ಟಿಸುವಲ್ಲಿ ಯಶಸ್ವಿಯಾಗಿದೆ.

ಅಮರಣಾಂತ ಸತ್ಯಾಗ್ರಹಕ್ಕೆ ಸಿದ್ಧರಾದ ನೌಕರರು.....

ತೀವ್ರ ರೀತಿಯಲ್ಲಿ ಹೋರಾಟಗಳು ನಡೆದರೂ ರಾಜ್ಯ ಸರ್ಕಾರ ಅಂತಿಮ ಅಧಿಸೂಚನೆಯನ್ನು ಹೊರಡಿಸಲು ವಿಳಂಬ ಮಾಡುತ್ತಾ ನಡೆದಿರುವ ಪ್ರಕ್ರಿಯೆಯಿಂದ ನೊಂದ ನೌಕರರಿಬ್ಬರು ಈ ಅವಧಿಯಲ್ಲಿ 'ಆತ್ಮಹತ್ಯೆ'ಗೆ ಶರಣಾಗಿದ್ದು ನೌಕರರರನ್ನು ಕಂಗಾಲಾಗಿಸಿತು. ಈ ಹಿನ್ನೆಲೆಯಲ್ಲಿ ಪರಿಸ್ಥಿತಿಯನ್ನು ಚರ್ಚಿಸಿದ ಕ್ರಿಯಾಸಮಿತಿ ಸರ್ಕಾರದ ವಿಳಂಬ ನೀತಿಯನ್ನು ಪ್ರತಿಭಟಿಸಿ, ನೌಕರರಲ್ಲಿ ಆತ್ಮಸ್ಥೈರ್ಯ ಮೂಡಿಸಲು ಅಕ್ಟೋಬರ್-28 ರಿಂದ ಅನಿರ್ದಿಷ್ಟ ಅಮರಣಾಂತ ಉಪವಾಸ ಸತ್ಯಾಗ್ರಹ ನಡೆಸಬೇಕೆಂದು ನಿರ್ಧರಿಸಿ ಪ್ರಕಟಣೆ ಹೊರಡಿಸೇಬಿಟ್ಟಿತು.

ಕಂಗಾಲಾದ ಸರ್ಕಾರ....

ಬಾಯಿಬಿಟ್ಟ ಮುಖ್ಯಮಂತ್ರಿ

ಅನಿರ್ದಿಷ ಅಮರಣಾಂತ ಉಪವಾಸ ಸತ್ಯಾಗ್ರಹಕ್ಕೆ [illegible]ರು ಮಾನಸಿಕವಾಗಿ ಸಿದ್ಧವಾಗಿಯೇ[illegible]ದ್ದರು. ಸರ್ಕಾರದ ಭರವಸೆಗಳಿಂದ ಬೇಸತ್ತಿದ್ದ ನೌಕರರಿಗೆ ಬೇರೆ ಹಾದಿ ಇರಲೇ ಇಲ್ಲ. ಅಲ್ಲದೆ ಪ್ರತಿನಿತ್ಯ ವಿಧಾನಸೌಧದಲ್ಲಿನ ಬೆಳವಣಿಗೆಗಳನ್ನು ಗಮನಿಸುತ್ತಿದ್ದ ನೌಕರರಿಗೆ ಈ ಹೋರಾಟ ಅನಿವಾರ್ಯವಾಗಿ ನಡೆಯಲೇಬೇಕೆಂಬ ಛಲ ಬಂದಿತ್ತು. ಅದಕ್ಕೂ ಮಹತ್ವದ ಕಾರಣವೊಂದಿತ್ತು. ಕಳೆದ ವಾರ ಒಂದು ದಿನ ಸುಮಾರು ಐವತ್ತಕ್ಕಿಂತ ವಿವಿಧ ವಿಭಾಗಗಳಿಗೆ ಸೇರಿದ ನೌಕರರು ಒಂದೆರಡು ಶಾಸಕರೊಂದಿಗೆ 'ಮರುನೇಮಕ'ಕ್ಕೆ ಸಂಬಂಧಿಸಿ ಮಾತನಾಡಲು ಕಾತುರದಿಂದ ಕಾಯುತ್ತಿದ್ದರು. ಶಾಸಕರು ಜೊತೆ ಇರುವುದರಿಂದ ಮುಖ್ಯಮಂತ್ರಿಗಳು ಏನಾದರೂ ಸ್ಪಷ್ಟ ನಿರ್ಧಾರವನ್ನು ಹೇಳಬಹುದು ಎಂಬ ಮಹದಾಸೆ ನೌಕರರ ಮನದಲ್ಲಿತ್ತು. ಆದರೆ ಅಲ್ಲಿಗೆ ಆಗಮಿಸಿದ ಮುಖ್ಯಮಂತ್ರಿಗಳು ಸೌಜನ್ಯಕ್ಕಾದರೂ ಅಲ್ಲಿ ನೆರೆದಿದ್ದವರನ್ನು ಮಾತನಾಡಿಸಲಿಲ್ಲ. ಬದಲಾಗಿ ತನ್ನ ಪಾಡಿಗೆ ತಾನು ಮೊಬೈಲ್‌ನಲ್ಲಿ ಮಾತನಾಡುತ್ತಾ dont care ಎನ್ನುವಂತೆ ಹಾದುಹೋದರು. ಕಾರಿನ ಬಾಗಿಲ ಬಳಿ ಈ ಗುಂಪು ಹಿಂಬಾಲಿಸಿತು. ಆದರೆ ಅವರು ಮಾಡೋಣ ಎನ್ನುತ್ತಲೇ ಕಾರನ್ನೇರಿದರು. ಇದರಿಂದ ಅಲ್ಲಿ ನೆರೆದಿದ್ದ ನೌಕರರಿಗೆಲ್ಲಾ ಆಕಾಶವೇ ಕಳಚಿ ಬಿದ್ದಂತಾಯಿತು. ಅನಿರ್ದಿಷ್ಟ ಉಪವಾಸ ಸತ್ಯಾಗ್ರಹ ಮಾತ್ರವೇ ಅವರೆದುರು ಇದ್ದ ದಾರಿಯಾಯಿತು.

ಈ ರೀತಿ ತೀವ್ರವಾಗಿ ನೊಂದ ನೌಕರರು ಹೋರಾಟಕ್ಕೆ ಸಿದ್ಧರಾಗಿದ್ದರು. ರಾಜ್ಯಾದ್ಯಂತ ವ್ಯಾಪಕ ಪ್ರಚಾರವೂ ನಡೆಯಿತು. ಇದಕ್ಕೆ ಬೆಸ್ತುಬಿದ್ದ ಸರ್ಕಾರ ಮತ್ತು ಮುಖ್ಯಮಂತ್ರಿಗಳು ಕೊನೆಗೂ ಬಾಯಿ ಬಿಡುವಂತಹ ಪರಿಸ್ಥಿತಿ ನಿರ್ಮಾಣವಾಗಿತ್ತು. ಇದುವರೆಗೂ 'ಚಂದ್ರೇಗೌಡರ' ಸಮಸ್ಯೆಯಂತಾಗಿದ್ದ ಕೃಪಾಂಕ ಅಂದು ಸರ್ಕಾರದ ಸಮಸ್ಯೆಯಾಗಿತ್ತು. ಒಂದಲ್ಲ-ಎರಡಲ್ಲ-ಮೂರು ಜನ ಮಂತ್ರಿಗಳು ಸರ್ಕಾರದ ವಕ್ತಾರರಾಗಿ ಮಾತನಾಡ ತೊಡಗಿದರು. ಚಳುವಳಿ ಕೈಬಿಡಿ, ತಾಳ್ಮೆ ಕಳೆದುಕೊಳ್ಳದಿರಿ, ಸರ್ಕಾರ ನಿಮ್ಮೊಂದಿಗಿದೆ ಇತ್ಯಾದಿ ಪ್ರಚಾರಗಳನ್ನು ಹರಿಯಬಿಟ್ಟರು. ನವೆಂಬರ್‌ನಲ್ಲಿ ರಾಜ್ಯೋತ್ಸವ ಕೊಡುಗೆ ಮೊದಲವಾರದಲ್ಲಿ ನೇಮಕಾತಿ ಎಂದೆಲ್ಲಾ ಘೋಷಿಸಿದರು. ಸ್ವತಃ ಮುಖ್ಯಮಂತ್ರಿಗಳೇ ಪ್ರಥಮಬಾರಿಗೆ ಮಾತನಾಡುವಂತಹ ಸ್ಥಿತಿ ತಲುಪಿದ್ದರು.

ಆದರೆ ಹೋರಾಟ ನಿಲ್ಲಲಿಲ್ಲ....

24 ರ ಮಧ್ಯಾಹ್ನದಿಂದಲೇ ಆರಂಭವಾಗಿ 28 ರ ಸಂಜೆವರೆಗೂ ಟಿ.ವಿ., ಪತ್ರಿಕೆಗಳಲ್ಲಿ ಇದೇ ಸುದ್ದಿಯೇ. ಇನ್ನೇನೂ ಆಗಿ ಹೋಯಿತಲ್ಲಾ ಎಂಬೆಲ್ಲಾ ಉದ್ಘೋಷಗಳು. ಆದರೆ ಸರ್ಕಾರದ ಈ ನಿರ್ಧಾರವನ್ನು ಒಪ್ಪಲು ನೌಕರರು ತಯಾರಿರಲಿಲ್ಲ. ನಮ್ಮ ಕಛೇರಿಗೆ ನೂರಾರು ಫೋನ್ ಕರೆಗಳನ್ನು ಮಾಡಿ ಮನವರಿಕೆ ಮಾಡಿಕೊಳ್ಳತೊಡಗಿದರು. ಸರ್ಕಾರಕ್ಕೆ ಈ ಬಗ್ಗೆ ಕಾಳಜಿ ಇದ್ದದ್ದೆ ಆದರೆ ಅಕ್ಟೋಬರ್-16 ರಂದೇ ಹೊರಡಿಸಬಹುದಿತ್ತು. ಆದರೆ 'ಅಮರಣಾಂತ ಉಪವಾಸ' ಆರಂಭವಾದರೆ ನಿಲ್ಲಿಸುವುದು ಕಷ್ಟವೆಂದು ಅರಿತ ಸರ್ಕಾರ ಚಳುವಳಿಗೆ ಜನ ಬಾರದಂತೆ ಈ ಘೋಷಣೆ ಮಾಡಿತು. ಈ ನಡುವೆ ಶಿವ ಕುಮಾರ್, ಸಿಪ್ಪೇಗೌಡರು ಪತ್ರಿಕಾ ಹೇಳಿಕೆ ನೀಡಿ ಹೋರಾಟದಲ್ಲಿ ಭಾಗವಹಿಸದಂತೆ ನೌಕರರಿಗೆ ಕರೆ ನೀಡಿದ್ದರು. ಆದರೆ ಈ ಯಾವುದೇ ಕರೆಗಳನ್ನು ನಂಬುವ ಸ್ಥಿತಿಯನ್ನು ನೌಕರರು ದಾಟಿಬಂದಿದ್ದರು. ಅವರು 'ಕ್ರಿಯಾಸಮಿತಿ' ಯ ಕರೆಯನ್ನು ಮಾತ್ರ ನಂಬುವ ಸ್ಥಿತಿಗೆ ಬಂದಿದ್ದರು. ಹೋರಾಟಕ್ಕೆ ಹೊರಟ ನೌಕರರನ್ನು ದಿಕ್ಕೆಡಿಸಲು ಸರ್ಕಾರ ಮಾಡಿರುವ ತಂತ್ರವೇ ಇದು ಎಂದು ನಂಬಿದ್ದ ನೌಕರರು ಕೊನೆಗೂ ಅಕ್ಟೋಬರ್-28 ರಂದೇ ಸಾವಿರಾರು ಸಂಖ್ಯೆಯಲ್ಲಿ ಬೆಂಗಳೂರಿಗೆ ಹರಿದು ಬಂದು ಸರ್ಕಾರದ ವಿಳಂಬ ನೀತಿಯನ್ನು ಪ್ರತಿಭಟಿಸಿ ಪ್ರದರ್ಶನ ನಡೆಸಿಯೇಬಿಟ್ಟರು.

ಆದರೂ ನೌಕರರ ನಿರಂತರ ಹೋರಾಟಕ್ಕೆ ಸಿಕ್ಕ ಪ್ರತಿಫಲವೇ ಸರ್ಕಾರದ ಈ ಘೋಷಣೆ! ಆದರೆ ನವೆಂಬರ್ ಮೊದಲವಾರದಲ್ಲಿ ಇದು ಅಂತಿಮ ಅಧಿಸೂಚನೆಯಾಗಿ ಹೊರಬಾರದಿದ್ದಲ್ಲಿ, ಮತ್ತೆ ನಮ್ಮ ಹೋರಾಟ ಎನ್ನುವ ಎಚ್ಚರಿಕೆಯೊಂದಿಗೆ ಅಂದಿನ ಹೋರಾಟವನ್ನು ಸದ್ಯಕ್ಕೆ ಮುಂದೂಡಲಾಯಿತು. ○

ಅಂಕಿ ಸಂಖ್ಯೆ

ಕರ್ನಾಟಕದಲ್ಲಿ ಭೂಹಿಡುವಳಿ ನೋಟ 1995-96 ರಲ್ಲಿ

	ಸಂಖ್ಯೆ	ವಿಸ್ತೀರ್ಣ-ಎಕರೆಗಳಲ್ಲಿ
ಒಟ್ಟು ಹಿಡುವಳಿದಾರರು	62,20,798	3,02,71,667
ಅತಿ ಸಣ್ಣ ರೈತರು (2.5 ಎಕೆಗಿಂತ ಕಡಿಮೆ)	26,09,513	31,20,705
ಸಣ್ಣ ರೈತರು (2.5 ರಿಂದ 5 ಎಕರೆ)	17,06,839	61,99,757
ಅರೆ ಮಧ್ಯಮ ರೈತರು (5 ರಿಂದ 10 ಎಕರೆ)	12,04,185	82,46,030
ಮಧ್ಯಮ ರೈತರು (10 ರಿಂದ 25 ಎಕರೆ)	5,94,232	87,22,920
ದೊಡ್ಡ ರೈತರು (25 ಎಕರೆಗೆ ಮೇಲ್ಪಟ್ಟು)	1,06,029	39,82,255

ಅಂದರೆ ಕರ್ನಾಟಕದಲ್ಲಿ ಶೇ 1.95 ಕೃಷಿ ಆಧಾರಿತ ಕುಟುಂಬಗಳು ಶೇ 10.31 ರಷ್ಟು ಭೂಮಿಯನ್ನು ಹೊಂದಿದ್ದರೆ, ಕೇವಲ 1.7 ರಷ್ಟು ಕುಟುಂಬಗಳು 13.16 ರಷ್ಟು ಭೂಮಿಯನ್ನು ಹೊಂದಿವೆ.

ಇರಾಕ್‌ನಲ್ಲಿ ಅಮೆರಿಕ ಗೆರಿಲ್ಲಾ ಯುದ್ಧ ಎದುರಿಸುತ್ತಿದೆ!

ಇತ್ತೀಚಿನ ವಾರದ ಘಟನೆಗಳು ಇರಾಕ್‌ನಲ್ಲಿ 'ಯುದ್ಧ' ಈಗ ಆರಂಭವಾಗಿದೆಯೋ ಎನ್ನುವ ಸ್ಥಿತಿ ಮೂಡಿಸುತ್ತಿದೆ. ಇರಾಕ್ ಯುದ್ಧ ಅಧಿಕೃತವಾಗಿ ಮುಗಿದ ಮೇಲೆ, ಸತ್ತಿರುವ ಅಮೆರಿಕನ್ ಸೈನಿಕರ ಸಂಖ್ಯೆ ಯುದ್ಧದಲ್ಲಿ ಸತ್ತವರಿಗಿಂತಲೂ ಹಲವು ಪಟ್ಟು ಹೆಚ್ಚು. ಮತ್ತು ದಿನೇದಿನೇ ಹೆಚ್ಚುತ್ತಿದೆ ಎಂಬುದು ಈಗ ಎಲ್ಲರಿಗೂ ತಿಳಿದಿರುವ ಸಂಗತಿ. ಅರಬ್ ಜಗತ್ತಿನ ಅತ್ಯಂತ ಪ್ರಬಲ ಶಕ್ತಿಯಾಗಿದ್ದ ಸದ್ದಾಂ ಹುಸೇನರ ಸೈನ್ಯ ಯಾವುದೇ ಅರ್ಥಪೂರ್ಣ ಪ್ರತಿರೋಧ ಒಡ್ಡದೆ ಸೋತು ಹೋದ ನಂತರ, ಇಂತಹ ಸ್ಥಿತಿ ಅತ್ಯಂತ ಕಡು ಅಮೆರಿಕನ್-ವಿರೋಧಿಗಳಿಗೂ ಆಶ್ಚರ್ಯ ತಂದಿದೆ.

ಇರಾಕ್‌ನ ಮೇಲೆ ದುರಾಕ್ರಮಣ ಮಾಡಿದ ಅಮೆರಿಕಾದ ಸೈನ್ಯವೀಗ ಅಲ್ಲಿನ ಜನತೆಯ ತೀವ್ರ ಪ್ರತಿರೋಧ ಎದುರಿಸುತ್ತಿದೆ. ಗೆರಿಲ್ಲಾಗಳ ಈ ಧಾಳಿಗಳಲ್ಲಿ ಯುದ್ಧದಲ್ಲಿ ಸಾವನ್ನಪ್ಪಿದವರಿಗಿಂತ ಅಧಿಕಪಟ್ಟು ಈಗ ಸತ್ತಿದ್ದಾರೆ. ದಿನಕ್ಕೆ ಕನಿಷ್ಟವೆಂದರೂ 50 ಧಾಳಿ ಅನುಭವಿಸುತ್ತಿರುವ ಅಮೆರಿಕಾ ಸೈನಿಕರಲ್ಲಿ ಆತ್ಮಹತ್ಯೆ ಪ್ರಮಾಣ ಹೆಚ್ಚಿದೆ. ಇರಾಕ್‌ನೊಳಗಿನ ಸ್ಥಿತಿಯತ್ತ ಒಂದು ಇಣುಕು ನೋಟ.

ಅಮೆರಿಕನ್ ಪಡೆಗಳು, ಟ್ಯಾಂಕಗಳು, ವಿಮಾನಗಳ ಮೇಲೆ ನಿತ್ಯ ದಾಳಿಯಲ್ಲದೆ, ಹಲವು ಅತ್ಯಂತ ಸುರಕ್ಷಿತ ಪ್ರದೇಶ ಎನ್ನಲಾದ ಬಾಗ್ದಾದ್‌ನ ನೆಲೆಗಳ ಮೇಲೆ ನಡೆದಿರುವ ಗೆರಿಲ್ಲಾ ಧಾಳಿಗಳು ಈ ಬಗೆಗಿನ ಅಮೆರಿಕನ್ ಸುಳ್ಳು ಪ್ರಚಾರ ಬಯಲಿಗೆಳೆದಿವೆ. ರೆಡ್ ಕ್ರಾಸ್ ಕೇಂದ್ರ, ಅಮೆರಿಕನ್ ಇರಾಕ್ ಸರ್ಕಾರಿ ಕೇಂದ್ರಗಳು, ಹೋಟೇಲುಗಳು ಇತ್ಯಾದಿ ಮೇಲೆ ಅನಾಯಾಸವಾಗಿ ನಡೆಯುತ್ತಿರುವ ದಾಳಿಗಳನ್ನು ಅಮೆರಿಕ ಒಪ್ಪಿಕೊಳ್ಳದಿದ್ದರೂ, ಅಧೀರಗೊಳಿಸಿದೆ. ಇರಾಕ್‌ನಲ್ಲಿ ಪ್ರತಿರೋಧ ಒಡ್ಡುತ್ತಿರುವುದು ಕೆಲವು ಸದ್ದಾಂ ಹುಸೇನರ ಕುರುಡು ಬೆಂಬಲಿಗರು ಎನ್ನುವ ಅಮೆರಿಕನ್ ಪ್ರಚಾರವನ್ನು ಈಗ ಯಾರೂ ನಂಬುತ್ತಿಲ್ಲ. ಯುರೋಪಿಯನ್ ಪತ್ರಕರ್ತರಲ್ಲದೆ ಅಮೆರಿಕನ್ ಸೈನ್ಯಾಧಿಕಾರಿಗಳೇ ಈ ಮಟ್ಟದ ಪ್ರತಿರೋಧದ ಬಗ್ಗೆ ಬಹಳ ಆಶ್ಚರ್ಯ ವ್ಯಕ್ತಪಡಿಸಿದ್ದಾರೆ. ಈ ಪ್ರತಿರೋಧ ಒಡ್ಡುವ ಗೆರಿಲ್ಲಾಗಳು ಸದ್ದಾಂ ಹುಸೇನ್ ಬೆಂಬಲಿಗರಲ್ಲ ಎಂದು ಹಲವು ಮೂಲಗಳು ತಿಳಿಸಿದೆ. ಇರಾಕ್‌ನ ಅಮೆರಿಕನ್ ಆಕ್ರಮಣದ ವಿರುದ್ಧ ಪ್ರತಿರೋಧಕ್ಕೆ ಹಲವಾರು ಭೂಗತ ಗುಂಪುಗಳು ಸನ್ನದ್ಧವಾಗಿವೆ. ಕಮ್ಯುನಿಸ್ಟರಿಂದ ಆಲ್ ಖಾಯಿದವರೆಗೆ ಹಲವಾರು ರೀತಿಯ ಗುಂಪುಗಳು ಇದರಲ್ಲಿ ತೊಡಗಿವೆ. ಅಲ್ಲಲ್ಲಿ ಅವು ಸ್ವಸಂಯೋಜಿತ ದಾಳಿ ನಡೆಯುತ್ತಿರುವುದೂ ಕಂಡುಬಂದಿದೆ. ಅಮೆರಿಕಾ ಕೈಗೊಂಬೆ ಇರಾಕ್ ಸರ್ಕಾರಕ್ಕಾಗಲೀ, ಅಮೆರಿಕ ಸೈನ್ಯಕ್ಕಾಗಲೀ ಕಾನೂನು-ವ್ಯವಸ್ಥೆ ನಿಯಂತ್ರಿಸುವುದರಲ್ಲಿ ಯಾವುದೇ ಸಫಲತೆ ಸಿಕ್ಕಿಲ್ಲ ಎಂಬುದು ಸ್ಪಷ್ಟ. ಅತ್ಯಂತ ನಿರ್ದಯ ಸ್ಥಿತಿಯಲ್ಲಿ ಅನ್ಯಾಯದ ವಿರುದ್ಧ ಪ್ರತಿರೋಧ ಚಿಮ್ಮಿ ಬರುತ್ತದೆ ಎಂಬ ಅನುಮಾನ ನಿಜವಾಗುತ್ತಿದೆ.



ಅಮೆರಿಕನ್ ಸೈನಿಕರು ಅತ್ಯಂತ ನಿರಾಶದಾಯಕ ಸ್ಥಿತಿ ಎದುರಿಸುತ್ತಿದ್ದು, ಅತ್ಯಂತ ಬರ್ಬರ ಕೃತ್ಯಗಳಲ್ಲಿ ತೊಡಗಿದ್ದಾರೆ. ಪಾಶ್ಚಿಮಾತ್ಯ ಸಂಘಟನೆಗಳಾದ ಅಮ್ನೆಸ್ಟಿ, ಹ್ಯೂಮನ್ ರೈಟ್ಸ್ ವಾಚ್ ಈ ಬಗ್ಗೆ ತೀವ್ರ ಪ್ರತಿಭಟನೆ ಸಲ್ಲಿಸಿವೆ. ಸರಾಸರಿ 50 ದಾಳಿಗಳನ್ನು ಎದುರಿಸುವ ಅಮೆರಿಕನ್ ಸೈನ್ಯದಲ್ಲಿ, ಆತ್ಮಹತ್ಯೆ ಮಾಡಿಕೊಳ್ಳುವವರ ಸಂಖ್ಯೆ ವಿಪರೀತವಾಗಿ ಏರಿದೆ. ಆದ್ದರಿಂದಲೇ ಅಮೆರಿಕ ಇತರ ದೇಶಗಳ ಬಾಡಿಗೆ ಸೈನಿಕರನ್ನು ಇರಾಕಿಗೆ ತರಲು ಅಷ್ಟು ತರಾತುರಿಯಿಂದ ಇದೆ. ಆದರಲ್ಲೂ ಅದಕ್ಕೆ ನಿರೀಕ್ಷಿತ ಸಫಲತೆ ಸಿಕ್ಕಿಲ್ಲ.

ಕರಾಚಿಯಲ್ಲಿ ಏಶ್ಯನ್ ಟ್ರೇಡ್ ಯೂನಿಯನ್‌ಗಳ ಸಭೆ

ಇತ್ತೀಚೆಗೆ (ಸೆಪ್ಟೆಂಬರ್ 1-2 ರಂದು) ಕರಾಚಿಯಲ್ಲಿ 170 ಭಾರತೀಯ ಉಪಖಂಡದ ಪ್ರಮುಖ ಟ್ರೇಡ್ ಯೂನಿಯನ್‌ಗಳ ದೊಡ್ಡ ಸಭೆ ನಡೆಯಿತು. ಇದರಲ್ಲಿ ಹಲವು ಸರ್ಕಾರೇತರ ಸಂಘಟನೆಗಳು ಭಾಗವಹಿಸಿದ್ದವು. ಸಭೆಯ ಮುಖ್ಯ ಘೋಷಣೆ 'ಶಾಂತಿಗಾಗಿ ಕಾರ್ಮಿಕರು'. ಸಭೆ ಉಪಖಂಡದಲ್ಲಿ ಶಾಂತಿ ಕಾಪಾಡುವ ಬಗ್ಗೆ ಟ್ರೇಡ್ ಯೂನಿಯನ್‌ಗಳು ಪ್ರಮುಖ ಪಾತ್ರವಹಿಸುವುಲ್ಲದೆ, ಸಾಮ್ರಾಜ್ಯಶಾಹಿ ಈ ಪ್ರದೇಶದಲ್ಲಿ ಮೂಗು ತೂರಿಸುವುದನ್ನು ತಡೆಯುವಲ್ಲಿ ಎಚ್ಚರವಹಿಸಬೇಕೆಂದು ಕರೆ ನೀಡಿತು. ಸಭೆ 'ಕರಾಚಿ ಘೋಷಣೆ' ಎಂಬ ಹೆಸರಿಂದ ಘೋಷಣೆಯನ್ನು ಅಂಗೀಕರಿಸಿತು. ಸಿಐಟಿಯು (ಅಬ್ದುಲ್ ಗಫೂರ್ ಮತ್ತು ಪಂಚಾಡಿ ರೋಜಾ) ಮತ್ತು ಎಐಎಡಬ್ಲ್ಯುಎ (ಸುನೀತ್ ಚೋಪ್ರಾ) ಪ್ರತಿನಿಧಿಗಳು ಈ ಸಭೆಯಲ್ಲಿ ಭಾಗವಹಿಸಿ ಪ್ರಮುಖ ಪಾತ್ರವಹಿಸಿದ್ದರು.

ಈ ಪ್ರದೇಶದಲ್ಲಿ ಅಣ್ವಸ್ತ್ರಗಳನ್ನು ನಿಲ್ಲಿಸುವುದಲ್ಲದೆ, ಎಲ್ಲಾ ರೀತಿಯ ಸಾಮೂಹಿಕ ವಿನಾಶದ ಅಸ್ತ್ರಗಳನ್ನು ನಿಲ್ಲಿಸಲು ಘೋಷಣೆ ಕರೆ

ಏಶ್ಯಾದಲ್ಲಿ ಸಾಮ್ರಾಜ್ಯಶಾಹಿ-ವಿರೋಧಿ ಪ್ರತಿರೋಧಕ್ಕೆ ಕರೆ

ನೀಡಿದೆ. ಇದು ಯಾವುದೇ ದೇಶದ, ಜನತೆಯ ರಕ್ಷಣೆಗೆ ಸಹಕಾರಿಯಾಗುವುದಿಲ್ಲ ಮಾತ್ರವಲ್ಲ, ತೀವ್ರ ಅಪಾಯಕಾರಿಯಾಗಿದೆ ಎಂದು ನಿರ್ಧರಿಸಿ ಯಾವುದೇ ರೀತಿಯ ಶಸ್ತ್ರಾಸ್ತ್ರ ಪೈಪೋಟಿ ವಿರೋಧಿಸುವುದಲ್ಲದೆ, ತಕ್ಷಣ ಬಜೆಟ್‌ಗಳಲ್ಲಿ ತೀವ್ರ ಕಡಿತ ಮಾಡಬೇಕೆಂದು ಘೋಷಣೆ ಒತ್ತಾಯ ಮಾಡಿದೆ. ಬದಲಾಗಿ ಸಾಮ್ರಾಜ್ಯಶಾಹಿ ಜಾಗತೀಕರಣ ಹೇರುತ್ತಿರುವ ಆರ್ಥಿಕ ಸಾರ್ವಭೌಮತ್ವ ಧಿಕ್ಕರಿಸುವ ಕ್ರಮಗಳ ವಿರುದ್ಧ ಪ್ರತಿರೋಧ ಒಡ್ಡಬೇಕು, ದೇಶದ ಸ್ವಾತಂತ್ರ್ಯ, ಸಾರ್ವಭೌಮತೆ ನಿರಾಕರಿಸುವ ಸಾಮ್ರಾಜ್ಯಶಾಹಿ ಶಕ್ತಿಗಳ ವಿರುದ್ಧ ಹೋರಾಡಬೇಕೆಂದು ಘೋಷಣೆ ಕರೆ ನೀಡಿದೆ.

ಈಗ ಕಾರ್ಮಿಕರು, ಟ್ರೇಡ್ ಯೂನಿಯನ್‌ಗಳ ಮೇಲೆ ಕಾನೂನು ಬದಲಾವಣೆ ಮತ್ತು ಬಲಪ್ರಯೋಗದ ಮೂಲಕ ನಡೆಯುತ್ತಿರುವ ದಬ್ಬಾಳಿಕೆ ನಿಲ್ಲಿಸಬೇಕು. ಕಾರ್ಮಿಕರ ಪ್ರಜಾಸತ್ತಾತ್ಮಕ ಹಕ್ಕುಗಳನ್ನು ಚಲಾಯಿಸಲು ಈ ಪ್ರದೇಶಗಳ ಟ್ರೇಡ್ ಯೂನಿಯನ್‌ಗಳ ಸಂಯೋಜಿತ ಕ್ರಮ ಕೈಗೊಳ್ಳಬೇಕು ಎಂದು ಘೋಷಣೆ ಹೇಳಿದೆ.

ಭಾರತ, ಪಾಕಿಸ್ತಾನ, ಶ್ರೀಲಂಕಾದ ಟ್ರೇಡ್‌ಯೂನಿಯನ್ ಪ್ರತಿನಿಧಿಗಳು ಈ ಸಭೆಯಲ್ಲಿ ಭಾಗವಹಿಸಿದ್ದು, ಇದು ಅತ್ಯಂತ ಮಹತ್ವದ ಸಭೆಯಾಗಿತ್ತು.


ಆರ್ಥಿಕ ನೀತಿಗಳು ಸಾಮಾಜಿಕ ನ್ಯಾಯದತ್ತ ಮತ್ತೆ ಬರಲೇಬೇಕಾಗುತ್ತದೆ

ಜಾಗತಿಕ ಮಟ್ಟದಲ್ಲಿ ಸಮಾಜವಾದಿ ಶಕ್ತಿಗಳಿಗೆ ಹಿನ್ನಡೆಯುಂಟಾಗಿ ಉದಾರೀಕರಣವಾದಿಗಳು ವಿಜೃಂಭಿಸುತ್ತಿರುವಂತೆ ನಮ್ಮ ಬಹುತೇಕ ಮಾಧ್ಯಮಗಳು ಬಿಂಬಿಸುತ್ತಿರುವೆ. ಸೋವಿಯತ್ ಯೂನಿಯನ್ನಿನ ಪತನ ಹಾಗೂ ನಂತರದಲ್ಲಿ ಇತರ ಹಲವು ದೇಶಗಳಲ್ಲಿ ಆದ ಬದಲಾವಣೆಯನ್ನು ಇವರು ಸಮಾಜವಾದಕ್ಕೆ ಆದ ಶಾಶ್ವತ ಸೋಲು ಎಂದೂ ಬಿಂಬಿಸಲು ಪ್ರಯತ್ನಿಸುತ್ತಿದ್ದಾರೆ. ಸಮಾಜವಾದವು ಮನುಷ್ಯ ಜೀವನವನ್ನು ಹೆಚ್ಚು ವ್ಯವಸ್ಥಿತ ಹಾಗೂ ಪ್ರಗತಿಪರಗೊಳಿಸುವ ಮಹತ್ವದ ಉದ್ದೇಶದ್ದಾದ್ದರಿಂದ ಇಲ್ಲಿ ಶಾಶ್ವತ ಸೋಲಿನ ಮಾತು ಬರಲುಸಾಧ್ಯವಿಲ್ಲ. ಈ ಧ್ಯೇಯಕ್ಕೆ ಖಂಡಿತವಾಗಿಯೂ ಪ್ರಾಮುಖ್ಯತೆ ಕಡಿಮೆಯಾಗಲು ಸಾಧ್ಯವಿಲ್ಲ.

ಇದೇ ಮಾತನ್ನು ವಿಶ್ವಸಂಸ್ಥೆಯ ವ್ಯಾಪಾರ ಮತ್ತು ಅಭಿವೃದ್ಧಿಗಾಗಿನ ಸಭೆ (ಅಂಕ್ಟಾಡ್) ಹೇಳಿದೆ. ಐಎಂಎಫ್ ಮತ್ತು ವಿಶ್ವಬ್ಯಾಂಕುಗಳ ನೆರವು ಬಯಸುವ ಎಲ್ಲಾ ದೇಶಗಳು ಎಲ್ಲಾ ಸ್ತರಗಳಲ್ಲಿ ತಮ್ಮ ಆರ್ಥಿಕ ನೀತಿಗಳನ್ನು ಉದಾರೀಕರಣ ಮತ್ತು ಜಾಗತೀಕರಣದ ಅಡಿಯಾಳಾಗಿ ಮಾಡಿಕೊಳ್ಳಬೇಕಾಗುತ್ತದೆ. ತಮ್ಮ ಸ್ವಾಯತ್ತತೆಯ ಬೆಳೆಯನ್ನು ಅವು ತರುತ್ತಿವೆ. ಇಂತಹ ನೀತಿಗಳು ಬದಲಾಗಿ ಸಾಮಾಜಿಕ ನ್ಯಾಯ ಮತ್ತು ಸ್ಥಿರತೆಯ ಕಡೆಗೆ ಈ ದೇಶಗಳು ಗಮನ ಹರಿಸಲೇಬೇಕಾಗುತ್ತದೆ ಎಂದು ಅಂಕ್ಟಾಡ್ ಹೇಳಿದೆ.

ಲ್ಯಾಟಿನ್ ಅಮೆರಿಕದ ಉದಾಹರಣೆಯನ್ನು ನೀಡಿರುವ ಅಂಕ್ಟಾಡ್ ಈ ದೇಶಗಳು ಅಂತರ್‍ರಾಷ್ಟ್ರೀಯ ಬಂಡವಾಳಶಾಹಿ ಎಲ್ಲ ತರಹದ ಉದಾರೀಕರಣವನ್ನು ಮಾಡಿದವು. ಆದರೆ ಈ ದೇಶಗಳಲ್ಲಿ ಆರ್ಥಿಕ ಬೆಳವಣಿಗೆ, ಉದ್ಯೋಗ ಬೆಳವಣಿಗೆ ಮತ್ತು ಬಡತನ ನಿರ್ಮೂಲನೆಯನ್ನು ನೋಡಿದರೆ ಪರಿಸ್ಥಿತಿ ಬಳ ನಿರಾಶದಾಯಕವಾಗಿದೆ ಎಂದು ಅಂಕ್ಟಾಡ್‌ನ ಕಾರ್ಯದರ್ಶಿ ರೂಬೆನ್ಸ್ ರಿಕುಪೆರೊ ಹೇಳಿದ್ದಾರೆ.

ನಮ್ಮ ಉದಾರೀಕರಣವಾದಿಗಳು ಮತ್ತು ಜಾಗತೀಕರಣ ವಾದಿಗಳು ವಿಶೇಷವಾಗಿ ಎನ್‌ಡಿಎ ಸರ್ಕಾರ ಈ ಮತುಗಳನ್ನು ಆಲಿಸಬೇಕಲ್ಲವೇ?



ಐಒಸಿಯ ಖಾಸಗೀಕರಣ

ಹೆಚ್‌ಪಿಸಿಎಲ್ ಮತ್ತು ಬಿಪಿಸಿಎಲ್‌ಗಳ ಮಾರಾಟಕ್ಕೆ ಹಿನ್ನಡೆಯುಂಟಾದ ನಂತರ ಕೇಂದ್ರದ ಮಂತ್ರಿ ಅರುಣ್ ಶೌರಿಯವರು ಇಂಡಿಯನ್ ಆಯಿಲ್ ಕಾರ್ಪೊರೇಷನ್ (ಐಒಸಿ)ಯ ಮಾರಾಟದ ಪ್ರಸ್ತಾಪವನ್ನು ಮುಂದಿಟ್ಟಿದ್ದಾರೆ. ಹೆಚ್‌ಪಿಸಿಎಲ್ ಮತ್ತು ಬಿಪಿಸಿಎಲ್ ಖಾಸಗೀಕರಣದ ಪ್ರಯತ್ನಗಳು ವಿಫಲವಾದ ನಂತರ ಹೊಸ ಹೊಸ ತಂತ್ರಗಳನ್ನು ರೂಪಿಸತೊಡಗಿರುವ ಇವರು ಈಗ ಐಒಸಿಯತ್ತ ಕಣ್ಣು ಹಾಕಿರುವುದು ಸ್ಪಷ್ಟ.

ಆದರೆ ಆಗಲೇ ಅವರೊಳಗೇ ಒಡಕು ಮಾಡುತ್ತಿರುವುದು ಕಾಣುತ್ತಿದೆ. ಎನ್‌ಡಿಎ ಸರ್ಕಾರದ ಇನ್ನೊಬ್ಬ ಮಂತ್ರಿ ರಾಮನಾಯಕ ಇನ್ನೂ ಐಒಸಿ ಮಾರಾಟದ ಬಗ್ಗೆ ನಿರ್ಧಾರವನ್ನು ತೆಗೆದುಕೊಳ್ಳಲಾಗಿಲ್ಲ ಎಂದು ಹೇಳಿದ್ದಾರೆ. ಖಾಸಗೀಕರಣ ಮಾಡ ಹೊರಟರೂ ಅದು ಸುಲಭದ ಕೆಲಸವಂತೂ ಆಗಿರುವುದಿಲ್ಲ.

ಮಾತುಕತೆ ಮುರಿದರೆ ನಿಮಗೇ ಹಾನಿ ಸಫಲವಾದರೆ ನಮಗೇ ಲಾಭ

ಕ್ಯಾನ್‌ಕುನ್‌ನಲ್ಲಿ ವಿಶ್ವವ್ಯಾಪಾರ ಸಂಸ್ಥೆಯ ಮಾತುಕತೆಗಳು ವಿಫಲವಾಗಿರುವುದು ಅಭಿವೃದ್ಧಿಶೀಲ ದೇಶಗಳಿಗೆ ಹಾನಿಯುಂಟು ಮಾಡುತ್ತದೆ ಎಂದು ಯುರೋಪಿನ ಸಮುದಾಯ ಹೇಳಿದೆ. ಯುರೋಪಿನ ಸಮುದಾಯದ ರಾಯಭಾರಿ ಮೈಕೆಲ್ ಕೈಲೊಟ್ ಅವರ ಪ್ರಕಾರ ಯುರೋಪಿನ ಸಮುದಾಯ ಅಭಿವೃದ್ಧಿಶೀಲ ದೇಶಗಳಿಂದ ಅತ್ಯಂತ ಹೆಚ್ಚು ಕೃಷಿ ಉತ್ಪನ್ನಗಳನ್ನು ಆಮದು ಮಾಡಿಕೊಳ್ಳುತ್ತಿದೆ. ಆದ್ದರಿಂದ ಮಾತುಕತೆಗಳು ವಿಫಲವಾದರೆ ಆದರಿಂದ ಅಭಿವೃದ್ಧಿಶೀಲ ದೇಶಗಳಿಗೆ ಹಾನಿ ಎಂಬುದು ಅವರ ಅಂಬೋಣ.

ವಿಶ್ವವ್ಯಾಪಾರ ಸಂಸ್ಥೆಯಲ್ಲಿ ಉತ್ತರ, ದಕ್ಷಿಣವೆಂಬ ಧ್ರುವೀಕರಣವೇನೂ ಇಲ್ಲವೆಂದೂ ಅವರು ಹೇಳಿದ್ದಾರೆ.

ಯುರೋಪಿನ ಸಮುದಾಯ ಮತ್ತು ಅಮೇರಿಕ ಜೊತೆಯಾಗಿ ಅಭಿವೃದ್ಧಿಶೀಲ ಮತ್ತು ಹಿಂದುಳಿದ ದೇಶಗಳ ಮೇಲೆ ಅನ್ಯಾಯದ ಷರತ್ತುಗಳನ್ನು ಹೇರ ಹೊರಟಿದ್ದರಿಂದಲೇ ಈ ಮಾತುಕತೆಗಳು ಮುರಿದು ಬಿದ್ದವು ಎಂಬುದನ್ನು ಇವರು ಮರೆ ಮಾಡುತ್ತಿದ್ದಾರೆ. ನಾವು ಹಾಕುವ ಎಲ್ಲ ಷರತ್ತುಗಳನ್ನು ಒಪ್ಪಿಕೊಂಡರೆ ನಿಮಗೆ ಲಾಭ ಎಂಬುದು ಅವರ ಮಾತಿನ ಇಂಗಿತ.

ಭಾರತವೂ ಈ ಸಂದರ್ಭದಲ್ಲಿ 'ದೋಷಾರೋಪಣೆ ಮಾಡುವ ಬದಲು ಅಭಿವೃದ್ಧಿ ಹೊಂದಿದ ದೇಶಗಳ ಮಾತುಕತೆಗಳನ್ನು ಮುಂದಕ್ಕೊಯ್ಯುವ ಪ್ರಯತ್ನಗಳ ಬಗ್ಗೆ ಮಾತನಾಡಲಿ' ಎಂದು ಹೇಳಿದೆ.

ಅಮೇರಿಕ ಮತ್ತು ಅಭಿವೃದ್ಧಿ ಹೊಂದಿದ ದೇಶಗಳು ತಮಗೆ ಕ್ಯಾನ್‌ಕುನ್‌ನಲ್ಲಿ ಉಂಟಾದ ಹಿನ್ನಡೆಯ ಹಿಡಿತದಿಂದ ಹೊರಬರಲಾಗಲಿಲ್ಲ ಎಂಬುದು ಸ್ಪಷ್ಟ.



ಸಣ್ಣ ವ್ಯಾಪಾರದಲ್ಲೂ ಜಾಗತೀಕರಣದ ಹಾವಳಿ

ಮೆಟ್ರೋ ಕ್ಯಾಶ್ ಅಂಡ್ ಕ್ಯಾರಿ

ಇತ್ತೀಚಿಗೆ ಬೆಂಗಳೂರಿನ ಯಶವಂತಪುರದಲ್ಲಿ ಆರಂಭವಾದ ಮೆಟ್ರೋ ಕ್ಯಾಶ್ ಅಂಡ್ ಕ್ಯಾರಿ ಮಳಿಗೆ ಸುದ್ದಿ-ಗದ್ದಲ ಎಬ್ಬಿಸಿದೆ. ಜರ್ಮನ್ ಬಹುರಾಷ್ಟ್ರೀಯ ಕಂಪನಿಯಾದ ಮೆಟ್ರೋ ಕ್ಯಾಶ್ ಅಂಡ್ ಕ್ಯಾರಿ ತನ್ನ ಮೊದಲ ಹೋಲ್‌ಸೇಲ್ ಮಳಿಗೆಯನ್ನು ಆರಂಭಿಸಿದ್ದು ಈ ಸುದ್ದಿ-ಗದ್ದಲಕ್ಕೆ ಕಾರಣ. ಬೆಂಗಳೂರು ಸಣ್ಣ ವ್ಯಾಪಾರಿಗಳ ಕೂಟ ಅದನ್ನು ವಿರೋಧಿಸಿ ದೊಡ್ಡ ಜಾಹೀರಾತುಗಳನ್ನು ದಿನಪತ್ರಿಕೆಗಳಲ್ಲಿ ನೀಡಿ ಮೆಟ್ರೋ ಕ್ಯಾಶ್ ಅಂಡ್ ಕ್ಯಾರಿ ನ ಅಪಾಯದ ಬಗ್ಗೆ ಹೇಳಲಾರಂಭಿಸಿದ್ದು ವಿಶೇಷವೇ. ಸಣ್ಣ-ಮಧ್ಯಮ ವ್ಯಾಪಾರೀ ವರ್ಗ ಜಾಗತೀಕರಣದ ಈ ಹಾವಳಿಯನ್ನು ಗುರುತಿಸಿ ವಿರೋಧಿಸುತ್ತಿರುವುದು ಆಶ್ಚರ್ಯವೆನಿಸಿದರೂ ಸ್ವಾಭಾವಿಕವೇ.

5700 ಕೋಟಿ ಡಾಲರು (ಸುಮಾರು 25 ಸಾವಿರ ಕೋಟಿ ರೂ ನಷ್ಟು) ವಹಿವಾಟು ಇರುವ ಈ ದೈತ್ಯ ಕಂಪನಿ ದೇಶದ ಪ್ರಮುಖ 20 ಕೇಂದ್ರಗಳಲ್ಲಿ ಇಂತಹ (ಸಗಟು) ಹೋಲ್‌ಸೇಲ್ ಮಳಿಗೆಗಳನ್ನು ತೆರೆಯಲಿದೆ. ಮುಂದಿನ ನಾಲ್ಕೈದು ವರ್ಷಗಳಲ್ಲಿ 100 ಕೋಟಿ ಡಾಲರು (ಅಂದರೆ ಸುಮಾರು 4500 ಕೋಟಿ ರೂ) ವಹಿವಾಟು ನಡೆಸುವ ಉದ್ದೇಶ ಹೊಂದಿದೆ.

ದೇಶದ ಮುಖ್ಯ ಸರಕುಗಳ ವ್ಯಾಪಾರದಲ್ಲಿ ಸ್ಥಳೀಯ ಸಣ್ಣ-ಮಧ್ಯಮ ವ್ಯಾಪಾರಿಗಳನ್ನು ಮುಳುಗಿಸಿ ಎಲ್ಲಾ ವಹಿವಾಟನ್ನು ಕಬಳಿಸುವ ಶಕ್ತಿ ಇರುವ ಈ ದೈತ್ಯ ಕ್ಯಾಶ್ ಅಂಡ್ ಕ್ಯಾರಿಯನ್ನು ಅವರು ಹೊಸ 'ಈಸ್ಟ್ ಇಂಡಿಯಾ ಕಂಪನಿ' ಎಂದು ಕರೆದಿದೆ. ಮೆಟ್ರೋ ಸಗಟು ವಹಿವಾಟಿನ ಪರವಾನಿಗೆಯನ್ನು ಕೇಂದ್ರ ಸರ್ಕಾರದಿಂದ ಪಡೆದಿದ್ದು, ರಾಜ್ಯ ಸರ್ಕಾರದ ಯಾವುದೇ ಪರವಾನಗಿ ಪಡೆದಿಲ್ಲ. ಕೃಷಿ ಉತ್ಪನ್ನಗಳ ಸರಕು ವ್ಯಾಪಾರದ ಸಗಟು ವಹಿವಾಟನ್ನು ರಾಜ್ಯದ ಕಾನೂನು ಪ್ರಕಾರ ಎಪಿಎಂಸಿ ಕಾನೂನು ಪ್ರಕಾರ, ಎಪಿಎಂಸಿ ಯಾರ್ಡ್ ಗಳ ಮೂಲಕವೇ ನಡೆಸಬೇಕು. ಇಂತಹ ಟೀಕೆ ಬಂದ ನಂತರ ಮೆಟ್ರೋ ಕೃಷಿ ಉತ್ಪನ್ನಗಳನ್ನು ಕೈಬಿಟ್ಟಿದೆಯಂತೆ. ಮೊದಲು ಅಗ್ಗದ ಬೆಲೆಗಳಲ್ಲಿ ಸರಕುಗಳನ್ನು ಮಾರಿ ಸಣ್ಣ - ಮಧ್ಯಮ ವ್ಯಾಪಾರಿಗಳನ್ನು ಮುಳುಗಿಸಿ, ಆಮೇಲೆ ಬೆಲೆಗಳನ್ನು ಏರಿಸುವುದು ಈ ಕಂಪನಿಯ ಹುನ್ನಾರ ಎಂದು ವಾದಿಸಲಾಗಿದೆ. ಸಾಕಷ್ಟು ದೊಡ್ಡ ಸಂಖ್ಯೆಯಲ್ಲಿ ಅಕ್ಕಿ, ಮೆಣಸು ಮುಂತಾದ ಏಕ-ಸರಕುಗಳ ಸಗಟು ವ್ಯಾಪಾರದಲ್ಲಿ ತೊಡಗಿರುವ ಹಲವರು ದಿವಾಳಿಯಾಗುವ ಸಂಭವವಿದೆ. ಈ ವ್ಯಾಪಾರ ಹಲವಾರು ಜನರಿಗೆ ಉದ್ಯೋಗದ ಒದಗಿಸುತ್ತಿದ್ದು, ಬಹಳ ಕಡಿಮೆ ಉದ್ಯೋಗಿಗಳು ಇರುವ ಮೆಟ್ರೋ ಅದನ್ನು ಕಬಳಿಸಲಿದೆ.


ಇದಲ್ಲದೆ ಸಗಟು ವ್ಯಾಪಾರದ ಪರವಾನಗಿ ಪಡೆದಿದ್ದರೂ ಮೆಟ್ರೋ ನಿಜವಾಗಿ ಸಗಟು ವ್ಯಾಪಾರದಲ್ಲಿ ತೊಡಗಿಲ್ಲ. ನಿಜವಾಗಿಯೂ ಬಳಕೆದಾರರಿಗೆ ನೇರವಾಗಿ ಸರಕು ಮಾರುವ ವಹಿವಾಟಿನಲ್ಲಿ ಕಾನೂನುಬಾಹಿರವಾಗಿ ತೊಡಗಿದೆ. ಇದಕ್ಕಾಗಿ ಕಂಪನಿಗಳ ಉದ್ಯೋಗಿಗಳನ್ನು - ಕಂಪನಿಗಳ ಹೆಸರಿನಲ್ಲಿ ವ್ಯಾಪಕವಾಗಿ ನೊಂದಾಯಿಸಲಾಗಿದೆ. ಮೊದಲು ಕೆಲವು ದಿನಗಳಲ್ಲಿ ಕಡಿಮೆ ಬೆಲೆ, ಭಾರಿ ಜಾಹೀರಾತುಗಳ ಮೂಲಕ ಭಾರಿ ಖರೀದಿದಾರರನ್ನು ಆಕರ್ಷಿಸಿದ ಮೆಟ್ರೋ, ಸಗಟು ವ್ಯಾಪಾರದಲ್ಲಿ ತೊಡಗಿಲ್ಲ ಎಂಬುದು ಸ್ಪಷ್ಟ.



ಸಣ್ಣ-ಮಧ್ಯಮ ಸಗಟು ಮತ್ತು ಇತರ ವ್ಯಾಪಾರಿಗಳನ್ನೂ ಅವರ ಉದ್ಯೋಗಗಳನ್ನು ಬೀದಿಪಾಲು ಮಾಡುವುದಲ್ಲದೆ, ಮೆಟ್ರೋದಂತಹ ಕಂಪನಿಗಳು 'ಏಕಸ್ವಾಮ್ಯ' ಸಾಧಿಸಿದರೆ! ಸರಕು ಉತ್ಪಾದಕರ ಮೇಲೂ ತನ್ನ ದೈತ್ಯ ಬಲ ಬಳಸಿ, ಕಡಿಮೆ ಬೆಲೆಗೆ ಖರೀದಿ ಮಾಡಲು ಆರಂಭಿಸಬಹುದು. ಇದು ದೊಡ್ಡ ಪ್ರಮಾಣದ ವ್ಯಾಪಾರದ ಬಲದಿಂದ ಬಳಕೆದಾರರಿಗೆ ಕಡಿಮೆ ಬೆಲೆ ಸಾಕಷ್ಟು ಕಾಲ ಕೊಡಲು ಸಾಧ್ಯವಾದರೂ, ದೇಶದ ಆರ್ಥಿಕತೆಗೆ ಇದು ಒಳ್ಳೆಯದಲ್ಲ. ಒಟ್ಟು ವಹಿವಾಟು ದೊಡ್ಡ ಪಾಲನ್ನು ಉತ್ಪಾದಕರಿಂದ ಕಸಿಯುಬಹುದು. ಇದಲ್ಲದೆ ಒಂದು ಬಾರಿ ಏಕಸ್ವಾಮ್ಯ ಸಾಧಿಸಿದ ಮೇಲೆ, ಬೆಲೆ ಏರಿಸುವ ತೀವ್ರ ಅಪಾಯವೂ ಇದ್ದೇ ಇದೆ. ಪೈಪೋಟಿಗೆ ಯಾರೂ ಇಲ್ಲದ ಮೇಲೆ ಅವರ ಬೆಲೆ ಹೆಚ್ಚೋ ಕಡಿಮೆಯೋ ಎಂದು ನಿರ್ಧರಿಸುವುದು ಹೇಗೆ?

ಇದಲ್ಲದೆ ಇನ್ನೊಂದು ಕ್ಷೇತ್ರ(ಸಗಟು ವ್ಯಾಪಾರ)ದಲ್ಲಿ ವಿದೇಶಿ ಬಂಡವಾಳ ಸಾಮ್ರಾಜ್ಯಶಾಹಿ ಜಾಗತೀಕರಣದ ವಿಷ ಹರಡತೊಡಗಿದೆ ಎಂಬುದು ನಿಜವಾದ ಅಪಾಯ.

- ಶರತ್



ಮುಂಬಾಯಿಯಲ್ಲಿ ಖ್ಯಾತ ಸಾಹಿತಿ ನಿರಂಜನರೊಂದಿಗೆ ಒಂದು ದಿನ

ಸುಪ್ರಸಿದ್ಧ ಬರಹಗಾರರಾಗಿದ್ದ ಕುಳುಕುಂದ ಶಿವರಾಯರ ಬಗ್ಗೆ 1947 ರಲ್ಲಿ ತಿಳಿಯಿತು. ಜನಶಕ್ತಿ ಪತ್ರಿಕೆಯ ಸಂಪಾದಕರಾಗಿ ಅವರು ಕೆಲಸ ಮಾಡುತ್ತಿದ್ದರು. ಆದರ ಮೊದಲಿನಿಂದಲೂ ಪತ್ರಿಕೆಗಳ ಲೇಖನಗಳನ್ನು ಬರೆಯುವ ಮೂಲಕ ಅವರು ಆಗಲೇ ಪ್ರಸಿದ್ಧಿಗೆ ಬರುತ್ತಿದ್ದರು. 'ಪ್ರಜಾಮತ', 'ಚಿತ್ರಗುಪ್ತ' 'ರಾಷ್ಟ್ರಬಂಧು' ಮೊದಲಾದ ವಾರಪತ್ರಿಕೆಗಳಲ್ಲಿ ಅವರ ಹರಿತವಾದ ಲೇಖನಿಗಳಿಂದ "ಸರೂ ಕೇಳಿದೆಯೊ" "ಬೇವಾರ್ಸಿ ಬರವಣಿಗೆ ಮತ್ತು ಮುಖ್ಯವಾಗಿ "ಸಾದನ ಸಂಚಯ" ಇತ್ಯಾದಿ ಲೇಖನಗಳ ಮೂಲಕವೂ ಅವರು ಪ್ರಸಿದ್ಧಿಗೆ ಬರುವಂತಾಗಿತ್ತು. ಅವರ ಕಾದಂಬರಿಗಳಾದ 'ವಿಮೋಚನೆ' 'ಬನಶಂಕರಿ' 'ಚಿರಸ್ಮರಣೆ' 'ಮಿಣುಕು ಹುಳ', 'ವಿಲಾಸಿನಿ' ಮೊದಲಾದ ಕಾದಂಬರಿಗಳನ್ನು ಪ್ರಕಟವಾದ ಕೂಡಲೇ ಪಡಕೊಂಡು ಓದಿದ್ದೆ. ಅವರು ಅನುವಾದಿಸಿದ "ತಾಯಿ" ನನ್ನ ಬಾಲ್ಯ ಜನತೆಯ ನಡುವೆ. ನನ್ನ ವಿಶ್ವವಿದ್ಯಾನಿಲಯ (ಮಾಕ್ಸಿಂ ಗಾರ್ಕಿಯವರು ಬರೆದ ಕಾದಂಬರಿಗಳು)ಗಳನ್ನು ಪಡಕೊಂಡು ಓದಿಯಾಗಿತ್ತು. ಜರ್ಮನಿಯಲ್ಲಿ ನಾಝಿಗಳಿಗೆ ಸೋಲಾದಾಗ ಅವರು ಪ್ರಜಾಮತದಲ್ಲಿ ಬರೆದ "ಸಾವಿರ ವರ್ಷ ಬಾಳಬೇಕಾದ ಮಹಾನಗರಿ ಬರ್ಲಿನ್" ಇಂಥ ಲೇಖನಗಳನ್ನು ಓದಿದ ನಂತರ ಅವರು ನನ್ನ ಅಚ್ಚು ಮೆಚ್ಚಿನ ಬರಹಗಾರರಾದರು.


ಭೂಗತ ಜೀವನದಲ್ಲಿ ಅವರು ಗುಪ್ತನಾಮದಲ್ಲಿ ಬರೆಯಲು ಪ್ರಾರಂಭಿಸಿದಾಗ 'ನಿರಂಜನ'ರಾದರು. ಮುಂಬಾಯಿಯಲ್ಲಿ "ಸಮದರ್ಶಿ" ಎಂಬ ಪತ್ರಿಕೆಯಲ್ಲಿ ಅವರ ಲೇಖನಗಳು, ಕಿರುಗತೆಗಳು ಪ್ರಕಟವಾದವು.

ಭೂಗತ ಜೀವನದ ನಂತರವೂ ಅವರು ಬಳಸುತ್ತಿದ್ದ ಗುಪ್ತನಾಮ 'ನಿರಂಜನ' ಎಂಬ ಹೆಸರಿನಿಂದಲೇ ಅವರು ಪ್ರಸಿದ್ಧಿಗೆ ಬಂದರು.

1951 ರಲ್ಲಿ ಒಂದು ದಿನ ಅವರು ಯಾವುದೋ ಕೆಲಸದ ನಿಮಿತ್ತ ಮುಂಬಾಯಿಗೆ ಬರುವ ವಿಚಾರ ಅವರ ಮುಂಬಯಿ ಮಿತ್ರರಾದ ಕೆ.ವಾಸುದೇವರಾವ್ ಅವರ ಮೂಲಕ ನನಗೆ ತಿಳಿಯಿತು. ನಾವು "ಪ್ರಗತಿಶೀಲ ಕನ್ನಡಿಗರ ಸಂಘ"ದವರು. ಅವರಿಗೆ ಸನ್ಮಾನವೇರ್ಪಡಿಸಲು ನಿರ್ಧರಿಸಿದೆವು. ನಾನು ಕಾರ್ಯದರ್ಶಿಯಾಗಿದ್ದು ಶ್ರೀ ತೇಜಪಾಲ ಬಂಗೇರರವರು ಅಧ್ಯಕ್ಷರಾಗಿರುವ ಹೆಸರಲ್ಲಿ ಕರಪತ್ರ ಮುದ್ರಿಸಿ ಪ್ರಚಾರ ನಡೆಸಿದೆವು. ಎಲ್ಲವನ್ನು ಅಚ್ಚುಕಟ್ಟಾಗಿ ನಿರ್ವಹಿಸಿದೆವು. ಕೆ.ವಾಸುದೇವರಾಯರಲ್ಲಿ ಚರ್ಚಿಸಿ ಕಾರ್ಯಕ್ರಮ ನಿರ್ಧರಿಸಲಾದ ನಂತರ ಮುಂಬಾಯಿಯಲ್ಲಿ ಕೋಟೆ ಪ್ರದೇಶದಲ್ಲಿರುವ ಫೋರ್ಟ್ ಪ್ರೈವೈಟ್ ಹೈಸ್ಕೂಲು ಹಾಲಿನಲ್ಲಿ ಸಮಾರಂಭ ಗೊತ್ತು ಮಾಡಲು ಕೆ.ವಾಸುದೇವರಾಯರಿಗೆ ಜವಾಬ್ದಾರಿ ನೀಡಿ ನಾವು ಪ್ರಚಾರದ ಜವಾಬ್ದಾರಿ ಹೊತ್ತು ಕೈಬರಹ ಪೋಸ್ಟರುಗಳೂ ಸೇರಿದಂತೆ ಎಲ್ಲಾ ರೀತಿಯ ಪ್ರಚಾರದ ಮೂಲಕವೂ ಪ್ರಯತ್ನ ನಡೆಸಿದೆವು.

(ಕಬಿಬ್‌ಬಾಯಿ ಹೈಸ್ಕೂಲು ವಾಸುದೇವ ರಾಯರಿಗೆ ಅದು ಮರೆತು ಹೋಯಿತೋ ಅಲ್ಲಿ ಅಷ್ಟು ದೊಡ್ಡ ರೀತಿಯ ಸಭೆ ಸೇರಲಿಕ್ಕಿಲ್ಲವೆಂದೂ ಅವರು ಕೆ.ವಿ.ರಾಯರು ಶಾಲೆಯಲ್ಲಿ ಮಾತನಾಡಿರಲಿಲ್ಲ. ಕೊನೆ ಗಳಿಗೆಯಲ್ಲಿ ನಾವೆಷ್ಟೇ ವಿನಂತಿಸಿದರೂ ಶಾಲೆ ದೊರೆಯದೆ ಹೋಯಿತು) ಜನರು ನೂರಾರು ಸಂಖ್ಯೆಯಲ್ಲಿ ಬಂದು ಸೇರತೊಡಗಿ ಸಾವಿರದವರೆಗೆ ಏರುತ್ತಾ ಹೋಯಿತು. ಅವರು ಜನರ ಮಧ್ಯೆ (ನಿರಂಜನ) ಬಹಳ ಪ್ರಸಿದ್ಧಿಗೆ ಬಂದಿದ್ದರು. ಇದನ್ನು ನಾವು ಅರ್ಥಮಾಡಿಕೊಂಡಿದ್ದೆವು. ಕೊನೆಯ ಭಾಗವಾಗಿ ಏನೂ ಮಾಡುವುದಕ್ಕಾಗದೆ ನಿರಾಶೆಯ ವಾತಾವರಣ ಕವಿಯಿತು. ಹೈಸ್ಕೂಲಿನ ಸಭಾಭವನ ಸಿಗುವುದಿಲ್ಲವೆಂದರಿತ ಜನರು ಬೇಸರ ಮತ್ತು ನಿರಾಶೆಯಲ್ಲಿ ಹಿಂತಿರುಗುವಂತಾಯಿತು. ಕೊನೆಗೊಂದು ಉಪಾಯ ಹೊಳೆಯಿತು. ನಿರಾಶೆಯ ಮಧ್ಯೆದಲ್ಲಿಯೂ ಕೊನೆಗೆ ಸಭೆಯನ್ನು ನಡೆಸಲು ನಿರ್ಧರಿಸಲಾಯಿತು. ಹತ್ತಿರದಲ್ಲಿ ಇರುವ 'ಕೂಠಾರಿ ಮ್ಯಾನ್ಸನ್' ಹೊಟೇಲ್ ಮಜ್ದೂರ್ ಸಭಾದ ಹಾಲಿನಲ್ಲಿ ಸಭೆ ನಡೆಸಿದೆವು. ಪ್ರಸಿದ್ಧ ವಕೀಲರಾದ ಟಿ.ಸಂಜೀವ ಹೆಗ್ಡೆ ಅಧ್ಯಕ್ಷತೆ ವಹಿಸಿದ್ದರು. 'ನಿರಂಜನ' ರವರು ಅವರ ಅತ್ಯಂತ ಉತ್ತಮವಾದ ಶೈಲಿಯಲ್ಲಿ ಭಾಷಣ ಪ್ರಾರಂಭಿಸಿ ಸುಮಾರು 2 ಗಂಟೆಯವರೆಗೆ ಮಾತನಾಡಿದರು. ಅಂದರೆ ರಾತ್ರಿ 9 ಗಂಟೆಯವರೆಗೆ ಸಭೆ ನಡೆಯಿತು. ಜನ ಮೆಚ್ಚಿಕೊಂಡರು. **ನಿರಂಜನರ ಜನಶಕ್ತಿ ಬರಹದ ಮೇಲೆ ಪತ್ರಿಕೆಯ ಮೇಲೆ ಮೊಕದ್ದಮೆ ಕರ್ನಾಟಕದಲ್ಲಿ ಹೂಡಲಾಗಿತ್ತು. ಇದಕ್ಕೆ ಹಣದ ಅಗತ್ಯವಿತ್ತು. ಇದನ್ನು ಮೊದಲೇ ತಿಳಿದಿದ್ದ ನಾವು ಅದೇ ಸಭೆಯಲ್ಲಿ ಸಂಗ್ರಹಕ್ಕೆ ಕರೆ ನೀಡಿದಾಗ ಸುಮಾರು 1000 ರೂ.ಗೂ ಮಿಕ್ಕಿ ಸಂಗ್ರಹ ಬಂತು.** ನಮ್ಮ ಕರೆ ಪರಿಣಾಮಕಾರಿಯಾಯಿತು.





ಡೇವಿಡ್ ಕರ್ಕಡ, ಉಡುಪಿ

'ನಿರಂಜನ' ಅವರು ಸಭೆ ಹಾಳಾದ ಬಗ್ಗೆ ಬೇಸರ ವ್ಯಕ್ತಪಡಿಸಿದರು. ಆದರೇ ನಂತರ ಚೇತರಿಸಿ ನಮ್ಮೆಲ್ಲರನ್ನು ಅಭಿನಂದಿಸಿದರು. ನಂತರ ಮರುದಿನ ನನ್ನನ್ನು ಮತ್ತೆ ಭೇಟಿಯಾಗಬಯಸಿದರು. ಬೆಳಿಗ್ಗೆ 10 ಗಂಟೆಗೆ ನಾನು 'ನಿರಂಜನ' ಉಳಿದುಕೊಂಡಿದ್ದ ಕೆ.ವಿ.ರಾಯರ 'ಡೊಭಿತಲಾವ್, ಗಿರಗಾಂವ್' ಮನೆಗೆ ಹೋದೆ. ನಿರಂಜನ ಆದರದಿಂದ ಬರಮಾಡಿಕೊಂಡರು. ತನ್ನ ಜತೆಯಲ್ಲಿ ಅಲ್ಲಿ ಊಟ ಮಾಡುವಂತೆ ಕೇಳಿಕೊಂಡರು.

ಊಟದ ನಂತರ ಹಿಂದಿನ ದಿನದ ಕಾರ್ಯಕ್ರಮದ ಬಗ್ಗೆ "ನಿರಂಜನರಿಗೆ ಮುಂಬಾಯಿಯಲ್ಲಿ ಸನ್ಮಾನ" ಎಂಬ ಶೀರ್ಷಿಕೆಯಲ್ಲಿ ಪತ್ರಿಕಾ ಪ್ರಕಟಣೆಗೆ ಸಿದ್ಧಪಡಿಸಿದ ವರದಿಯ ಪ್ರತಿಯನ್ನು ನೀಡಿ ಅದನ್ನು ಪ್ರತಿಗಳಲ್ಲಿ ತಯಾರಿಸಿ ಕರ್ನಾಟಕದ ಎಲ್ಲಾ ಪತ್ರಿಕೆಗಳವರಿಗೂ ಕಳುಹಿಸುವಂತೆ ತಿಳಿಸಿದರು. ಅದರಂತೆ ನಾನು ಕರ್ನಾಟಕದ ಎಲ್ಲಾ ಪತ್ರಿಕೆಗಳಿಗೂ ಕಳುಹಿಸಿದೆ. ಇದು ಎಲ್ಲಾ ಪತ್ರಿಕೆಗಳಲ್ಲಿ ಪ್ರಕಟವಾಯಿತು. ನನಗೊಂದು ದೀಕ್ಷೆಯನ್ನು ಕೊಟ್ಟರೆಂದರೂ ತಪ್ಪಾಗಲಾರದು. ಅಂದಿನವರೆಗೆ ಪತ್ರಿಕಾ ವರದಿ ಯನ್ನು ಹೇಗೆ ಬರೆಯಬೇಕೆಂದೇ ನನಗೂ ಗೊತ್ತಿರಲಿಲ್ಲ. ಅವರು ಕೆಲವು ವಿಚಾರಗಳನ್ನು ತಿಳಿಸಿ ನಿರಂತರವಾಗಿ ಪತ್ರಿಕೆಗಳಿಗೆ ವರದಿಯನ್ನು ಬರೆಯುವಂತೆಯೂ ತಿಳಿಸಿದರು. ಅವರು ನೀಡಿದ ತಿಳುವಳಿಕೆಯೊಂದಿಗೆ ನಮ್ಮದೇ ಪತ್ರಿಕೆಗಳಾದ "ಅರುಣ" ಮತ್ತು "ಜನಶಕ್ತಿ" ಪತ್ರಿಕೆಗಳಿಗೆ ಮುಂಬಾಯಿಯ ನಮ್ಮ ಪಕ್ಷದ ಚಟುವಟಿಕೆಗಳಲ್ಲಿ ಭಾಗವಹಿಸುತ್ತಾ ಅದರ ವರದಿಯನ್ನು ಕಳುಹಿಸತೊಡಗಿದೆ. ಇದು ಪತ್ರಿಕೆಗಳಲ್ಲಿ ನಿರಂತರವಾಗಿ ಬರತೊಡಗಿತು. ಇದರಿಂದ ನನಗೂ ತುಂಬಾ ಸಂತೋಷವಾಯಿತು. ನನ್ನನ್ನು ನೆನಪಿನಲ್ಲಿಟ್ಟು ನನಗೆ ಪತ್ರದ ಮೂಲಕ ಸಲಹೆಗಳನ್ನು ಹಲವು ಸಮಯದವರೆಗೆ ನೀಡುತ್ತಾ ಬಂದರು. ಇದರಿಂದಾಗಿ ನನ್ನ ತಿಳುವಳಿಕೆ ಹೆಚ್ಚಾಗಲು ಕಾರಣವಾಯಿತು. ನಿರಂಜನರ ಅಭಿಮಾನಿಗಳು ಮತ್ತೆ ನನಗೆ ಬಹಳಷ್ಟು ಮಂದಿ ಭೇಟಿಯಾದಾಗ ಅಭಿನಂದಿಸುತ್ತಿದ್ದರು. ಅವರ ಅಭಿಮಾನಿಗಳ ಬಳಗ ಬಹಳ ದೊಡ್ಡದಾಗಿತ್ತು. ಜನರ ಮನಸ್ಸಿನಲ್ಲಿ ಅವರಿಗೆ ಉನ್ನತವಾದ ಸ್ಥಾನವಿತ್ತು. ನವಕರ್ನಾಟಕದ "ವಿಶ್ವಕಥಾ ಕೋಶ" ಕೊನೆಯದಾಗಿ ಅವರ "ಮೃತ್ಯುಂಜಯ" ಕಾದಂಬರಿ ಅವರ ಮೇರು ಕೃತಿಗಳಾಗಿವೆ. ಇಂತಹ ಮಹಾನ್ ಸಾಹಿತಿಯೊಂದಿಗೆ ಕಳೆದ ಒಂದು ದಿನವೂ ಕೂಡಾ ನನ್ನ ನೆನಪಿನಲ್ಲಿ ಚಿರಕಾಲ ಉಳಿಯಲಿದೆ.

PRB DECR 319-79/79 AIKYARANGA WEEKLY Reg. No. 17015/64 CPM(G)/KA/BGS-119/2003-05

ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಜಿ.ಎನ್.ನಾಗರಾಜ್
ಸಂಪಾದಕರು: ಎಸ್.ವೈ.ಗುರುಶಾಂತ್ ಸಂಪಾದಕೀಯ ಕಛೇರಿ: ನಂ. 12, 18ನೇ ಅಡ್ಡ ರಸ್ತೆ, ಸಂಪಂಗಿರಾಮನಗರ, ಬೆಂಗಳೂರು-27 ಫೋನ್ ನಂ. 2236462.
ಮುದ್ರಣ: ಹಸಿ ಪ್ರಿಂಟರ್ಸ್, ಕ್ವೀನ್ ರಸ್ತೆ, ಬೆಂಗಳೂರು.

Printed & Published by Communist Party of India(Marxist), Karnataka State Committee. Editor: S.Y.GURUSHANTH